BROWEN BOOK ONLY

TIGHT BINDING BOOK

UNIVERSAL
LIBRARY

OU_200415

UNIVERSAL
LIBRARY

OUP—67—11-1-68—5,000.

**OSMANIA UNIVERSITY LIBRARY**

Call No. K83 K2159 Accession No. K 4962

Author

Title

This book should be returned on or before the date last marked below.

SANDHEHA SUNDARY

ಶ್ರೀ ಶೈಲ ಮಲ್ಲಿಕಾರ್ಜುನ ಪ್ರಸನ್ನ.

# ಸಂದೇಹ ಸುಂದರಿ

(ನೂತನ ಸಾಹಸ ಪತ್ತೇದಾರಿ ಕಾದಂಬರಿ)

ಸಂದೇಹ ಸುಂದರಿ

★

ಗೌತಮನ ಮೂವತ್ತೊಂಭತ್ತನೆಯ ಸಾಹಸ.

ಲೇಖಕರು :

ಶ್ರೀ. ಎನ್. ನರಸಿಂಹಯ್ಯ.

★

ಪ್ರಕಾಶಕರು

ಗೀತಾ ಪಬ್ಲಿಕೇಷನ್ಸ್.

ಪೇಟೆ : : ಬೆಂಗಳೂರು ೨.

ಪ್ರಥಮ ಮುದ್ರಣ [illegible] ನವಂಬರ್.

[ಎಲ್ಲಾ ವಿಧವಾದ ಹಕ್ಕು ಲೇಖಕನದು.]

ಬೆಲೆ ಹನ್ನೆರಡು ಆಣೆಗಳು.

Checked 1963

ಪೂರ್ಣ ಮಾರಾಟಗಾರರು

ಗೀತಾ ಏಜನ್ಸೀಸ್

ಸೌರಾಷ್ಟ್ರಪೇಟೆ : : ಬೆಂಗಳೂರು ೨.

ಮುದ್ರಕರು

ಮೋಹನ್ ಪ್ರೆಸ್

ಎಫ್. ೨೮. ಓ. ಟಿ. ಸಿ. ರೋಡ್, ಬೆಂಗಳೂರು ೨.

# ಲೇಖಕನ ಮಾತು.

Checked 1965

ಕಾದಂಬರಿಯ ಕಥಾನಕವು ಮುನ್ನೂರು ಪುಟಗಳನ್ನು ಮೀರಿದುದರ
ುರಡು ಭಾಗಗಳನ್ನಾಗಿ ವಿಂಗಡಿಸಬೇಕಾಯಿತು.

ರ್ ಬಾಲಕೃಷ್ಣನಿಗೆ ಕಾಗದ ಬರೆದು ಹಣ ತರಿಸಿಕೊಳ್ಳುತ್ತಿದ್ದ ವ್ಯಕ್ತಿ
ಪತ್ತೇದಾರ ಪುರುಷೋತ್ತಮನಿಂದ ಹಿಡಿಯಲ್ಪಟ್ಟ ಬಗೆ ಹೇಗೆ?
ರಿಣಾಮವನ್ನು "**ಸಂಶಯ ಸುಂದರಿ**" ಎಂಬ ಕಾದಂಬರಿಯಲ್ಲಿ
. ಶೀಘ್ರದಲ್ಲಿಯೇ ಆ ಕಾದಂಬರಿಯು ಓದುಗರ ಕೈಸೇರಲಿದೆ.

ಾದಂಬರಿಯನ್ನು ನನ್ನಿಂದ ಬರೆಯಿಸಿ, ಪ್ರಕಾಶಪಡಿಸಿ, ಕನ್ನಡ
ಗರಿಗೆ ಅರ್ಪಿಸಿದ ಕೀರ್ತಿಯು ಎಲೆ ಮರೆಯ ಕಾಯಂತಿದ್ದು ಸಾಹಿತ್ಯ
ುವ ಗೀತಾ ಪಬ್ಲಿಕೇಷನ್ಸ್ ಒಡೆಯರಿಗೆ ಸಲ್ಲುತ್ತದೆ.

ಮುಂದೆಯೂ ಉತ್ತಮೋತ್ತಮ ಕಾದಂಬರಿಗಳನ್ನು ಪ್ರಕಾಶಕರು
ರ್ಸಲು ಮತ್ತು ಸಾಹಿತ್ಯಾಭಿವೃದ್ಧಿಗೆ ನಿರಂತರವೂ ಶ್ರಮಿಸುತ್ತಿರುವ
ಸ್ಯಮವು ಯಶಸ್ವಿಯಾಗಿ ಪ್ರಕಾಶನದ ಕಾರ್ಯವು ಚಿರಾಯುವಾಗ
ೈಸುವೆನು.

ಾದಂಬರಿಯ ಹಸ್ತಪ್ರತಿಯನ್ನು ಓದಿ ತಪ್ಪೋಲೆಗಳನ್ನು ತಿದ್ದಿ ಸರಿಪಡಿ
ರ್. ಶ್ರೀನಿವಾಸಮೂರ್ತಿಯವರಿಗೆ ನನ್ನ ಹೃತ್ಪೂರ್ವಕ ವಂದನೆಗಳು

ಾದಂಬರಿಯನ್ನು ಅಂದವಾಗಿ ಸರ್ವರ ಮನವೊಪ್ಪುವಂತೆ ಮುದ್ರಿಸಿದ
ಪ್ರೆಸ್ ಶ್ರೀ. ಓ. ವಿ. ಗುಪ್ತರವರಿಗೂ, ಹೆಚ್ಚಿನ ಶ್ರದ್ಧೆವಹಿಸಿ **ಕೆಲಸ**
ಟ್ಟ ಪ್ರೆಸ್ಸಿನ ಬಳಗವೃಂದಕ್ಕೂ ನನ್ನ ನೆನಕೆಗಳು.

## 'ಓದುಗರೊಡನೆ ಒಂದು ನಿಮಿಷ'

ಮುಂದೆ ಬರಲಿರುವ ಕಾದಂಬರಿಗಳಲ್ಲಿ ನನ್ನ ಫೋಟೋವನ್ನು ಬೇಕೆಂದು ಮಾನ್ಯ ಓದುಗರಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಾಗದ, ಪ ಬಂದಿವೆ.

ಸಾಹಿತ್ಯರಂಗದ ಪರದೆಯ ಹಿನ್ನಲೆಯಲ್ಲಿಯೇ ಇದ್ದು ಸಾಹಿ ಮಾಡಬೇಕೆಂಬ ಅಭಿಲಾಷೆಯು ನನ್ನ ಮನದಲ್ಲಿರುವುದರಿಂದಲೂ, ನನ್ನ ಮಾನ್ಯ ಮಿತ್ರರ ಸಲಹೆಯಂತೆಯೂ ಯಾವ ಕಾದಂಬರಿಯಲ್ಲಿಯೇ ಆಗಲಿ ಫೋಟೋವನ್ನು ಹಾಕಿಸಲು ಸಾಧ್ಯವಾಗದೆಂದು ಈ ಮೂಲಕ ತಿಳಿಯಪ ವೆನು. ನನ್ನ ಪರಿಚಯವನ್ನು ಬಯಸಿ ಫೋಟೋವನ್ನಪೇಕ್ಷಿಸಿದ ಓದುಗರಿಗೆ ನನ್ನ ಅನಂತ ಧನ್ಯವಾದಗಳು ಸಲ್ಲಿವೆಯೆಂದು ಹರ್ಷದಿಂದ ಹೇಳ

---

ವಿ. ಸೂ.—ನೇರವಾಗಿ ನನ್ನಿಂದ ಉತ್ತರವನ್ನು ಬಯಸುವವರು ಕಾರ್ಡ್, ತಪ್ಪಿದರೆ ಎರಡು ಆಣೆ ಅಂಚೆ ಸ್ಟಾಂಪಿನೊಂದಿಗೆ ಕಾಗದ ಕೂಡಲೇ ಉತ್ತರ ಬರೆಯುವೆನು. ಈಗಾಗಲೇ ನೂರಾರು ಕಾಗದ ಪ ಬಂದಿವೆ. ಯಾರ ಕಾಗದಕ್ಕೂ ಉತ್ತರ ಬರೆದಿಲ್ಲ. ಓದುಗರು ಈ ವಿಷ ನನ್ನನ್ನು ಕ್ಷಮಿಸುವರೆಂದು ನಂಬಿರುವೆನು.

J, ೨೨. ಮಲ್ಲಿಕಾರ್ಜುನ ಗುಡಿಬೀದಿ, ಬೆಂಗಳೂರು ೨.

ಲೇಖಕ
ಎಲ್. ನರಸಿಂಹ

# ಪ್ರಕಾಶಕರ ನುಡಿ

ಕಾದಂಬರಿಯು ನಮ್ಮ ಮಾಲೆಯ ನಾಲ್ಕನೆಯ ಕುಸುಮ. ನಮ್ಮ ಹಿಂದಿನ ಮೂರು ಕಾದಂಬರಿಗಳಂತೆಯೇ ಈ ಕಾದಂಬರಿಯೂ ಉದಾರ ಹೃದಯ ರಾದ ಕನ್ನಡ ನಾಡಿನ ಓದುಗರಿಂದ ಸ್ವೀಕೃತವಾದರೆ ಪ್ರಕಾಶನದ ಶ್ರಮವು ಸಾರ್ಥಕವಾದಂತೆಯೇ.

ಬಹುಜನಪ್ರಿಯವಾದ ಈ ಕಾದಂಬರಿಯನ್ನು ರಚಿಸಿತ್ತ ಕನ್ನಡನಾಡಿನ ವಾಚಕಕೋಟಿಗೆ ಚಿರಪರಿಚಿತರಾದ ಶ್ರೀ. ಎಚ್. ನರಸಿಂಹಯ್ಯನವರಿಗೆ ಪ್ರಕಾಶನವು ಋಣಿ.

ಅಂತೆಯೇ ನಮ್ಮ ಪ್ರಕಾಶನದ ಮೇಲ್ಮೆಗೆ ಸಹಕಾರ ನೀಡುತ್ತಿರುವ ಶ್ರೀ. ಓ. ವಿ. ಗುಪ್ತರವರಿಗೂ ಧನ್ಯವಾದಗಳು ಸಲ್ಲಿವೆ.

—ಪ್ರಕಾಶಕರು.

## ಮುಂದಿನ ಪ್ರಕಟಣೆಗಳು

★★★

ಎ. ನರಸಿಂಹಯ್ಯ ವಿರಚಿತ.

# ಶಿಖಂಡಿ-ಶಿಖಾಮಣಿ
# ಸಂಶಯ ಸುಂದರಿ

(ಈ ಕಾದಂಬರಿಯ ಉತ್ತರಾರ್ಧ)

# ಚಿಂತಾಮಣಿ ಚಿಲುಕ

(ಗಿಣಿ)

ಎಂ. ರಾಮಮೂರ್ತಿಯವರ

# ಇಬ್ಬರು ಗೆಳೆಯರು

ಬಿ. ಕೆ. ಸುಂದರರಾಜ್‌ರವರ

## ಹೋಟೆಲ್ ಮದೀನಾ

---

ಗೀತಾ ಪಬ್ಲಿಕೇಷನ್ಸ್

ಬೆಂಗಳೂರು ೨.

# ನಮ್ಮ ಪ್ರಕಾಶನದ ಹಿಂದಿನ ಪ್ರಕಟಣೆಗಳು

ಎನ್. ನರಸಿಂಹಯ್ಯ ವಿರಚಿತ.

## "ಮಾಟಗಾರ ಮಾಯಣ್ಣ"

## "ರಾಣೀವಾಸದ ರಹಸ್ಯ"

ಬಿ. ಕೆ. ಸುಂದರರಾಜ್‌ರವರ

## "ಮೋಡಂ ಗಿರಿಜ"

ಪ್ರತಿ ಕಾದಂಬರಿಯ ಬೆಲೆ ಹನ್ನೆರಡು ಆಣೆಗಳು.

ಮಾರಾಟಗಾರರು — ಗೀತಾ ಏಜನ್ಸೀಸ್

# ನಮ್ಮ ಪೂರ್ಣ ಮಾರಾಟದ ಕಾದಂಬರಿಗಳು

**ಪತ್ತೇದಾರಿ**

| | | | |
|---|---|---|---|
| 1. | ಸಾವಿನ ಸೋಲು | (ಎನ್. ನರಸಿಂಹಯ್ಯ) | 1-0-0 |

**ಸಾಮಾಜಿಕ**

| | | | |
|---|---|---|---|
| 2. | ಅವಳವನು | (ಎಂ. ರಾಮಮೂರ್ತಿ) | 1-8-0 |
| 3. | ಗರ್ಭದಿಂದ ಗೋರಿಗೆ | (ಸ್ವಪ್ನಜೀವಿ) | 0-9-0 |
| 4. | ಅವನ ಹೆಂಡತಿ | (ಮಾಲತಿ) | 0-6-0 |
| 5. | ಗುರು ಹಾಕಿಕೊಟ್ಟ ಮೇಲ್ಪಂಕ್ತಿ | (ಬೊಕ್ಯಾಷಿಯೊ) | 0-6-0 |
| 6. | ಕುಲಗೆಟ್ಟರೂ ಕಳಂಕಿಣಿಯಲ್ಲ | (—"—"—) | 0-6-0 |

ವಿವರಗಳಿಗೆ :

## ಗೀತಾ ಏಜನ್ಸೀಸ್.

ಸೌರಾಷ್ಟ್ರಪೇಟೆ — ಬೆಂಗಳೂರು ೨.

ನಿರೀಕ್ಷಿಸಿ ! ನಿರೀಕ್ಷಿಸಿ !!

## ಓದಲು ಮರೆಯದಿರಿ

ಈವರೆವಿಗೆ ಕಂಡು, ಕೇಳಿ, ಅರಿಯದ ಪತ್ತೇದಾರಿಕೆಯ ಇತಿಹಾಸ ದಲ್ಲಿಯೇ ನೂತನ ಚಮತ್ಕಾರ ಪ್ರಯೋಗ.

# "ಮೃತ್ಯುವಿನೊಡನೆ ಹೋರಾಟ"

**ಅತ್ಯದ್ಭುತ ಸೋಜಿಗ ಪತ್ತೇದಾರಿ ಕಾದಂಬರಿ**

ಲೇಖಕರು :

**ಎಗ್. ನರಸಿಂಹಯ್ಯ.**

**ಆಕರ್ಷಕ ಮುಖಚಿತ್ರ**

ಬೆಲೆ ೧-೮-೦ ಟ. ಹಾ. ಪ್ರತ್ಯೇಕ

ಪ್ರಕಾಶಕರು

## ಆರೂಢ ಪ್ರಕಾಶನ

ಬೆಂಗಳೂರು ೨.

ಶ್ರೀ ಶೈಲ ಮಲ್ಲಿಕಾರ್ಜುನ ಪ್ರಸನ್ನ.

# ಸಂದೇಹ ಸುಂದರಿ

## ಪತ್ತೇದಾರಿ ಕಾದಂಬರಿ.

### ೧

ಡಾಕ್ಟರ್ ಬಾಲಕೃಷ್ಣನು ತನ್ನ ಬಂಗಲೆಯ ವಿಶ್ರಾಂತಿಗೃಹದಲ್ಲಿ ಕುಳಿತುಕೊಂಡು ವೈದ್ಯಕೀಯಕ್ಕೆ ಸಂಬಂಧಿಸಿದ ಇಂಗ್ಲೀಷ್ ಪುಸ್ತಕವನ್ನು ಓದುತ್ತಿರಲು, ಟಪಾಲಿನವನು ಪ್ರವೇಶಿಸಿ ಒಂದು ಕವರನ್ನಿತ್ತು ಹೊರಟುಹೋದನು.

ಬಾಲಕೃಷ್ಣನು ಆ ಕವರನ್ನು ಹರಿಯುವ ಮೊದಲು ಟಪಾಲು ಮುದ್ರೆಯನ್ನು ನೋಡಲು ಅದು ಕಾಂಚೀನಗರದಿಂದಲೇ ಬಂದುದಾಗಿತ್ತು.

ವಿಸ್ಮಿತನಾದ ಬಾಲಕೃಷ್ಣನು 'ಈ ನಗರದಿಂದ ನನಗೆ ಕಾಗದವನ್ನು ಬರೆದವರಾರಿರಬಹುದು ? ಹಾಗೆ ಬರೆಯುವ ಅವರ ಉದ್ದೇಶವೇನು ? ಏನು ವಿಷಯವನ್ನು ಬರೆದಿರಬಹುದು ?' ಎಂದು ಯೋಚಿಸಿದನು ಯಾವುದೂ ಬಗೆ ಹರಿಯಲಿಲ್ಲ.

ಅದರ ವಿಷಯವನ್ನರಿಯುವ ಕುತೂಹಲವುಳ್ಳವನಾಗಿ ಕವರನ್ನು ಹರಿದು ಒಳಗಡೆಯಿದ್ದ ಕಾಗದವನ್ನು ತೆಗೆದು ನೋಡಲು ಆ ಕಾಗದದಲ್ಲಿ ಈ ರೀತಿ ಬರೆದಿತ್ತು.

'ಬಾಲಕೃಷ್ಣ ! ನೀನು ನನ್ನನ್ನು ಅರಿತಿರುವೆ, ನಾನೂ ನಿನ್ನನ್ನು ಅರಿತಿರುವೆನು. ಆದರೂ ನೀನು ನಾನಾರೆಂಬುದನ್ನು ಕಂಡು ಹಿಡಿಯಲಾರೆ.'

'ಈ ಕಾಗದವನ್ನು ಓದಿ ನಿನಗೆ ಆಶ್ಚರ್ಯವಾಗಬಹುದು. ಅದಿರಲಿ!

ಯಾರು ಬರೆದವರೆಂದು ಪತ್ತೇ ಮಾಡುವ ಸಾಹಸಕ್ಕೆ ಮಾತ್ರ ಹೋಗ ಬೇಡ. ಹಾಗೇನಾದರೂ ಪ್ರಯತ್ನ ಪಟ್ಟೆಯಾದರೆ ನಿನಗೆ ಸಾವು ಖಂಡಿತಾ,'

'ಈ ಕಾಗದವನ್ನು ಬರೆದ ಕಾರಣವನ್ನು ವಿವರವಾಗಿ ಬರೆದಿರುವೆನು. ನಿಧಾನವಾಗಿ ಓದು. ಆತುರ ಪಡಬೇಡ.'

'ನೀನು ಈ ದಿನ ರಾತ್ರಿ ಹನ್ನೆರಡು ಘಂಟೆಗೆ ಈ ನಗರದ ಈಶಾನ್ಯ ದಿಕ್ಕಿನಲ್ಲಿರುವ ಜೋಗೀ ಕಣಿವೆಯ ಸಮೀಪದಲ್ಲಿರುವ ಐದನೆಯ ಮೈಲಿ ಕಲ್ಲಿನ ಬಳಿಗೆ ಐದುಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಕಾರಿನಲ್ಲಿ ನೀನೊಬ್ಬನೇ ಬರಬೇಕು. ಜೊತೆಯಲ್ಲಿ ಯಾರನ್ನೂ ಕರೆದುಕೊಂಡು ಬರಬಾರದು. ಕಾರನ್ನು ಐದನೇ ಮೈಲಿ ಕಲ್ಲಿನ ಬಳಿಯಲ್ಲಿ ನಿಲ್ಲಿಸಿ, ಐದುಸಾವಿರ ರೂಪಾಯಿಗಳ ಚೀಲವನ್ನು ಕೋಟಿನ ಹೊರಗಡೆಯ ಜೇಬಿನಲ್ಲಿಟ್ಟು ಕೊಂಡು ಎರಡು ಕೈಗಳನ್ನು ಮೇಲಕ್ಕೆತ್ತಿಕೊಂಡು, ರಸ್ತೆಯ ಎಡಭಾಗ ದಲ್ಲಿರುವ ಕಾಳಿಕಾ ದೇವಾಲಯದ ಬಳಿಗೆ ಬರಬೇಕು.'

'ದೇವಾಲಯದ ಸಮೀಪಕ್ಕೆ ಬರುತ್ತಲೇ ಕೆಂಪು ಲೈಟು ಕಾಣಿಸಿಕೊಳ್ಳುತ್ತದೆ. ಆಗ ನೀನು ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಹಾಗೇ ನಿಲ್ಲಬೇಕು. ನಾನು ನಿನ್ನ ಬಳಿಗೆ ಬಂದು ನಿನ್ನ ಜೇಬಿನಲ್ಲಿರುವ ಹಣವನ್ನು ತೆಗೆದುಕೊಳ್ಳುವೆನು.'

'ನೀನು ಕೂಡಲೇ ಹಿಂದಿರುಗಬಾರದು. ಕೆಂಪು ಲೈಟು ಎಲ್ಲಿ ಕಾಣಿಸಿ ಕೊಳ್ಳುವುದೋ, ಅಲ್ಲಿಂದಲೇ ಹಸುರು ಲೈಟು ಕಾಣುವುದು. ಆಗ ನೀನು ಹಾಗೇ ಕೈಗಳನ್ನು ಮೇಲಕ್ಕೆ ಎತ್ತಿಕೊಂಡೇ ಕಾರಿನ ಬಳಿಗೆ ಹೋಗಬೇಕು. ಅನಂತರ ನಿನ್ನ ಕಾರಿನಲ್ಲಿ ಕುಳಿತು ನಗರಕ್ಕೆ ನೀನು ಹಿಂದಿರುಗಬಹುದು.'

'ನಿನ್ನ ಜೊತೆಯಲ್ಲಿ ಯಾವ ವಿಧವಾದ ಆಯುಧವನ್ನೂ ತರಬಾರದು. ಹಾಗೊಂದುವೇಳೆ ತಂದೆಯಾದರೆ ನಿನ್ನ ಪರಿಣಾಮವು ಒಳ್ಳೆಯದಾಗ ಲಾರದು. ತಿಳಿದಿರು.'

'ಈ ನಿಯಮಗಳಿಗೆ ನೀನು ವ್ಯತಿರಿಕ್ತವಾಗಿ ನಡೆದರೆ ಮತ್ತು ಹಣವನ್ನು ತಂದುಕೊಡದೆ ಮುಂದೆ ಏನಾಗುತ್ತೆಂಬುದನ್ನು ನೀನೇ ಅನುಭವಿಸಿ ನೋಡುವೆ, ಅದನ್ನು ಈಗ ಬರೆದು ಫಲವಿಲ್ಲ.'

# ೧

ರಾಜನಗರದ ವಿಶ್ವೇಶ್ವರಯ್ಯನವರು ಶ್ರೀಮಂತ ವರ್ಗಕ್ಕೆ ಸೇರಿದವ ರಾಗಿದ್ದರು.

ಅವರ ಅಂತಸ್ತು, ಘನತೆ, ಗಾಂಭೀರ್ಯಕ್ಕೆ ಸರ್ವರೂ ತಲೆ ದೂಗುತ್ತಿದ್ದರು. ಅವರ ಪತ್ನಿಯಾದ ಮುನಿವೆಂಕಟಮ್ಮನು ಪತಿಗೆ ಸರ್ವವಿಧದಲ್ಲಿಯೂ ಅನುಕೂಲಳಾಗಿದ್ದಳು.

ವಿಶ್ವೇಶ್ವರಯ್ಯನವರು ತಮ್ಮ ಪತ್ನಿಯನ್ನು ಒಂದು ದಿನವಾದರೂ ಬೈದವರಲ್ಲ. ತಮ್ಮ ಪತ್ನಿಯನ್ನು ಯಾವ ಕಾರಣಕ್ಕಾದರೂ ಹೀಯಾಳಿಸುತ್ತಿರಲಿಲ್ಲ. ಒಳ್ಳೆಯ ಮಾತಿನಲ್ಲೇ ಆಕೆಗೆ ಬುದ್ಧಿಯನ್ನು ಹೇಳಿ ಆಕೆಯನ್ನು ಸದ್ಗೃಹಿಣಿಯನ್ನಾಗಿ ಮಾಡಿಕೊಂಡಿದ್ದರು.

ಸತಿಪತಿಗಳ ಅನ್ಯೋನ್ಯ ಪ್ರೇಮವನ್ನು ನೋಡಿದ ಇತರರು ಅವರನ್ನು ಲಕ್ಷ್ಮೀ ನಾರಾಯಣರೆಂದು ಹೊಗಳುತ್ತಿದ್ದರು.

ಅವರಿಗೆ ಬಾಲಕೃಷ್ಣ, ಸರೋಜಿನಿ, ಸರಸ್ವತಿಬಾಯಿಯೆಂಬ ಮೂವರು ಮಕ್ಕಳಿದ್ದರು.

ಬಾಲಕೃಷ್ಣನು ಎಂ.ಬಿ.ಬಿ.ಎಸ್. ಪಾಸ್ ಮಾಡಿದ್ದನು. ಹಲವಾರು ಜನ ಬಂಧುಗಳು ತಮ್ಮ ಕನ್ಯೆಯರನ್ನು ಕೊಡಲು ಮುಂದೆ ಬಂದರೂ ತನಗನುರೂಪಳಾದ ಕನ್ಯೆಯು ಸಿಗದ ಪ್ರಯುಕ್ತ ಅವನು ವಿವಾಹವಾಗಲಿಲ್ಲ.

ಸರೋಜಿನಿ, ಸರಸ್ವತಿಬಾಯಿಯರು ಕೇವಲ ಎಸ್. ಎಸ್. ಎಲ್. ಸಿ. ಯವರೆವಿಗೆ ಓದಿ ಅಲ್ಲಿಗೇ ತಮ್ಮ ವಿಧ್ಯಾಭ್ಯಾಸವನ್ನು ನಿಲ್ಲಿಸಿಬಿಟ್ಟಿದ್ದರು.

ಹಿರಿಯಳಾದ ಸರೋಜಿನಿಯು ಪ್ರಾಪ್ತವಯಸ್ಸಿಗೆ ಬಂದುದರಿಂದ ಆ ನಗರದ

ವಕೀಲ ವಾಮನರಾಯನಿಗಿತ್ತು ಅತ್ಯಂತ ವೈಭವದಿಂದ ವಿವಾಹವನ್ನು ಮಾಡಿದರು.

ಮಗನಿಗೂ, ಸರಸ್ವತಿಬಾಯಿಗೂ ಒಟ್ಟಿಗೇ ವಿವಾಹವನ್ನು ಮಾಡಬೇಕೆಂದು ಅವರು ಬಯಸಿದ್ದರು.

ಸರಸ್ವತಿಯು ಆ ನಗರದಲ್ಲಿದ್ದ ವೈಕುಂಠ ಪ್ರೆಸ್ಸಿನ ಮೇನೇಜರ್ ಜಗನ್ನಾಥ ನನ್ನು ಪ್ರೇಮಿಸಿದ್ದಳು. ಆತನೂ ಆಕೆಯನ್ನು ಪ್ರೇಮಿಸಿದ್ದನು.

ಅವರಿಗೆ ಪರಸ್ಪರ ಒಪ್ಪಿಗೆ ಯಿದ್ದರೂ ಜಗನ್ನಾಥನಿಗೆ ತಮ್ಮ ಮಗಳನ್ನು ಕೊಡಲು ವಿಶ್ವೇಶ್ವರಯ್ಯನವರು ಒಪ್ಪಲಿಲ್ಲ. ಕಾರಣ, ಜಗನ್ನಾಥನು ಕುಡುಕ, ಅದರಮೇಲೆ ಜೂಜುಕೋರ. ಅದೂ ಸಾಲದೆ ಸಟ್ಟಾ ಆಡುವ ಹವ್ಯಾಸವೂ ಅವನಲ್ಲಿದ್ದಿತು. ಈ ದುರ್ಗುಣಗಳಿದ್ದುದರಿಂದ ಆತನಿಗೆ ಸರಸ್ವತಿಯನ್ನು ಕೊಡಲು ವಿಶ್ವೇಶ್ವರಯ್ಯನವರು ನಿರಾಕರಿಸಿದ್ದರು.

ಜಗನ್ನಾಥನು ಇಪ್ಪತ್ತೈದು ವರ್ಷದ ಸುಂದರ ತರುಣನಾಗಿ ಯುವತಿಯರ ಮನಸ್ಸನ್ನು ಆಕರ್ಷಿಸುವಂತಿದ್ದರೂ ಅವನಲ್ಲಿರುವ ದುರ್ಗುಣಗಳಿಗಾಗಿ ಯಾರೂ ಆತನಿಗೆ ಕನ್ಯೆಯನ್ನು ಕೊಡಲು ಮುಂದೆ ಬರಲಿಲ್ಲ.

ಜಗನ್ನಾಥನು ಸರಸ್ಯತಿಯ ರೂಪಸೌಂದರ್ಯಕ್ಕೆ ಮರುಳಾಗಿ ಆಕೆಯಲ್ಲಿ ಮೋಹಿತನಾಗಿದ್ದುದರಿಂದ, ವಿಶ್ವೇಶ್ವರಯ್ಯನವರು ತಿರಸ್ಕರಿಸಿದರೂ ನಿರಾಶನಾಗದೆ ಆಕೆಯ ವಿನಃ ಬೇರೆ ಯಾರನ್ನೂ ವಿವಾಹವಾಗಲಾರೆನೆಂದು ಪ್ರತಿಜ್ಞೆ ಮಾಡಿದ್ದನು.

ಸರಸ್ವತಿಯೂ ಸಹ ಅದೇರೀತಿ ಜಗನ್ನಾಥನ ವಿನಃ ಬೇರೆ ಯಾರನ್ನೂ ವರಿಸಲಾರೆನು. ಹಾಗೊಂದುವೇಳೆ ನನ್ನ ಮನೋಭಿಲಾಷೆಯು ನೆರವೇರದೆ ಹೋದರೆ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಧೃಡಪಡಿಸಿಕೊಂಡಿದ್ದಳು.

ಆ ಕಾಲದಲ್ಲಿ ಅವರ ಮನೋಭಿಲಾಷೆಯು ಈಡೇರುವ ಸ್ಥಿತಿಯಲ್ಲಿರಲಿಲ್ಲ. ಅವರವರ ಬಳಿಯಲ್ಲಿಯೇ ಉಳಿದುಕೊಂಡಿದ್ದುವು.

ವಿಶ್ವೇಶ್ವರಯ್ಯನವರು ಬೇರೆ ಕಡೆ ವರನನ್ನು ಕರೆತಂದಿದ್ದರೂ ಸರಸ್ವತಿಯು ಅವರಾರನ್ನೂ ವಿವಾಹವಾಗಲಿಚ್ಛಿಸಲಿಲ್ಲ.

ಕಾಲಪರಿಸ್ಥಿತಿಯು ಹೀಗಿರಲು ಕಾಲರಾ ರೋಗವು ರಾಜನಗರದಲ್ಲಿ ಕಾಣಿಸಿ ಕೊಂಡು ಎಲ್ಲಾ ಕಡೆಗಳಲ್ಲಿಯೂ ಹರಡಿತು.

ಆ ರೋಗಕ್ಕೆ ವಿಶ್ವೇಶ್ವರಯ್ಯನವರೂ, ಮುನಿವೆಂಕಟಮ್ಮನವರೂ ಬಲಿಯಾದರಲ್ಲದೆ, ವಾಮನರಾಯನನ್ನೂ ಅದು ಬಲಿ ತೆಗೆದುಕೊಂಡಿತು.

ಬಾಲಕೃಷ್ಣನು ಮನೆಯ ಮಾಲೀಕನಾದನು. ಸರೋಜಿನಿಯು ವಿಧವೆಯಾದಳು. ಆಕೆಗೆ ಇನ್ನೂ ಚಿಕ್ಕ ವಯಸ್ಸು. ಸುಂದರಿ. ಆದರೇ! ಆಕೆಯ ಭಾಗ್ಯದ ನಿಧಿಯನ್ನು ದೇವರು ಉಳಿಸಲಿಲ್ಲ. ಆಕೆಯ ಬಾಳಿನ ಬೇರೇ ಕತ್ತರಿಸಿ ಹೋಯಿತು.

ಆಕೆಗೆ ಬೇರೆ ಯಾರೂ ದಿಕ್ಕಿಲ್ಲದೆ ಹೋದದ್ದರಿಂದ ತೌರುಮನೆಯನ್ನು ಸೇರಿಕೊಳ್ಳಬೇಕಾಯಿತು.

ಬಾಲಕೃಷ್ಣನು ತಂದೆ, ತಾಯಿಯರು ಮೃತರಾದುದಕ್ಕಾಗಿ ಅಷ್ಟು ವ್ಯಸನಗೊಳ್ಳಲಿಲ್ಲ. ತನ್ನ ತಂಗಿಯ ದುರ್ವಿಧಿಗಾಗಿ ಮರುಗುತ್ತಿದ್ದನು. ಆಕೆಯ ಮುಖವನ್ನು ನೋಡಿದಾಗಲೆಲ್ಲಾ ವ್ಯಸನ ಪಡುತ್ತಿದ್ದನು. ಯಾರೊಬ್ಬರಿಗೂ ಆತನ ದುಃಖದ ಬೇಗೆಯು ತಿಳಿಯದು.

ಒಂದೊಂದುಸಾರಿ ಆಕೆಯ ವಿಷಯವಾಗಿ ಯೋಚಿಸುತ್ತಾ ಮತ್ತೊಬ್ಬ ಉತ್ತಮ ವರನನ್ನು ನೋಡಿ ಮದುವೆಯನ್ನು ಮಾಡಿ ಬಿಡಲೇ? ಎಂದು ಯೋಚಿಸುವನು. ಹಾಗೆ ಯೋಚಿಸುತ್ತಲೇ ಸಮಾಜದ ನೆನಪುಂಟಾಗಿ ಕುಸಿದು ಬೀಳುವನು.

ಸರೋಜಿನಿಯ ಮನಸ್ಸು ನೋಯಿಸಬಾರದೆಂದು ತಿಳಿದು ಮನೆಯ ಆಡಳಿತದ ಸಂಪೂರ್ಣ ಅಧಿಕಾರವನ್ನೇ ಆಕೆಗೆ ವಹಿಸಿಬಿಟ್ಟಿದ್ದನು.

ಸರೋಜಿನಿಯು ಬಿಡುವಿದ್ದಾಗಲೆಲ್ಲಾ ವೇದಾಂತ ಗ್ರಂಥಗಳನ್ನೂ, ಮಹನೀಯರ ಚರಿತ್ರೆಗಳನ್ನೂ, ಮತ್ತು ಇತರ ಪುರಾಣ, ಪುಣ್ಯಕಥೆಗಳನ್ನೂ ಓದುತ್ತಿದ್ದಳು.

ಆದರೂ ಅವಳ ಮನದ ಬೇಗೆಯು ಆಕೆಯ ಹೃದಯವನ್ನು ದಹಿಸುತ್ತಲೇ ಇತ್ತು. ತಾನು ಕಳೆದುಕೊಂಡ ಅತ್ಯಮೋಘವಾದ ವಸ್ತುವಿನ ನೆನಪಾದಾಗಲೆಲ್ಲಾ ಅನ್ನಾಹಾರಾದಿಗಳನ್ನು ಬಿಟ್ಟು ಕೊರಗುತ್ತಿದ್ದಳು. ಆ ಕಾಲದಲ್ಲಿ.

ಆಕೆಗೆ ಏನೋ ಒಂದು ಬಗೆಯಾದ ಚಿತ್ತಭ್ರಮಣೆಯಾದಂತೆ ಆಗುತ್ತಿತ್ತು. ಆಗ ಮನಸ್ಸಮಾಧಾನವಿಲ್ಲದೆ ಆಕೆಯು ದೇವರ ಮನೆಗೆ ಹೋಗಿ ಅಲ್ಲಿ ಕುಳಿತು "ದೇವಾ! ನನಗೆ ದಾಂಪತ್ಯ ಸುಖವಿಲ್ಲದಂತೆ ಮಾಡಿದೆ. ಕಳೆದುಹೋದ ಪತಿಗಾಗಿ

ನನ್ನ ಹೃದಯವು ಹೊಯ್ದಾಡಿ ಪರಿತಪಿಸುತ್ತಿದೆ. ನನ್ನ ಮನಸ್ಸು ಶಾಂತವಾಗಿರಿಸಿ ಇಂದ್ರಿಯಗಳು ಕೆರಳದಂತೆ ವರವನ್ನು ದಯಪಾಲಿಸು. ಸದಾ ನಿನ್ನ ನಾಮಾವಳಿಯನ್ನೇ ಜಪಿಸುತ್ತಿರುವಂತೆ ನನ್ನಮೇಲೆ ಕರುಣವಿಟ್ಟು ಮೈದೋರು, ದೇವಾ." ಎಂದು ಬೇಡಿಕೊಳ್ಳುತ್ತಾ ಕಣ್ಣೀರು ಸುರಿಸುತ್ತಿದ್ದಳು.

ಸರೋಜಿನಿಯನ್ನು ಮೋಹಿಸಿ, ಪ್ರೇಮಿಸಿದವರಲ್ಲಿ (ಆಕೆಯ ವಿವಾಹಕ್ಕೆ ಮೊದಲು) ಶೇಷಪ್ಪನೂ ಒಬ್ಬನಾಗಿದ್ದನು.

ಆತನು ಸರೋಜಿನಿಯನ್ನು ವಿವಾಹವಾಗಬಯಸಿ ತನ್ನ ತಂದೆ, ತಾಯಿಯರಲ್ಲಿ ತನ್ನ ಅಭಿಪ್ರಾಯವನ್ನು ತಿಳುಹಿಸಿ ಅವರನ್ನು ವಿಶ್ವೇಶ್ವರಯ್ಯನವರಲ್ಲಿಗೆ ಕನ್ಯಾರ್ಥಿಗಾಗಿಕಳುಹಿಸಿದ್ದಕ್ಕೆ ಅವರು ಒಪ್ಪಿರಲಿಲ್ಲ-

ಆದರೂ ಶೇಷಪ್ಪನಿಗೆ ಸರೋಜಿನಿಯ ಮೇಲಿನ ಹಂಬಲವು ತಪ್ಪಿರಲಿಲ್ಲ. ಯಾವ ರೀತಿಯಿಂದಲಾದರೂ ಆಕೆಯನ್ನು ತನ್ನವಳನ್ನಾಗಿ ಮಾಡಿಕೊಳ್ಳಬೇಕೆಂದು ಬಯಸುತ್ತಿದ್ದನು.

ಸರೋಜಿನಿಗೂ, ವಾಮನರಾಯನಿಗೂ ವಿವಾಹವಾದನಂತರ ಆಕೆಯ ಮೇಲಿನ ಹಂಬಲವನ್ನು ಅಲ್ಪಸ್ವಲ್ಪವಾಗಿ ತೊರೆದಿದ್ದನು.

ವಿಧಿಯು ವಾಮನರಾಯನನ್ನು ಕೊಂಡೊಯ್ದನಂತರ ಪುನಃ ಸರೋಜಿನಿಯ ಮೇಲೆ ಅವನಿಗೆ ಮೋಹವುಂಟಾಯಿತು. ವಿಧವಾ ವಿವಾಹವನ್ನಾದರೂ ಮಾಡಿಕೊಳ್ಳಲು ಪ್ರಯತ್ನ ಮಾಡದೇ ಬಿಡಬಾರದೆಂದು ನಿರ್ಧರಿಸಿಕೊಂಡನು.

ಈ ತನ್ನ ಪ್ರಯತ್ನಕ್ಕೆ ಬಾಲಕೃಷ್ಣ ಮತ್ತು ಸರೋಜಿನಿಯರ ಒಪ್ಪಿಗೆಯನ್ನು ಪಡೆಯಬೇಕೆಂದು ಬಯಸಿ ಬಾಲಕೃಷ್ಣನ ಸ್ನೇಹ ಮಾಡಿಕೊಂಡು ಯಾವುದಾದರೊಂದು ನೆವದಲ್ಲಿ ದಿನಕ್ಕೆ ಒಂದು ಸಾರಿಯಾದರೂ ಆತನ ಮನೆಗೆ ಬಂದು ಹೋಗಲು ಸದವಕಾಶವನ್ನು ಮಾಡಿಕೊಂಡಿದ್ದನು.

ಯಾವ ವೇಳೆಯಲ್ಲಿ ಬಂದರೂ ಆತನಿಗೆ ಸರೋಜಿನಿಯ ದರ್ಶನವಾಗುತ್ತಿರಲಿಲ್ಲ.

ಒಂದೊಂದು ಸಾರಿ ಬಾಲಕೃಷ್ಣನೊಡನೆ, ತನ್ನ ಅಭಿಪ್ರಾಯವನ್ನು ಕೇಳಿಬಿಡಲೇ ? ಎಂದು ಮನಸ್ಸಾಗುತ್ತಿತ್ತಾದರೂ ಅದರಿಂದ ಏನಾಗುವುದೋ, ಎಂಬ ಭೀತಿಯಿಂದ ತಟಸ್ಥನಾಗಿದ್ದನು.

ಶೇಷಪ್ಪನ ವಯಸ್ಸು ಇನ್ನೂ ಮೂವತ್ತು ಮೀರಿರಲಿಲ್ಲ. ವಯಸ್ಸಿಗೆ ತಕ್ಕಂತೆ ಶರೀರ. ಸುಂದರವಾದ ಮುಖ. ತಾನು ಸರೋಜಿನಿಯ ಮೇಲೆ ಮೋಹಗೊಂಡಿದ್ದುದರಿಂದ ಬೇರೆ ಯಾರನ್ನೂ ವಿವಾಹವಾಗಲು ಇಷ್ಟ ಪಟ್ಟಿರಲಿಲ್ಲ.

ಸರೋಜಿನಿಗೆ ವಿವಾಹವಾದನಂತರವೂ ಆತನು ಮದುವೆ ಮಾಡಿಕೊಳ್ಳಲು ಬೇಸರಗೊಂಡಿದ್ದನು.

ಶೇಷಪ್ಪನ ನಡವಳಿಕೆ, ವಯಸ್ಸು, ಗುಣಾದಿಗಳನ್ನು ನೋಡಿ ಈತನಿಗೆ ತನ್ನ ತಂಗಿ (ಸರೋಜಿನಿ) ಯನ್ನಿತ್ತು ವಿವಾಹ ಮಾಡಲೇ ಎಂದು ಬಾಲಕೃಷ್ಣನು ಯೋಚಿಸುತ್ತಿದ್ದನು. ಆತನು ಒಪ್ಪುವನೋ ಇಲ್ಲವೋ ಎಂಬ ಅನುಮಾನವೂ ಆ ಕಾಲದಲ್ಲಿ ಅವನ ಮನಸ್ಸಿನಲ್ಲಿ ಹುಟ್ಟುತ್ತಿತ್ತು.

ಮೇಲಾಗಿ ಸಮಾಜವೊಂದು ಈ ಕಾರ್ಯಕ್ಕೆ ಕಂಟಕಪ್ರಾಯವಾಗಿ ನಿಂತಿರುವುದರಿಂದ ಆ ವಿಷಯವಾಗಿ ಹಿಂದೆ, ಮುಂದೆ ನೋಡುತ್ತಿದ್ದನು.

ಅವನು ಶೇಷಪ್ಪನೊಡನೆ ಒಂದುಸಾರಿ ತನ್ನ ಅಭಿಪ್ರಾಯವನ್ನು ತಿಳಿಸಿದ್ದರೆ ಸಾಕಿತ್ತು ! ಯಾವ ಸಮಾಜದ ಗೊಡ್ಡು ಬೆದರಿಕೆಗಳಿಗೂ ಅಂಜದೆ ನಿರ್ಭೀತಿಯಿಂದ ಅವನು ಸರೋಜಿನಿಯನ್ನು ವಿವಾಹವಾಗುತ್ತಿದ್ದನು.

ಅವರವರ ಮೌನವೇ, ಈ ಕಾರ್ಯಕ್ಕೆ ಅಡ್ಡಿಯನ್ನು ತಂದೊಡ್ಡಿದ್ದಿತು.

ಹೀಗೇ ಕೆಲವು ತಿಂಗಳು ಕಳೆಯಿತು.

ಒಂಗ` ದಿನವಾದರೂ ಸರೋಜಿನಿಯು ಮನೆಯಿಂದ ಹೊರಗೇ ಬರುತ್ತಿರಲಿಲ್ಲ ...ಗೆ ಬರಬೇಕಾಗಿದ್ದರೆ ಸರಸ್ವತಿಯ ಸಂಗಡ ಬರುತ್ತಿದ್ದಳು.

ಈ ಮಧ್ಯೆ ಜಗನ್ನಾಥನೂ ಸರಸ್ವತಿಯನ್ನು ಹೇಗಾದರೂ ಪ್ರಯತ್ನ ಪಟ್ಟು ವಿವಾಹವಾಗಲು ಹಾತೊರೆಯುತ್ತಿದ್ದನು.

ಒಂದು ದಿನ ಬಾಲಕೃಷ್ಣನಿಲ್ಲದಾಗ ಆತನ ರೂಮಿನಲ್ಲಿ ಶೇಷಪ್ಪನು ಕುಳಿತಿದ್ದನು.

ಆ ರೂಮಿಗೆ ಅಕಸ್ಮಾತ್ತಾಗಿ ಸರೋಜಿನಿಯು ಬಂದಳು. ಆ ರೂಮಿನಲ್ಲಿ ತನ್ನ ಅಣ್ಣನಿರುವನೆಂದೇ ಅವಳು ಭಾವಿಸಿಕೊಂಡಿದ್ದಳು.

ಆ ರೂಮಿನೊಳಗೆ ಕಾಲಿಡುತ್ತಲೇ ಅಣ್ಣನ ಬದಲಾಗಿ ಶೇಷಪ್ಪನು ಕುಳಿತಿರುವುದನ್ನು ಕಂಡಳು.

ಯಾವುದೋ ಯೋಚನೆಯಲ್ಲಿ ತಲ್ಲೀನನಾಗಿದ್ದ ಶೇಷಪ್ಪನು ಬಾಲಕೃಷ್ಣನು ಬಂದನೆಂದನರಿತು ತಲೆಯೆತ್ತಿ ನೋಡಿದನು.

ನಾಲ್ಕು ಕಣ್ಣುಗಳು ಒಂದಾದುವು.

ಶೇಷಪ್ಪನು ಅವಾಕ್ಕಾಗಿ ಹೋದನು. ಯಾವ ರಮಣಿಗಾಗಿ ಹಗಲಿರುಳೆನ್ನದೆ ಪರಿತಪಿಸುತ್ತಿದ್ದನೋ ಆ ಮನೋರಮಣಿಯು ತನ್ನ ಎದುರಿಗೇ ನಿಂತಿರುವುದನ್ನು ಕಂಡನು. ತಾನು ಎಣಿಸಿದುದಕ್ಕಿಂತಲೂ, ಆಕೆಯು ಆಗ ಅತಿಶಯ ರೂಪವತಿಯಾಗಿ ಅವನ ಕಣ್ಣಿಗೆ ತೋರಿ ಬಂದಳು.

ಹಲವು ತಿಂಗಳಿಂದಲೂ ಪುರುಷರ ಮುಖಗಳನ್ನೇ ನೋಡದೆ ಇದ್ದ ಸರೋಜಿನಿಯು ಶೇಷಪ್ಪನ ಮುಖವನ್ನು ನೋಡಿದಳು.

ಅವನ ಮುಖವು ಹುಣ್ಣಿಮೆಯ ಚಂದ್ರನಂತೆ ತೋರಿತು. ಆ ಸುಂದರವಾದ ಮುಖವನ್ನು ನೋಡುತ್ತಲೇ ಆಕೆಯ ಮೈ ಜುಮ್ಮೆಂದಿತು.

ಮನ್ಮಥನ ಕುಸುಮ ಬಾಣಗಳು ಆಕೆಯ ದೇಹವನ್ನು ಪ್ರವೇಶಿಸಿದುವು. ಅವಳ ಸರ್ವಾಂಗವೆಲ್ಲವೂ ಅದುರಿ ಹೋದಂತಾಗಿ, ಆಕೆಯ ಬುದ್ಧಿಯು ಚಂಚಲವಾಯಿತು. ತನ್ನ ಮನಸ್ಸಿನ ಉದ್ರೇಕವನ್ನು ಬಿಗಿ ಹಿಡಿಯಲು ಅವಳು ಪಟ್ಟ ಸಾಹಸವೆಲ್ಲಾ ನೀರಿನಲ್ಲಿ ಹೋಮ ಮಾಡಿದಂತಾಯಿತು.

ಪತಿಯು ಗತಿಸಿದಲಾಗಾಯ್ತು ತಾನು ಪಠಿಸಿದ ಪುರಾಣ ಪುಣ್ಯ ಕಥೆಗಳೆಲ್ಲಾ ನೆನಪಿಗೆ ಬಾರದಂತಾಗಿ ಎಲ್ಲವೂ ವ್ಯರ್ಥವಾಯಿತು.

ನಿಂತ ಸ್ಥಳದಿಂದ ಕದಲಲು ಆಕೆಗೆ ಮನಸ್ಸು ಬರಲಿಲ್ಲ.

ಕಾಮಾಗ್ನಿಯ ಜ್ವಾಲೆಯು ಅವಳ ಶರೀರವಾದ್ಯಂತವನ್ನೂ ದಹಿಸುತ್ತಿರುವಾಗ ಇನ್ನು ಅವಳು ಹಿಂದಿರುಗುವುದಾದರೂ ಹೇಗೆ ?

ಶೇಷಪ್ಪನಿಗೆ ಬಹುದಿನಗಳ ತನ್ನ ಬಯಕೆಯು ಇಂದಿಗೆ ಫಲಿಸಬಹುದೆಂಬ ಭಾವನೆಯು, ಸರೋಜಿನಿಯು ತನ್ನ ಮುಖವನ್ನು ನೋಡುತ್ತಾ ಅಲ್ಲಿಯೇ ನಿಂತುಕೊಂಡು ವಿವಿಧವಾಗಿ ಮಾರ್ಪಾಟಾಗುತ್ತಿರುವುದರಿಂದ, ಕಂಡು ಬಂದಿತು.

'ಆಕೆಯನ್ನು ಈಗಲೇ ಬಿಗಿದಪ್ಪಿಕೊಳ್ಳಲೇ ?' ಎಂಬ ಉದ್ರೇಕವು ಶೇಷಪ್ಪನ ಮನದಲ್ಲಿಯೂ, 'ದೇವರೇ ಹಾಳು ಕೂಪಕ್ಕೆ ನಾನು ಬೀಳುತ್ತಿರುವೆನಲ್ಲಾ' ಎಂಬ ಭಾವನೆಯು ಸರೋಜಿನಿಯ ಮನದಲ್ಲಿಯೂ ಉದ್ಭವಿಸಿದುವು. ಅವಳ ವಿವೇಕವು ಸಡಿಲವಾಯಿತು.

ನಾಲ್ಕು ಕಣ್ಣುಗಳು ಒಂದಾಗಿಯೇ ಇದ್ದುವಲ್ಲದೆ ಬೇರೆ ಕಡೆಗೆ ಚಲಿಸಲಿಲ್ಲ.

ಬಹುದಿನಗಳಿಂದ ಸರ್ಪದಂತೆ ಕಾಯುತ್ತಿದ್ದ ಶೇಷಪ್ಪನ ಬಯಕೆಯು ಫಲಿಸುವ ಘಳಿಗೆಯು ಕೂಡಿ ಬಂದಿತು.

ಕಾಮಾಗ್ನಿಯ ಜ್ವಾಲೆಯನ್ನು ನೀತಿಯ ಬಂಧನದಿಂದ ಬಂಧಿಸಿಟ್ಟು ಕೊಂಡಿದ್ದ, ಸರೋಜಿನಿಯ ಕಾಮವು ಶೇಷಪ್ಪನ ಮುಖವನ್ನು ನೋಡುತ್ತಲೇ ಮತ್ತಷ್ಟು ಪ್ರಬಲವಾಗಿ ಪ್ರಜ್ವಲಿಸಿತು.

ಅದನ್ನು ತಡೆದುಕೊಳ್ಳಲು ಅಸಮರ್ಥಳಾದ ಆಕೆಯ ಸುಪ್ತ ಚೇತನಾ ವಸ್ತುಗಳು ಸಡಿಲವಾದುವು.

ಚಿಂತಾರೇಖೆಗಳಿಂದ ಕೂಡಿದ್ದ ಆಕೆಯ ಮುಖವು ಹಸನ್ಮುಖವಾಯಿತು. ಇದ್ದಕ್ಕಿದ್ದಹಾಗೆಯೇ ಹುಸಿ ನಗುವಿನ ನೋಟವನ್ನು ಶೇಷಪ್ಪನ ಮೇಲೆ ಎಸೆದಳು.

ಶೇಷಪ್ಪನಿಗೆ ಸ್ವರ್ಗಲೋಕವೇ ಕೈಗೆ ಸಿಕ್ಕಿದಷ್ಟು ಆನಂದವಾಯಿತು.

೩

ಸರೋಜಿನಿಯ ಮನೋವೇದನೆಯನ್ನು ಅವಳ ವಿನಃ ಬೇರೆ ಯಾರೂ ಅರಿಯರು.

ನಿಂತಲ್ಲಿ, ಕುಳಿತಲ್ಲಿ ರೋಧಿಸುವುದೇ ಅವಳ ಮುಖ್ಯ ಕೆಲಸವಾಯಿತು. ರಾತ್ರಿ ಮಲಗಿ ಬೆಳಗಾದಾಗ ಎದ್ದು ನೋಡಿದರೆ ಆಕೆಯ ಹಾಸಿಗೆಯೆಲ್ಲಾ ಕಣ್ಣೀರಿನಿಂದ ಒದ್ದೆಯಾಗಿರುತ್ತಿತ್ತು.

'ದೇವರೇ ! ನನ್ನನ್ನು ಪಾಪಕೂಪಕ್ಕೆ ತಳ್ಳಿದೆ. ಯಾವ ಮಾಯೆಯಿಂದಲೋ ನಾನು ಈ ಸುಪ್ತ ಕಾಮಾಗ್ನಿಯ ಜ್ವಾಲೆಗೆ ಒಳಗಾದೆ. ಹೊರಲಾರದ ಪಾಪದ ಹೊರೆಯೊಂದು ನನ್ನ ತಲೆಯಮೇಲೆ ಕುಳಿತಿದೆ. ಇದರಿಂದ ಪಾರಾಗುವ ಬಗೆಯೇ ನನಗೆ ತೋಚದು. ಇದಕ್ಕೆ ಆತ್ಮಹತ್ಯೆಯೇ ಸರಿಯಾದ ದಾರಿ. ಬೇರೆ ಯಾವ ಮಾರ್ಗವೂ ತೋಚದು. ಪತ್ನಿಯು ಕಾಲವಾದರೆ ಪತಿಯಾದವನು ಒಂದಲ್ಲ ನಾಲ್ಕು ವಿವಾಹಗಳನ್ನು ಆಗಬಹುದು. ಪತಿಯು ಕಾಲವಾದರೆ ಪತ್ನಿಯಾದವಳು ಪುನರ್ವಿವಾಹವಾಗಬಾರದೇಕೆ ? ಈ ರೀತಿಯ ಕಟ್ಟಳೆಯು ನಿನಗೆ ನ್ಯಾಯವೆನಿಸುವುದೇ ? ಸಮಾಜವು ಈ ವಿಷಯದಲ್ಲಿ ಕಣ್ಣು ಮುಚ್ಚಿಕೊಂಡು ಕುಳಿತಿದೆಯೇಕೆ ? ನಾನು ದುಡುಕಿಬಿಟ್ಟೆನು. ಮೀರಿ ಹೋದುದಕ್ಕೆ ಚಿಂತಿಸಿ ಫಲವಿಲ್ಲ.' ಎಂದು ತನ್ನ ಪಾಡಿಗೆ ತಾನೇ ಸಮಾಧಾನ ಮಾಡಿಕೊಳ್ಳುವಳು.

ಯಾರೊಡನೆಯೂ ಸೇರುತ್ತಿರಲಿಲ್ಲ. ಕುಳಿತಲ್ಲಿ, ನಿಂತಲ್ಲಿ ರೋಧಿಸುತ್ತಿದ್ದಳು.

ಸರೋಜಿನಿಯ ಚಿಂತೆಗೆ ಕಾರಣ ಅವಳು ಆಗ ಮೂರು ತಿಂಗಳ ಗರ್ಭಿಣಿ.

ಅವಳ ಅಣ್ಣನೂ, ತಂಗಿಯೂ, ಆಕೆಯ ದುಃಖದ ಬೇಗೆಯನ್ನು ಅರಿ

ಯದೇಹೋದರು. ತನ್ನ ಪತಿಯನ್ನೂ, ತಂದೆ, ತಾಯಿಯರನ್ನೂ ಸ್ಮರಿಸಿಕೊಂಡು ಅಳುತ್ತಿರುವಳೆಂದು ಅವರು ಭಾವಿಸಿಕೊಂಡರು.

ಸತ್ತವರ ಸದ್ಗುಣಗಳನ್ನು ಸ್ಮರಿಸಿಕೊಂಡು ಗೋಳಾಡುವುದು, ಕೆಲವು ದಿನಗಳು ಮಾತ್ರ. ದಿನದಿನವೂ ಅಳುತ್ತಾ ಇದ್ದರೆ ಏನೆಂದು ತಿಳಿಯುವುದು ?

ಬಾಲಕೃಷ್ಣನು ಸರೋಜಿನಿಯನ್ನು ಹಲವು ಬಗೆಯಲ್ಲಿ ಸಂತೈಸಿ ಕೇಳಿದರೂ ಆಕೆಯು ಯಾವ ವಿಷಯವನ್ನೂ ಹೇಳಲಿಲ್ಲ.

ತನ್ನ ತಂದೆ, ತಾಯಿಯರ ಹೆಸರಿಗೆ ಕಳಂಕ ತರಲು ಅವಳಿಗೆ ಇಷ್ಟವಿರಲಿಲ್ಲ. ಯಾರೊಬ್ಬರಲ್ಲಿಯೂ ತಿಳಿಸದೆ ಆತ್ಮಹತ್ಯೆ ಮಾಡಿಕೊಳ್ಳುವುದೇ ಸರಿಯಾದ ಮಾರ್ಗವೆಂದು ನಿರ್ಧರ ಪಡಿಸಿಕೊಂಡಿದ್ದಳು.

ಅವಳ ಗರ್ಭಪಿಂಡವು ಬೆಳೆಯುತ್ತಾ ಹೋಯಿತು.

ಅದು ಸಾವಕಾಶವಾಗಿ ಬೆಳೆಯುತ್ತಾ ಹೋದ ಹಾಗೆಲ್ಲಾ ಅವಳ ಚಿಂತೆಯು ಅಧಿಕವಾಯಿತು. ಇತರರಿಗೆ ಎಲ್ಲಿ ತಿಳಿಯುವುದೋ ಎಂಬ ಅಭಿಪ್ರಾಯದಿಂದ ರೂಮನ್ನು ಬಿಟ್ಟು ಹೊರಗೆ ಬರುತ್ತಿರಲಿಲ್ಲ.

ಸಂಸಾರದ ಜವಾಬ್ದಾರಿಯೆಲ್ಲಾ ಸರಸ್ವತಿಬಾಯಿಯ ಮೇಲೆ ಬಿದ್ದಿತು. ತನ್ನ ಅಕ್ಕನು ಹೀಗೇಕಾದಳೆಂದು ಹಲವು ಬಗೆಯಲ್ಲಿ ಪ್ರಯತ್ನಿಸಿದರೂ ಏನೂ ಸಾಧ್ಯವಾಗಲಿಲ್ಲ.

ಪರಿಸ್ಥಿತಿಯು ಹೀಗಿರಲು ಶೇಷಪ್ಪನು ಅಲ್ಲಿಗೆ ಬರುವುದನ್ನೇ ನಿಷೇಧಿಸಿದನು. ಅಕಸ್ಮಾತ್ ಬಂದರೂ ಸರೋಜಿನಿಯನ್ನು ನೋಡುತ್ತಿರಲಿಲ್ಲ.

ಹೀಗಿರಲು ಬಾಲಕೃಷ್ಣನ ಸೋದರತ್ತೆಯಾದ ಲಕ್ಷ್ಮೀದೇವಮ್ಮನು ಅಳಿಯ, ಮತ್ತು ಸೊಸೆಯರನ್ನು ನೋಡುವ ಉದ್ದೇಶವಾಗಿ ದೇವನಗರದಿಂದ ಅಲ್ಲಿಗೆ ಬಂದಳು.

ಆಕೆಯು ಬರುತ್ತಲೇ ಸರೋಜಿನಿಯ ಎದೆಯೊಡೆದು ನೀರಾಯಿತು. ತನ್ನ ರಹಸ್ಯವು ಬಯಲಾಗಬಹುದೆಂಬ ಭಯದಿಂದ ತಲ್ಲಣಿಸಿ ಹೋದಳು.

ಲಕ್ಷ್ಮೀದೇವಮ್ಮನು ಅಲ್ಲಿಗೆ ಬಂದ ಎಂಟು ದಿನಗಳಲ್ಲಿಯೇ ಅವಳ ರಹಸ್ಯವು ಬಯಲಾಯಿತು. ಮರ್ಮವನ್ನು ಬಚ್ಚಿಡಬೇಕೆಂದು ಸರೋಜಿನಿಯು ಪಟ್ಟ ಶ್ರಮವೆಲ್ಲಾ ನಿಷ್ಪ್ರಯೋಜನವಾಯಿತು.

ಲಕ್ಷ್ಮೀದೇವಮ್ಮನು ಅಳಿಯನನ್ನು ಏಕಾಂತವಾಗಿ ಸಂಧಿಸಿ ಸರೋಜಿನಿಯ ರಹಸ್ಯವನ್ನು ಹೇಳಿದಳು.

ವಿಷಯವನ್ನು ಕೇಳುತ್ತಲೇ ಬಾಲಕೃಷ್ಣನು ಹುಚ್ಚನಂತಾದನು. ಸಿಟ್ಟು ಮೇರೆಮೀರಿತು. 'ಶೇಷಪ್ಪನು ವಿಶೇಷವಾಗಿ ಬರುತ್ತಿದ್ದ ಕಾರಣ, ಈಚೆಗೆ ಬಾರದಿರುವ ಉದ್ದೇಶ, ಸರೋಜಿನಿಯು ಈಚೀಚೆಗೆ ದುಃಖಿಸುತ್ತಿದ್ದ ಕಾರಣ ವೆಲ್ಲವೂ, ಈ ಉದ್ದೇಶಕ್ಕಾಗಿಯೇ' ಎಂಬ ಯೋಚನೆಯು ಅವನ ಮನಕ್ಕೆ ಆಗ ಹೊಳೆಯಿತು.

ಈಗಲೇ ಇಬ್ಬರನ್ನೂ ಕೊಂದು ಬಿಡಲೇ? ಎನ್ನುವಷ್ಟು ಕೋಪದಿಂದ ನೆಲ ವನ್ನು ಝಾಡಿಸಿ ಒದೆದನು.

ಅವನ ಕೋಪವನ್ನರಿತ ಲಕ್ಷ್ಮೀದೇವಮ್ಮನು—

"ಕೃಷ್ಣಾ! ಈ ವೇಳೆಯಲ್ಲಿ ನೀನು ಕೋಪಮಾಡಿಕೊಳ್ಳುವುದು ಸರಿಯಲ್ಲ. ದುಡುಕಿ ಅನರ್ಥಕ್ಕೆ ಗುರಿಯಾಗಬೇಡ. ನೀನು ಅವಿವೇಕಿಯಲ್ಲ. ಮುಳ್ಳಿನ ಮೇಲೆ ಬಿದ್ದ ಪಂಚೆಯನ್ನು ಹೇಗೆ ತೆಗೆಯಬೇಕು? ಯೋಚಿಸಿ ನೋಡು. ಜಾಗ ರೂಕನಾಗಿ ಕಾರ್ಯವನ್ನು ನಿರ್ವಹಿಸು. ಎಚ್ಚರಿಕೆ" ಎಂದು ಹೇಳಿದಳು.

ಲಕ್ಷ್ಮೀದೇವಮ್ಮನ ಹಿತವಾಕ್ಯವು ಬಾಲಕೃಷ್ಣನಿಗೆ ಚೆನ್ನಾಗಿ ನಾಟಿತು. ಏನೂ ಅರಿಯದವನಂತಿದ್ದು ಸಮಯ ಬಂದಾಗ ಪ್ರತೀಕಾರವನ್ನು ತೀರಿಸಿಕೊಳ್ಳ ಬೇಕೆಂದು ನಿರ್ಧರಿಸಿಕೊಂಡನು.

ಅಳಿಯನು ಶಾಂತನಾದುದನ್ನು ನೋಡಿ ಲಕ್ಷ್ಮೀದೇವಮ್ಮನಿಗೂ ಆನಂದ ವಾಯಿತು.

ಅಳಿಯನಿಗೆ ಸೊಸೆಯ ಅಂತರಂಗದ ವಿಷಯವನ್ನು ಹೇಳಿದ ಮೂರನೆಯ ದಿನ ಆಕೆಯು ದೇವನಗರಕ್ಕೆ ಹಿಂದಿರುಗಿದಳು.

ಈ ವಿಷಯವನ್ನು ಯಾರೊಡನೆಯೂ ತಿಳಿಸಬಾರದೆಂದು ಬಾಲಕೃಷ್ಣನು ತನ್ನ ಅತ್ತೆಯನ್ನು ಕಳುಹಿಸುವಾಗ ಆಕೆಯೊಡನೆ ಹೇಳಿದ್ದನು.

ಅತ್ತೆಯನ್ನು ಕಳುಹಿಸಿದನಂತರ ತಂಗಿಯ ಮರ್ಯಾದೆಯನ್ನು ಕಾಪಾಡುವ ಭಾರವು ಆತನ ಮೇಲೆ ಬಿದ್ದಿತು.

ಹೃದಯದಲ್ಲಿ ಉಜ್ವಲವಾದ ಕೋಪವಿದ್ದರೂ, ಅದನ್ನು ತೋರ್ಪಡಿಸಿ ಕೊಳ್ಳದೆ, ಸರೋಜಿನಿಯನ್ನು ಹಿತವಚನಗಳಿಂದಲೇ ಸಂತೈಸಿ ಪ್ರೀತಿಯಿಂದಿರುವವ

ನಂತೆ ನಟಿಸುತ್ತಾ ಕಳೆದುಹೋದುದಕ್ಕಾಗಿ ವ್ಯಥೆಪಡಬೇಡವೆಂದು ಹೇಳುತ್ತಿದ್ದನು.

ಈ ವಿಷಯವನ್ನು ಕೇಳಿದರೆ ತನ್ನನ್ನು ಕತ್ತರಿಸಿಬಿಡುವನೆಂದು ಭಾವಿಸಿದ್ದ ಸರೋಜಿನಿಯು, ಬಾಲಕೃಷ್ಣನ ಹಿತವಚನಗಳನ್ನು ಕೇಳಿ ಇಂತಹ ಸದ್ಗುಣಸಂಪನ್ನನಾದ ಅಣ್ಣನನ್ನು ಪಡೆದ ತನ್ನ ಜನ್ಮವು ಮಹಾಶ್ರೇಷ್ಠವಾದುದೆಂದುಕೊಂಡಳು.

ಆದರೇ! ಅಣ್ಣನ ಎದೆಯಲ್ಲಿರುವ ಹಾಲಾಹಲವು ಆಕೆಗೇನು ಗೊತ್ತು?

ತಾನು ಡಾಕ್ಟರ್ ವೃತ್ತಿಯಲ್ಲಿ ಪ್ರವೀಣನಾದುದರಿಂದ ರಹಸ್ಯವಾಗಿಯೇ ತನಗೆ ತಿಳಿದ ಔಷಧಿಗಳನ್ನೆಲ್ಲಾ ತನ್ನ ತಂಗಿಗೆ ಕೊಟ್ಟನು. ಯಾವ ವಿಧವಾದ ಔಷಧವೂ ಪ್ರಯೋಜನಕ್ಕೆ ಬಾರದಾಯಿತು.

ಹೊಟ್ಟೆಯಲ್ಲಿಯೇ ಮಗುವು ಕರಗಿಹೋಗುವುದೆಂದು ತನಗೆ ತಿಳಿದ ವಿಧಾನವನ್ನೆಲ್ಲಾ ಬಾಲಕೃಷ್ಣನು ಮಾಡಿ ನಿರಾಶನಾದನು.

ತನ್ನ ಪ್ರಯತ್ನವೆಲ್ಲವೂ ನಿಷ್ಫಲವಾದುದನ್ನು ನೋಡಿ ಅವನು ಅತ್ಯಂತ ನಿರಾಶನಾಗಿ ಇನ್ನು ಮುಂದೆ ಸಮಾಜದ ಎದುರಿಗೆ ತಲೆಯೆತ್ತಿ ತಿರುಗುವುದು ಮಹಾ ಕಠಿಣವಾಗುವುದೆಂದುಕೊಂಡನು.

ತನ್ನ ತಂಗಿಯನ್ನು ಈ ದುರವಸ್ಥೆಗೆ ಗುರಿಮಾಡಿದ ಶೇಷಪ್ಪನ ಮೇಲೆ ಅತ್ಯಂತ ಕ್ರೋಧವುಂಟಾಯಿತು. ಆತನ ದೆಶೆಯಿಂದ ತನಗೆ ಜೈಲಾದರೂ ಚಿಂತೆಯಿಲ್ಲ. ಅವನನ್ನು ಉಳಿಸಬಾರದೆಂದು ನಿರ್ಧರ ಮಾಡಿಕೊಂಡನು.

ಆಗ ತನ್ನ ಅತ್ತೆಯು ಹೇಳಿದ ಹಿತವಾಕ್ಯಗಳು ನೆನಪಿಗೆ ಬಂದು ಆತನನ್ನು ಯಾವರೀತಿ ಕೊನೆಗಾಣಿಸಬೇಕೆಂಬುದರ ಬಗ್ಗೆ ಎರಡು ದಿನಗಳು ಯೋಚಿಸಿ 'ಈ ರೀತಿ' ಮಾಡಿದರೆ ಸೇಡು ತೀರಿಸಿಕೊಂಡಂತಾಗುವುದಲ್ಲದೆ ತನ್ನ ಗುಟ್ಟೂ ರಟ್ಟಾಗುವುದಿಲ್ಲವೆಂದು ಭಾವಿಸಿಕೊಂಡನು.

ತನ್ನ ಯೋಚನೆಗೆ ತಕ್ಕಂತೆ ಬೇಕಾದ ಏರ್ಪಾಡುಗಳನ್ನು ಮಾಡಿಕೊಂಡನು. ತನ್ನೊಬ್ಬನಿಂದ ಈ ಕಾರ್ಯವಾಗದೆಂದು ಭಾವಿಸಿ ತನ್ನ ಸಹಾಯಕ್ಕೆ ಸರಸ್ವತಿ ಬಾಯಿಯನ್ನು ಸೇರಿಸಿಕೊಂಡನು.

ಇವರಿಬ್ಬರ ರಹಸ್ಯದ ಏರ್ಪಾಡುಗಳು ಸರೋಜಿನಿಗೆ ಅಲ್ಪ ಸ್ವಲ್ಪ ತಿಳಿಯಿತು.

ಶೇಷಪ್ಪನಿಗೆ ಮಾತ್ರ ಬಾಲಕೃಷ್ಣನ ರಹಸ್ಯದ ಕಾರ್ಯಕಲಾಪಗಳೇನೂ ತಿಳಿಯಲಿಲ್ಲ.

ಬಾಲಕೃಷ್ಣನು. ಆತನು ಸಿಕ್ಕಿದಾಗಲೆಲ್ಲಾ ಹಿಂದಿನಂತೆಯೇ ವಿಶ್ವಾಸದಿಂದ ಅವನನ್ನು ಮಾತನಾಡಿಸುತ್ತಿದ್ದನು.

'ಸರೋಜಿನಿಯ ವಿಷಯವು ರಹಸ್ಯವಾಗಿಯೇ ಉಳಿದಿದೆ. ಆಕೆಯು ಯಾರೊಡನೆಯೂ ತನ್ನ ವಿಷಯವನ್ನು ತಿಳುಹಿಸಿಲ್ಲ.' ಎಂದು ಶೇಷಪ್ಪನು ಭಾವಿಸಿಕೊಂಡನು.

ತನ್ನ, ಮತ್ತು ಸರೋಜಿನಿಯ ಪ್ರಣಯ ರಹಸ್ಯವು ಬಯಲಾಗದೆ ಇದ್ದುದಕ್ಕಾಗಿ ಆನಂದಗೊಂಡನು.

ಸರೋಜಿನಿಯು ವಿಧವೆಯಾದರೂ ಚಿಂತೆಯಿಲ್ಲ. ಆಕೆಯನ್ನಲ್ಲದೆ ಬೇರೆ ಯಾರನ್ನೂ ವಿವಾಹವಾಗಲಾರೆನು. ಎಂದು ಶಪಥ ಮಾಡಿದುದನ್ನೆಲ್ಲಾ ಅವನು ತನ್ನ ಇಚ್ಛಾಪೂರ್ತಿಯಾದನಂತರ ಮರೆತು ಬಿಟ್ಟನು.

ಇಂತಹ ನೀಚ, ದುರ್ಮಾರ್ಗ, ಅಧಮರಿಗೆ ತಕ್ಕ ಶಿಕ್ಷೆಯಾಗಬೇಕಾದುದು ಸಹಜವೆ.

ಉಪ್ಪು ತಿಂದವರು ನೀರು ಕುಡಿಯಲೇಬೇಕು.

೪

ಸಮಯ ನಿರೀಕ್ಷೆಯಲ್ಲಿದ್ದ ಬಾಲಕೃಷ್ಣನಿಗೆ ಸೇಡು ತೀರಿಸಿಕೊಳ್ಳಲು ಸರಿಯಾದ ಅವಕಾಶವೊದಗಿತು.

ತನ್ನ ಗುಟ್ಟು ರಟ್ಟಾಗಲಿಲ್ಲವೆಂಬ ಸಂತೋಷದಿಂದಿದ್ದ ಶೇಷಪ್ಪನು ಒಂದು ದಿನ ಸಾಯಂಕಾಲ ಆರು ಘಂಟೆಯ ವೇಳೆಯಲ್ಲಿ ಬಾಲಕೃಷ್ಣನ ಮನೆಗೆ ಬಂದನು.

ಅವನು ಎಂದಿಗೆ ಬಂದಾನೆಂದು ಕಾಯುತ್ತಿದ್ದ ಬಾಲಕೃಷ್ಣನು ಆತನು ಬರುತ್ತಲೇ ಹೊಸ ಉಡುಪುಗಳನ್ನು ಹಾಕಿಕೊಳ್ಳತೊಡಗಿದನು.

ಶೇಷಪ್ಪನು ಸಹಜವಾಗಿಯೇ—

"ಈ ವೇಳೆಯಲ್ಲಿ ಎಲ್ಲಿಗೋ ಹೊರಟಿರುವಂತೆ ತೋರುವುದಲ್ಲ! ಎಲ್ಲಿಗೆ ನಿಮ್ಮ ಪ್ರಯಾಣ? ಪೇಷೆಂಟನ್ನು ನೋಡಬೇಕಾಗಿದೆಯೇ?" ಎಂದು ಕೇಳಿದನು.

ಬಾಲಕೃಷ್ಣನು ಗಡಿಯಾರವನ್ನು ನೋಡಿಕೊಳ್ಳುತ್ತಾ—

"ಬಸವಾಪುರಕ್ಕೆ ಹೋಗಬೇಕು. ಈಗಾಗಲೇ ವೇಳೆಯಾಯಿತು. ನನಗೆ ಜ್ಞಾಪಕವೇ ಇರಲಿಲ್ಲ." ಎಂದು ಹೇಳಿದನು.

"ಅಲ್ಲಿಗೆ ಏಕೆ ಹೋಗುವಿರಿ?"

"ನನ್ನ ಸ್ನೇಹಿತನೊಬ್ಬನ ಮನೆಯಲ್ಲಿ ಶುಭಕಾರ್ಯವಿದೆ. ಅದಕ್ಕಾಗಿ ನನಗೆ ಆಹ್ವಾನ ಬಂದಿದೆ. ಬರುವಿರಾದರೆ ನೀವೂ ಬನ್ನಿ. ಒಂಭತ್ತು ಘಂಟೆಯ ವೇಳೆಗೆ ಹಿಂದಿರುಗಿ ಬರಬಹುದು."

"ಆಹ್ವಾನ ಬಂದಿರುವುದು, ನಿಮಗೆ. ನಾನೇಕೆ ಬರಲಿ?"

"ನೀವು ಜೊತೆಯಲ್ಲಿ ಬನ್ನಿ. ಒಬ್ಬನೇ ಹೋಗಿ ಬರಲು ಬೇಸರವಾಗುತ್ತದೆ.

ಜೊತೆಯಲ್ಲಿ ಸರಸ್ವತಿಯೂ ಬರುವಳು. ಕಾರಿನಲ್ಲಿ ಹದಿನೆಂಟು ಮೈಲಿಗಳು ಹೋಗಿ ಬರುವುದು ಪ್ರಮಾದವೇ ?"

"ಸರೋಜಿನಿಯವರು ಬರುವುದಿಲ್ಲವೇ ?"

"ಶುಭಕಾರ್ಯಗಳಲ್ಲಿ ವಿಧವೆಯರಿಗೇನು ಕೆಲಸ? ಅಂತಹ ಕಡೆಗಳಿಗೆ ಅವಳು ಬರುವುದುಚಿತವಲ್ಲ."

ಶೇಷಪ್ಪನು ಆತನ ಜೊತೆಯಲ್ಲಿ ಹೋಗಿ ಬರಲು ಒಪ್ಪಿ ತಲೆಯಾಡಿಸಿದನು.

ಬಾಲಕೃಷ್ಣನಿಗೆ ಹರ್ಷವಾಯಿತು.

"ಒಂಭತ್ತು ಘಂಟೆಯೊಳಗಾಗಿ ಬರಬಹುದೇ ?"

—ಎಂದು ಶೇಷಪ್ಪನು ಕೇಳಿದನು.

"ಬರದೆ ಏನು ? ಅಲ್ಲಿ ನಮಗೇನು ಬೇರೆ ಕೆಲಸ."

—ಎಂದು ಸಹಜವಾಗಿಯೇ ಬಾಲಕೃಷ್ಣನು ಹೇಳಿದನು.

ತಾನು ಮೊಳಕೆ ಹಾಕಿದ ವಿಷಬೀಜವು ಚೆನ್ನಾಗಿ ಫಲವಾಯಿತೆಂದು ಬಾಲಕೃಷ್ಣನು ಅತ್ಯಾನಂದಗೊಂಡನು.

ಬಾಲಕೃಷ್ಣನ ಎದೆಯಲ್ಲಿ ವಿಷದ ಕುಪ್ಪಿಯಿರುವುದೆಂಬುದನ್ನು ಶೇಷಪ್ಪನು ಅರಿಯದೆ ಹೋದನು.

ಮೂವರೂ ಹೊರಡಲು ತಯಾರಾದರು.

ಬಾಲಕೃಷ್ಣನು ತಾನೇ ಕಾರನ್ನು ಸ್ಟಾರ್ಟ್ ಮಾಡಿ ಗ್ಯಾರೇಜಿನಿಂದ ಹೊರಗೆ ತೆಗೆದುಕೊಂಡು ಬಂದನು.

ಶೇಷಪ್ಪನು "ಡ್ರೈವರ್ ಎಲ್ಲಿ ?" ಎಂದು ಕೇಳಲು ಬಾಲಕೃಷ್ಣನು ನಗುತ್ತಾ "ಆತನ ಅವಶ್ಯಕತೆಯಿಲ್ಲ. ಆತನ ಬದಲು ನಾನೇ ಇರುವೆನಲ್ಲ." ಎಂದು ಹೇಳಿದನು.

ಸರಸ್ವತಿಯು ಮುಂದಿನ ಸೀಟಿನಲ್ಲಿಯೇ ತನ್ನ ಅಣ್ಣನ ಪಕ್ಕದಲ್ಲಿ ಕುಳಿತಳು.

ಶೇಷಪ್ಪನು ಹಿಂದಿನ ಸೀಟಿನಲ್ಲಿ ಕುಳಿತನು.

ಕಾರು ವಾಯುವೇಗದಿಂದ ನಗರವನ್ನು ದಾಟಿ ಬಸವಾಪುರದ ಮಾರ್ಗವನ್ನಿಡಿದು ಹೊರಟಿತು.

ಸುಮಾರು ಎಂಟು ಮೈಲಿಗಳ ದೂರ ಹೋದನಂತರ ಬಾಲಕೃಷ್ಣನು ಕಾರನ್ನು ಹಠಾತ್ತನೆ ನಿಲ್ಲಿಸಿದನು.

ಕತ್ತಲು ಕವಿಯಲು ಇನ್ನೂ ವೇಳೆಯಿತ್ತು.

ವಿಸ್ಮಿತನಾದ ಶೇಷಪ್ಪನು—

"ಏಕೆ ನಿಲ್ಲಿಸಿದಿರಿ?" ಎಂದು ಕೇಳಿದನು.

"ಮಿಸ್ಸಿಂಗ್ ಇದೆ. ಅದಕ್ಕಾಗಿ ನಿಲ್ಲಿಸಿದೆ."

"ಅದಕ್ಕೆ ಏನು ಮಾಡುವಿರಿ?"

"'ಪ್ಲಗ್' ಮಿಸ್ಸಿಂಗ್ ಇದೆ. ಅವುಗಳನ್ನು ಕ್ಲೀನ್ ಮಾಡಿದರೆ ಸರಿ ಹೋಗುತ್ತೆ."

"ಅದನ್ನು ಕ್ಲೀನ್ ಮಾಡಲು ಎಷ್ಟು ಹೊತ್ತು ಹಿಡಿಯುತ್ತದೆ?"

"ಅರ್ಧ ಘಂಟೆಯೊಳಗಾಗಿ ಕ್ಲೀನ್ ಮಾಡುವೆನು."

"ಬೇಗ ಬೇಗನೆ ಬೆಳಕಿದ್ದ ಹಾಗೆಯೇ ಮಾಡಿ ಮುಗಿಸಿ. ನೀವು ಡ್ರೈವರ್‌ನನ್ನು ಕರೆದುಕೊಂಡು ಬಂದಿದ್ದರೆ ಚೆನ್ನಾಗಿತ್ತು. ಅಲ್ಲವೇ?"

"ಡ್ರೈವರನು ಮಾಡುವ ಕೆಲಸವೇನಿಲ್ಲ. ನಾನೇ ಮಾಡಿ ಮುಗಿಸಬೇಕು.

"ಮಾಡಿ!—ಮಾಡಿ ಬೇಡವೆನ್ನುವವರಾರು?"

ಬಾಲಕೃಷ್ಣನು ಕಾರಿನಿಂದ ಇಳಿದು ಟೂಲ್ ಬಾಕ್ಸಿನಿಂದ ಸ್ಪಾನರನ್ನು ತೆಗೆದು, ಬಾನಟ್ಟನ್ನು ಎತ್ತಿ ಎರಡು ಪ್ಲಗ್‌ಗಳನ್ನು ಬಿಚ್ಚಿದನು.

ಅವುಗಳನ್ನು ಕಾಲುಘಂಟೆಯವರೆವಿಗೂ ಕ್ಲೀನ್ ಮಾಡುವವನಂತೆ ನಟಿಸಿ ಅವೆರಡನ್ನು 'ಫಿಟ್' ಮಾಡಿ ಮತ್ತೆ ಎರಡು ಪ್ಲಗ್‌ಗಳನ್ನು ಬಿಚ್ಚಿದನು.

ಅವೆರಡನ್ನು ಹದಿನೈದು ನಿಮಿಷಗಳವರೆವಿಗೆ ಕ್ಲೀನ್ ಮಾಡುವವನಂತೆ ನಟಿಸಿ ಬಳಿಕ ಅವೆರಡನ್ನು 'ಫಿಟ್' ಮಾಡಿ ಇನ್ನೆರಡನ್ನು ಬಿಚ್ಚಿದನು.

ಯಾವ ಪ್ಲಗ್ಗೂ ಮಿಸ್ಸಿಂಗ್ ಇರಲಿಲ್ಲ. ಅವುಗಳನ್ನು ಕ್ಲೀನ್ ಮಾಡಬೇಕಾದ ಉದ್ದೇಶವೂ ಇರಲಿಲ್ಲ.

ಕತ್ತಲಾದರೆ ತನ್ನ ಕಾರ್ಯಕ್ಕೆ ಅನುಕೂಲವಾಗುವುದೆಂಬ ಭಾವನೆಯಿಂದ ಬಾಲಕೃಷ್ಣನು ಈ ಯುಕ್ತಿಯನ್ನು ಹೂಡಿದ್ದನು.

ಬಾಲಕೃಷ್ಣನ ಕಾರ್ಯವನ್ನು ನೋಡಿದ ಶೇಷಪ್ಪನಿಗೆ ಏನೋ ಒಂದು ವಿಧವಾಗಿ ಭೀತಿಯುಂಟಾಯಿತು. ಆ ಭಯದ ಕಾರಣವನ್ನು ಆತನು ತಿಳಿದು ಕೊಳ್ಳಲಾರದೇ ಹೋದನು.

ಬಾಲಕೃಷ್ಣನು ಉಳಿದೆರಡು ಪ್ಲಗ್‌ಗಳನ್ನು ಕ್ಲೀನ್ ಮಾಡುವವನಂತೆ

ನಟಿಸಿ ಇಪ್ಪತ್ತು ನಿಮಿಷಗಳ ವೇಳೆಯನ್ನು ಕಳೆದನು.

ಅಮಾವಾಸ್ಯೆಯ ನಂತರ ಎರಡು ದಿನಗಳು ಕಳೆದುದ್ದರಿಂದ ಚಂದ್ರನು ಕಾಣಿಸಿಕೊಳ್ಳುವಂತಿರಲಿಲ್ಲ.

ಆಗಲೇ ಕತ್ತಲು ಕವಿಯುತ್ತಾ ಬಂದಿತ್ತು.

ಬಾಲಕೃಷ್ಣನು ಕೊನೆಯ ಎರಡು ಪ್ಲಗ್‌ಗಳನ್ನು ಕ್ಲೀನ್ ಮಾಡಿ 'ಫಿಟ್' ಮಾಡಿದನು.

"ಈ ಕೆಲಸವನ್ನು ಮೊದಲೇ ಮಾಡಿಕೊಳ್ಳಬೇಕಿತ್ತು."

—ಎಂದು ಶೇಷಪ್ಪನು ಹೇಳಲು ಬಾಲಕೃಷ್ಣನು ನಗುತ್ತಾ—

"ಎಲ್ಲಾ ಏರ್ಪಾಡು ಮಾಡಿಕೊಂಡೇ ಬಂದಿರುವೆನು." ಎಂದು ಹೇಳಿದನು.

"ಹಾಗಾದರೇ! ಈ ರಗಳೆಯೇಕೆ?"

"ಕಾರ್ಯಾನುಕೂಲತೆಗಾಗಿ."

"ಹಾಗೆಂದರೆ?"

"ನಮ್ಮ ಕಾರ್ಯವು ಸಫಲವಾಗಲು ಮಧ್ಯದಾರಿಯಲ್ಲಿ ಏನಾದರೊಂದು ವಿಧದಲ್ಲಿ ಈ ರೀತಿಯ ಅಡಚಣೆಯುಂಟಾಗಬೇಕು."

"ಏನು ಹೇಳುವಿರೋ, ಏನೋ, ನನಗೊಂದೂ ಅರ್ಥವಾಗದು."

ಬಾಲಕೃಷ್ಣನು ಮಾತನಾಡದೆ ಬಾನಟ್ಟನ್ನು ಮುಚ್ಚಿ, ಸ್ಪಾನರನ್ನು ಟೂಲ್ ಬಾಕ್ಸಿನಲ್ಲಿಟ್ಟು ಅನಂತರ ಸ್ಟೇರಿಂಗ್ ಮುಂದೆ ಕುಳಿತು ಸೆಲ್ಫ್ ಸ್ಟಾರ್ಟ್ ಮಾಡಿದನು.

ಕಾರು ಮುಂದೆ ಹೊರಟಿತು.

ಮುಂದೆ ನಾಲ್ಕು ಮೈಲಿಗಳ ದೂರ ಹೋಗುತ್ತಲೇ ಪುನಃ ಕಾರನ್ನು ಎಡಗಡೆಯ ಮಗ್ಗುಲಿಗೆ ಹಠಾತ್ತಾಗಿ ನಿಲ್ಲಿಸಿದನು.

ಬೇಸರಗೊಂಡ ಶೇಷಪ್ಪನು—

"ಮತ್ತೇಕೆ ನಿಲ್ಲಿಸಿದಿರಿ?" ಎಂದು ಕೇಳಿದನು.

"ಕಾಯಲ್ ವೈರ್ ಬಿದ್ದಿರಬಹುದು. ಅದಕ್ಕಾಗಿ ಹಠಾತ್ತನೆ 'ಆಫ್' ಆಯಿತು. ಕೆಳಗಿಳಿದು ಅದು ಬಿದ್ದಿದೆಯೇನೋ ನೋಡಿ."

"ನನಗೆ ಹೇಗೆ ಗೊತ್ತಾಗುತ್ತದೆ?"

ಬಾಲಕೃಷ್ಣನು ವಿಧಿಯಿಲ್ಲದೆ ತಾನೇ ಕೆಳಗಿಳಿದನು.

ಬಾನಟ್ಟನ್ನು ಎತ್ತಿ ನೋಡಿ ಕಾಯಲ್ ವೈರು ಬೀಳದೆ ಇದ್ದರೂ ಬೇಕೆಂತಲೇ—

"ಹೌದು! ಕಾಯಲ್ ವೈರ್ ಬಿದ್ದಿದೆ." ಎಂದು ಹೇಳಿ ಅದನ್ನು ಕೂರಿಸುವವನಂತೆ ನಟಿಸಿದನು.

"ಕತ್ತಲಿನಲ್ಲಿ ಹೇಗೆ ಕಂಡಿತು ?"

"ಕಣ್ಣಿನಿಂದ ನೋಡಬೇಕಾದುದೇನೂ ಬೇಕಿಲ್ಲ. ಕೈಯ್ಯಿಂದ ನೋಡಿದರೆ ತಿಳಿಯುತ್ತದೆ."

"ಈಗ ಸರಿಯಾಯಿತೇ ?"

"ಆಯಿತಾದರೂ ಈ ಸ್ಕ್ರ್ಯೂ ಟೈಟ್ ಮಾಡಬೇಕು. ಟೂಲ್ ಬಾಕ್ಸಿನಲ್ಲಿ ಸ್ಕ್ರ್ಯೂಡ್ರೈವರ್ ಇದೆ ತೆಗೆದುಕೊಂಡು ಬನ್ನಿ."

ಶೇಷಪ್ಪನು ತನ್ನ ಜೇಬಿನಿಂದ ಬೆಂಕಿಪೆಟ್ಟಿಗೆಯನ್ನು ತೆಗೆದು ಕಡ್ಡಿಯನ್ನು ಗೀರಿ ಆ ಬೆಳಕಿನಲ್ಲಿ ಟೂಲ್ ಬಾಕ್ಸ್‌ನಲ್ಲಿದ್ದ ಚಿಕ್ಕ ಸ್ಕ್ರ್ಯೂಡ್ರೈವರನ್ನು ತೆಗೆದುಕೊಂಡು ಕಾರಿನಿಂದ ಕೆಳಗಿಳಿದನು.

ಅವನು ಇಳಿಯುವುದನ್ನೇ ಕಾಯುತ್ತಿದ್ದ ಬಾಲಕೃಷ್ಣನು ಕೂಡಲೇ ತನ್ನ ಜೇಬಿನಿಂದ ಪಿಸ್ತೂಲನ್ನು ತೆಗೆದು ಅವನ ಎದೆಗೆ ಹಿಡಿದನು.

ಶೇಷಪ್ಪನು ಥರಥರನೆ ನಡುಗಿ ಹೋದನು. ತನ್ನ ಜೀವಮಾನದ ಹಿಂದಿನ ಘಟನೆಗಳೆಲ್ಲಾ ಅವನ ಕಣ್ಮುಂದೆ ಸುಳಿಯಿತು. ತನ್ನನ್ನು ಕೊಲ್ಲುವುದಕ್ಕಾಗಿಯೇ ಇವನು ಈ ನೆವವನ್ನು ಕಲ್ಪಿಸಿಕೊಂಡು ಇಲ್ಲಿಗೆ ಕರೆದುಕೊಂಡು ಬಂದಿರುವನೆಂದು ಅವನಿಗೆ ಆಗ ಅರಿವಾಯಿತು.

ಬಾಲಕೃಷ್ಣನು ಸಿಟ್ಟಿನಿಂದ—

"ದ್ರೋಹಿ! ನಿಂತಹಾಗೆಯೇ ಕೈಗಳನ್ನು ಮೇಲಕ್ಕೆ ಎತ್ತಿ ನಿಂತುಕೊ. ನನ್ನ ತಂಗಿಯ ಜೀವವನ್ನು ಹಾಳು ಮಾಡಿದ ಮಹಾ ಚಂಡಾಲ, ಇನ್ನು ನಿನ್ನ ಆಯುಸ್ಸು ಮುಗಿಯಿತು. ನಿನ್ನ ಮನೇದೇವರನ್ನು ಸ್ಮರಿಸಿಕೊ." ಎಂದು ಹೇಳಿದನು.

ಶೇಷಪ್ಪನ ಬಾಯಿಯು ಒಣಗಿ ಮಾತನಾಡಲು ನಾಲಿಗೆ ಹೊರಳದೆ ಇಂದಿಗೆ ತನ್ನ ಆಯುಸ್ಸು ಮುಗಿಯಿತೆಂದುಕೊಂಡನಲ್ಲದೆ ಬಾಲಕೃಷ್ಣನು ಹೇಳಿದಂತೆ ಕೈಗಳನ್ನು ಮೇಲಕ್ಕೆ ಎತ್ತಿಕೊಂಡನು.

ಬಾಲಕೃಷ್ಣನು ಹಾಗೆಯೇ ಹಿಂದೆ ಹೋಗುವಂತೆ ಹೇಳಿ ಅವನು ಸ್ವಲ್ಪ ದೂರ ಹೋಗುತ್ತಲೇ ತನ್ನ ಪಿಸ್ತೂಲಿನಿಂದ ಅವನ ಎದೆಗೆ ಗುರಿಯಿಟ್ಟು ಹೊಡೆದನು.

ಪಿಸ್ತೂಲಿನ ಏಟು ಬೀಳುತ್ತಲೇ ಶೇಷಪ್ಪನು ನಿಂತಹಾಗೆಯೇ ನೆಲಕ್ಕೆ ಬಿದ್ದನು.

ಇನ್ನು ತಡ ಮಾಡುವುದು ಅನಾವಶ್ಯಕವೆಂದರಿತ ಬಾಲಕೃಷ್ಣನು ಅವನ ಶವವನ್ನು ಅಣ್ಣತಂಗಿಯರಿಬ್ಬರೂ ಸೇರಿ ತಾವು ಮೊದಲೇ ಸಿದ್ಧಪಡಿಸಿಕೊಂಡು ಹೋಗಿದ್ದ ದಪ್ಪವಾದ ಟಾರ್‌ಪಾಲಿನಲ್ಲಿ ಸುತ್ತಿ ರಕ್ತವು ಹೊರಕ್ಕೆ ತೊಟ್ಟಿಕ್ಕದಂತೆ ಮಾಡಿ ಕಾರಿನಲ್ಲಿ ಹಾಕಿಕೊಂಡು ಅಲ್ಲಿಗೆ ಒಂದು ಮೈಲಿಯ ದೂರದಲ್ಲಿದ್ದ ದೊಡ್ಡ ಸೇತುವೆಯ ಬಳಿಗೆ ಬಂದರು.

ನದಿಯು ಬೋರ್ಗರೆಯುತ್ತಾ ಹರಿಯುತ್ತಿತ್ತು.

ಇಬ್ಬರೂ ಸೇರಿ ಶೇಷಪ್ಪನ ಶವವನ್ನು ಸುತ್ತಿದ್ದ ಟಾರ್ಪಾಲಿನ ಗಂಟನ್ನು ನದಿಗೆ ಎಸೆದರು.

ಸರಸ್ವತಿಯ ಸರ್ವಾಂಗಗಳೆಲ್ಲವೂ ಬೆವತು ನೀರಾಗಿ ಹೋಗಿತ್ತು. ಆಕೆಯು ತುಟಿಪಿಟಿಕ್ಕೆನ್ನಲಿಲ್ಲ.

ಬಳಿಕ ಕಾರನ್ನು ಹಿಂದಿರುಗಿಸಿಕೊಂಡು ಎಂಟು ಮೈಲಿಗಳವರೆವಿಗೆ ಬಂದನು.

ಅವರ ಬಟ್ಟೆ ಬರೆಗಳೆಲ್ಲವೂ ಅಲ್ಲಲ್ಲಿ ರಕ್ತಮಯವಾಗಿದ್ದುವು. ಬಾಲಕೃಷ್ಣನು ಮೊದಲೇ ಯೋಚಿಸಿಕೊಂಡು ಇದ್ದುದರಿಂದ ಬೇರೆ ಉಡುಪುಗಳನ್ನು ತೆಗೆದು ಕೊಂಡು ಹೋಗಿದ್ದನು.

ರಸ್ತೆಯ ಒಂದು ಪಕ್ಕದಲ್ಲಿ ಕಾರನ್ನು ನಿಲ್ಲಿಸಿ ಇಬ್ಬರೂ ಬೇರೆ ಉಡುಪು ಗಳನ್ನು ಆ ಕತ್ತಲಿನಲ್ಲಿಯೇ ಬದಲಾಯಿಸಿಕೊಂಡರು.

ಅಲ್ಪಸ್ವಲ್ಪ ರಕ್ತಮಯವಾಗಿದ್ದ ಆ ಬಟ್ಟೆಗಳನ್ನು ಒಂದು ಚೀಲದಲ್ಲಿ ಹಾಕಿ ಕಾರಿನಲ್ಲಿದ್ದ ಸೀಟುಗಳ ಕೆಳಭಾಗದಲ್ಲಿಟ್ಟುಕೊಂಡರು.

ಅಲ್ಲಿಯವರೆವಿಗೂ ಆಮಾರ್ಗದಲ್ಲಿ ಬೇರೆ ಯಾವ ಕಾರಾಗಲೀ, ಬಸ್ಸು, ಲಾರಿಗಳಾಗಲಿ, ಎತ್ತಿನ ಗಾಡಿಗಳೇ ಆಗಲಿ ಸಂಚರಿಸದೆ ಇದ್ದುದು ಬಾಲಕೃಷ್ಣನ ಅದೃಷ್ಟವೆಂದೇ ಹೇಳಬಹುದು.

ಆ ಉಡುಪುಗಳ ಚೀಲವನ್ನು ಸುಟ್ಟು ಹಾಕಬೇಕೆಂದು ನಿರ್ಧರಿಸಿಕೊಂಡನು.

ಇಬ್ಬರೂ ಕಾರಿನಲ್ಲಿ ಕುಳಿತರು.

ಬಳಿಕ ಬಾಲಕೃಷ್ಣನು—

"ಸರಸ್ವತೀ! ನೀನೀಗ ಬಹಳ ಜಾಗರೂಕಳಾಗಿರಬೇಕು." ಎಂದು ಕೇಳಿದನು.

ಭಯದಿಂದ ತಲ್ಲಣಗೊಂಡಿದ್ದ ಸರಸ್ವತಿಯು—

"ಅದೇನಣ್ಣಾ?" ಎಂದು ಕೇಳಿದಳು.

"ಈ ವಿಷಯವನ್ನು ಯಾರಲ್ಲಿಯೂ ತಿಳಿಸಬಾರದು ಅಷ್ಟೇ. ಪ್ರಾಣ ಹೋಗುವಂತಹ ಸನ್ನಿವೇಶ ಬಂದರೂ ನೀನು ಯಾರಲ್ಲಿಯೂ ಬಾಯಿ ಬಿಡಬಾರದು. ತಿಳಿಯಿತೇ?"

"ಆಗಲಿ! ಹೇಳುವುದಿಲ್ಲ."

"ಖಂಡಿತಾ ಹೇಳಬೇಡ. ನೀನು ನನ್ನ ಮನೆಯಲ್ಲಿಯೇ ಸ್ಥಿರವಾಗಿರುವವಳಲ್ಲ. ಆದ್ದರಿಂದ ನಿನಗೆ ಇಷ್ಟು ಹೇಳಬೇಕಾಯಿತು. ತಿಳಿಯಿತೇ? ಮತ್ತೆ ಹಾಸ್ಯಕ್ಕಾಗಿಯಾದರೂ ಸರಿ! ಯಾರಲ್ಲಿಯಾದರೂ ಬಾಯಿ ಬಿಟ್ಟುಬಿಟ್ಟೇಯೇ! ಒಂದುವೇಳೆ ನನಗೂ, ನಿನಗೂ ಮನಸ್ತಾಪ ಬರಬಹುದು. ಆಗಲೂ ಹೇಳಬಾರದು. ಈ ವಿಷಯವು ಬಹಿರಂಗವಾದರೆ, ನನಗೊಬ್ಬನಿಗೇ ಅಲ್ಲಾ, ನಿನಗೂ ತೊಂದರೆಯಾಗುತ್ತದೆ. ಅದರಿಂದ ವಿಶೇಷ ಅನರ್ಥಗಳುಂಟಾಗುತ್ತದೆ. ಗೊತ್ತಾಯಿತೇ?"

"ಗೊತ್ತಾಯಿತು. ಅಣ್ಣಾ! ನಿನ್ನ ಇಚ್ಛೆಯಂತೆಯೇ ನಾನು ನಡೆಯುವೆನು. ಆದರೇ! ನೀನು ನನ್ನ ಮನೋಭಿಲಾಷೆಯನ್ನು ಪೂರೈಸಿ ಕೊಡಬೇಕು."

"ಅದೇನು! ನಿನ್ನ ಕೋರಿಕೆ ಹೇಳು? ನಾನು ಆದಷ್ಟು ಶೀಘ್ರದಲ್ಲಿಯೇ ನೆರವೇರಿಸುವೆನು."

"ನಿನಗೆ ತಿಳಿದೇ ಇದೆ."

"ನನಗೆ ತಿಳಿಯದು. ಅದೇನು ಹೇಳು?"

"ನನ್ನ ಇಚ್ಛೆಯು ಜ....ಗ....ನ್ನಾ....ಥ...."

ಆಕೆಯ ಮಾತು ಪೂರೈಸುವ ಮೊದಲೇ ಬಾಲಕೃಷ್ಣನು—

"ನಿನ್ನ ಅಭಿಪ್ರಾಯವು ನನಗೆ ಗೊತ್ತಾಯಿತು. ನಿನ್ನನ್ನು ಜಗನ್ನಾಥನಿಗಿತ್ತು ವಿವಾಹ ಮಾಡಬೇಕಲ್ಲವೇ?" ಎಂದು ಕೇಳಿದನು.

ಸರಸ್ವತಿಯು ನಾಚುತ್ತಲೇ—

"ಹೌ....ಹೌ....ಹೌ....ಹೌದು." ಎಂದು ಹೇಳಿದಳು.

"ಅಷ್ಟು ಮಾತ್ರವೇ ? ಆಗಲಿ, ನಡೆ. ನಿನ್ನ ಮನೋಭಿಲಾಷೆಯನ್ನು ನೆರವೇರಿಸುವೆನು."

ಸರಸ್ವತಿಗೆ ಆನಂದವಾಯಿತಲ್ಲದೇ ತಾನು ಆಗಲೇ ಜಗನ್ನಾಥನ ಬಾಹುಗಳಲ್ಲಿ ಬಂಧಿಸಲ್ಪಟ್ಟಂತೆ ಕನಸನ್ನು ಕಂಡಳು.

ಆ ನೀಚನನ್ನು ನಿರ್ನಾಮಗೊಳಿಸಿದುದಾಯಿತು. ಇನ್ನು ಸರೋಜಿನಿಯನ್ನು ಈ ಲೋಕದಿಂದ ದೂರ ಮಾಡಬೇಕು ! ಎಂಬುದಾಗಿ ತೀರ್ಮಾನಿಸಿಕೊಂಡ ಬಾಲಕೃಷ್ಣನು ವೇಳೆಯನ್ನು ನೋಡಲು ಒಂಭತ್ತು ಘಂಟೆಯಾಗಿತ್ತು.

ಇನ್ನು ಇಲ್ಲಿ ಮಾತನಾಡುತ್ತಾ ಕುಳಿತುಕೊಳ್ಳುವುದು ನಿಷ್ಪ್ರಯೋಜನವೆಂದು ಭಾವಿಸಿ ಕಾರನ್ನು ಸ್ಟಾರ್ಟ್ ಮಾಡಿ ನಗರಾಭಿಮುಖನಾಗಿ ಓಡಿಸಿದನು.

೫

ಶೇಷಪ್ಪನನ್ನು ಕೊನೆಗಾಣಿಸಿದ ಆನಂದದ ಆವೇಶದಲ್ಲಿ ಬಾಲಕೃಷ್ಣನು ಕಾರನ್ನು ವೇಗವಾಗಿ ಓಡಿಸುತ್ತಾ ತನ್ನ ಬಂಗಲೆಯ ಸಮೀಪಕ್ಕೆ ಬಂದು ನೋಡಲು ಆ ಸ್ಥಳದಲ್ಲಿ ನೂರಾರು ಜನರು ಸೇರಿಹೋಗಿದ್ದರು.

ಜನಸಂದಣಿಯನ್ನು ನೋಡಿ ಅಣ್ಣತಂಗಿಯರಿಬ್ಬರೂ ಗಾಬರಿಯಾದರು.

'ತಾನು ಏರ್ಪಾಡು ಮಾಡಿಕೊಂಡಿದ್ದು ಸರೋಜಳಿಗೆ ತಿಳಿದಿರಬಹುದು. ತಾವು ಶೇಷಪ್ಪನೊಡನೆ ಅತ್ತ ಹೋಗುತ್ತಲೇ ಅವಳು ಪೋಲೀಸಿಗೆ ವರ್ತಮಾನ ಕೊಟ್ಟಿರಬಹುದು. ಆ ಕಾರಣಕ್ಕಾಗಿ ತಮ್ಮಿಬ್ಬರನ್ನು ದಸ್ತಗಿರಿ ಮಾಡಲು ಯಾಮಿಕರು ಕಾಯುತ್ತಿರಬಹುದು. ವಿಷಯವು ಒಬ್ಬರಿಂದೊಬ್ಬರಿಗೆ ಹರಡಿ ನೂರಾರು ಜನರು ಇಲ್ಲಿ ಸೇರಿರುವರು.' ಎಂದು ಬಾಲಕೃಷ್ಣನು ಯೋಚಿಸಿ ಕೊಂಡನು. ಪುನಃ 'ಸರೋಜಳು ಹಾಗೆ ಹೇಳಿದ್ದರೆ ಯಾಮಿಕರು ಇಲ್ಲೇಕೆ ಕಾಯುವರು ? ಬೇರೊಂದು ಕಾರಿನಲ್ಲಿ ನಮ್ಮನ್ನು ಹಿಂಬಾಲಿಸುತ್ತಿದ್ದರು. ಸರೋಜಳು ಯಾರ ಮುಂದೂ ಹೇಳಿಲ್ಲ. ಏನೋ ವಿಶೇಷವು ನಡೆದಿದೆ' ಎಂದು ಭಾವಿಸಿ ಕಾರನ್ನು ಬಂಗಲೆಯ ಮುಂದೆ ನಿಲ್ಲಿಸಿದನು.

ಜನರು ಅವನ ಕಾರನ್ನು ಬೆಲ್ಲಕ್ಕೆ ಇರುವೆಗಳು ಮುತ್ತಿಕೊಂಡಂತೆ ಮುತ್ತಿ ಕೊಂಡರು.

ಬಾಲಕೃಷ್ಣನು ವಿಷಯವೇನೆಂದು ಅವರನ್ನೇ ಕೇಳಲು ಸರೋಜಿನಿಯು ಬಾವಿಯಲ್ಲಿ ಬಿದ್ದು ಮೃತಳಾದಳೆಂದು ತಿಳಿಯಿತು.

ಬಾಲಕೃಷ್ಣನು ಅತ್ಯಂತ ಗಾಬರಿಯಾದನು. ಅವನ ಮನದಲ್ಲಿ ನಾನಾ ವಿಧವಾದ ಯೋಚನೆಗಳುದ್ಭವಿಸಿದುವು.

ಕೂಡಲೇ ಕಾರನ್ನು ಕಾಂಪೌಂಡಿನೊಳಗೆ ಕೊಂಡೊಯ್ದು ಗ್ಯಾರೇಜಿನಲ್ಲಿ ಬಿಟ್ಟು ಹಿಂದುಗಡೆ ಹೋದನು.

ಬಾವಿಯು ಬಂಗಲೆಯ ಆವರಣದಲ್ಲಿಯೇ ಹಿಂಭಾಗದಲ್ಲಿತ್ತು. ಅಲ್ಲಿಯೂ ಅಸಾಧ್ಯ ಜನಸಂದಣಿಯು ನೆರೆದಿತ್ತು.

ಯಾಮಿಕರು ಬಾಗಿಲ ಬಳಿಯಲ್ಲಿ ನಿಂತು ಯಾರನ್ನೂ ಒಳಕ್ಕೆ ಬಿಡದಂತೆ ತಡೆದಿದ್ದರು.

ಬಾಲಕೃಷ್ಣನು ಹೋಗುವ ದಾರಿಯಲ್ಲಿಯೇ ಇನ್ಸ್‌ಪೆಕ್ಟರ್ ವಿಶ್ವನಾಥನನ್ನು ಸಂಧಿಸಿದನು.

ಇನ್ಸ್‌ಪೆಕ್ಟರನು ಬಾಲಕೃಷ್ಣನ ಕೈ ಕುಲುಕಿ—

"ನೀವು ಎಲ್ಲಿಗೆ ಹೋಗಿದ್ದಿರಿ ?" ಎಂದು ಕೇಳಿದನು.

ಬಾಲಕೃಷ್ಣನು ಸ್ವಲ್ಪಮಾತ್ರವೂ ತಡವರಿಸಲಿಲ್ಲ. ತಕ್ಷಣವೇ ಉತ್ತರವನ್ನು ಸಿದ್ಧ ಪಡಿಸಿಕೊಂಡನು.

"ನಾವಿಬ್ಬರೂ ಸಿನಿಮಾಕ್ಕೆ ಹೋಗಿದ್ದೆವು."

"ಇವರನ್ನು (ಸರೋಜಿನಿಯನ್ನು) ಬಿಟ್ಟು ಹೋದಿರೇಕೆ ?"

"ಕರೆದುದಕ್ಕೆ ಅವಳು ನಾನು ಬರುವುದಿಲ್ಲವೆಂದು ಹೇಳಿದಳು."

"ಏಕೆ ?"

"ಏನು ಕಾರಣವೋ, ಏನೋ, ನಾವಿಬ್ಬರೂ ಸಿನಿಮಾಕ್ಕೆ ಹೋದನಂತರ ತಾನು ಆತ್ಮಹತ್ಯೆ ಮಾಡಿಕೊಳ್ಳುವ ಉದ್ದೇಶದಿಂದ ಬರಲಾರೆನೆಂದು ಹೇಳಿರ ಬಹುದು. ಆಗ ನಾನು ಈಕೆಯ ಮನೋಭಿಪ್ರಾಯವನ್ನು ಅರಿಯದೆ ಹೋದೆನು."

"ನಿಮ್ಮ ತಂಗಿಯವರಿಗೆ ಏನಾದರೂ ವ್ಯಾಧಿಯಿತ್ತೇ ?"

"ಹೌದು ! ಆಕೆಗೆ ಸಹಿಸಲಾಗದ ಹೊಟ್ಟೇನೋವಿನ ವ್ಯಾಧಿ ಯಿತ್ತು."

"ಎಷ್ಟು ದಿನಗಳಿಂದ ?"

"ಹಲವಾರು ವರ್ಷಗಳಿಂದ."

"ಅದಕ್ಕೆ ಔಷಧಿ ಕೊಡಿಸುತ್ತಿದ್ದಿರಾ ?"

"ಕೊಡಿಸಿದ್ದೆನು. ನನ್ನ ತಂದೆಯುವರು ಇದಕ್ಕಾಗಿ ನೂರಾರು–ಸಾವಿರಾರು ರೂಪಾಯಿಗಳನ್ನು ಖರ್ಚು ಮಾಡಿದರೂ ವ್ಯಾಧಿಯು ನಿವಾರಣೆಯಾಗಲಿಲ್ಲ.

ನಾನೂ ಸಹ ಖರ್ಚು ಮಾಡಿದೆ. ನನ್ನ ಸರ್ವಪ್ರಯತ್ನವನ್ನೂ ಮಾಡಿದೆ, ಆದರೂ ಪರಿಹಾರವಾಗಲಿಲ್ಲ. ಏನು ಗ್ರಹಚಾರವೋ, ಏನೋ."

ಸರಸ್ವತಿಯು ಅಕ್ಕನು ಆತ್ಮಹತ್ಯೆ ಮಾಡಿಕೊಂಡಿದುದಕ್ಕಾಗಿ ರೋಧಿಸುತ್ತಿದ್ದಳು.

"ಆ ಹೊಟ್ಟೇನೋವಿನ ಭಾದೆಯನ್ನು ತಡೆಯಲಾರದೆ ಆತ್ಮಹತ್ಯೆ ಮಾಡಿಕೊಂಡಿರುವವಳಲ್ಲವೇ ?"

"ಹೌದು."

ಬಾಲಕೃಷ್ಣನು ತನ್ನ ಕೈಪೀಯತ್ತು ಬರೆದುಕೊಟ್ಟನು.

ಬಳಿಕ ಮೂವರೂ ಬಾವಿಯ ಬಳಿಗೆ ಬಂದರು.

ಬಾವಿಗೆ ಬಿದ್ದಿದ್ದ ಸರೋಜಿನಿಯ ಶವವನ್ನು ಮೇಲಕ್ಕೆ ಎತ್ತಿದರು.

ಯಾಮಿಕರು ನೆರೆದವರೆಲ್ಲರನ್ನೂ ಚೆದುರಿಸಿದರು.

ಪಂಚಾಯ್ತಿದಾರರ ಮುಖದಲ್ಲಿ ವಿಶ್ವನಾಥನು ಶವದ ಮಹಜರನ್ನು ಮುಗಿಸಿ ಬಳಿಕ ಅದನ್ನು ಆಸ್ಪತ್ರೆಗೆ ಸಾಗಿಸಿದನು.

ನೆರೆದ ಜನ ಜಂಗುಳಿಯು ನಾನಾ ವಿಧವಾಗಿ ಮಾತನಾಡಿಕೊಳ್ಳುತ್ತಾ ಚೆದುರಿತು.

ಆಸ್ಪತ್ರೆಯಲ್ಲಿ ಶವ ಪರೀಕ್ಷೆಯಾದನಂತರ ತನ್ನ ತಂಗಿಯ ರಹಸ್ಯವು ಬಯಲಾಗುವುದೆಂಬ ಭೀತಿಯಿಂದ ಬಾಲಕೃಷ್ಣನು ಅದಕ್ಕೆ ಸಂಬಂದ ಪಟ್ಟವರನ್ನೆಲ್ಲಾ ಸರಿ ಮಾಡಿಕೊಂಡನು.

ಸಾವಿರಾರು ರೂಪಾಯಿಗಳು ಅವನ ಕೈಯಿಂದ ಜಾರಿತು.

ಸರೋಜಿನಿಯು ಹೊಟ್ಟೇನೋವಿನ ದೆಶೆಯಿಂದಲೇ ಆತ್ಮಹತ್ಯೆ ಮಾಡಿಕೊಂಡಳೆಂದು ತೀರ್ಮಾನವಾಯಿತು.

ದೊಡ್ಡ ಗಂಡಾಂತರದಿಂದ ತಾನು ಉಳಿದುಕೊಂಡೆನೆಂದು ಬಾಲಕೃಷ್ಣನು ಆನಂದಗೊಂಡನು.

'ತಾನು ಶೇಷಪ್ಪನೊಡನೆ ಹೋಗುವುದನ್ನು ಸರೋಜಿನಿಯು ನೋಡಿರಬಹುದು. ಶೇಷಪ್ಪನಿಗೆ ಏನೋ ಅಪಾಯುವುಂಟುಮಾಡಿ ಅನಂತರ ತನಗೂ ಏನಾದರೊಂದು ಬಗೆಯಲ್ಲಿ ತೊಂದರೆ ಕೊಡಬಹುದೆಂದು ಭಾವಿಸಿ ಸರೋಜಳು

ಆತ್ಮಹತ್ಯೆಮಾಡಿಕೊಂಡಿರುವಳು.' ಎಂಬುದಾಗಿ ಬಾಲಕೃಷ್ಣನು ತೀರ್ಮಾನ ಮಾಡಿಕೊಂಡನು.

ಎಂಟು ದಿನಗಳು ಕಳೆಯಿತು.

ತಮ್ಮ ಮಗನು ಎಂಟು ದಿನಗಳಿಂದಲೂ ಪತ್ತೆಯಿಲ್ಲದಿರುವುದನ್ನು ಕಂಡು ಗಾಬರಿಯಾದ ಶೇಷಪ್ಪನ ತಂದೆಯಾದ ಗೋಪಾಲಯ್ಯನು ಪೋಲೀಸ್ ಠಾಣೆಗೆ ದೂರಿತ್ತನು.

ಇನ್ಸ್‌ಪೆಕ್ಟರನು ಶೇಷಪ್ಪನ ವಯಸ್ಸು, ಆಕಾರ, ಎತ್ತರ, ದಪ್ಪ, ಶರೀರದ ಬಣ್ಣ, ಮಾತನಾಡುವ ವಿಧಾನ, ಮತ್ತು ಎಂಟು ದಿನಗಳ ಹಿಂದೆ ಧರಿಸಿದ್ದ ಬಟ್ಟೆಗಳು ಮುಂತಾದುವುಗಳನ್ನೆಲ್ಲಾ ಕೇಳಿ ತಿಳಿದುಕೊಂಡನು.

ಶೇಷಪ್ಪನು ಬೊಂಬಾಯಿಗೋ, ಬೆಂಗಳೂರಿಗೋ, ಹೋಗಿರಬೇಕೆಂದೇ ಇನ್ಸ್‌ಪೆಕ್ಟರನ ಊಹೆಯಾಗಿತ್ತು.

ಗೋಪಾಲಯ್ಯನಿಗೆ ಅಭಯವಿತ್ತು ಹಿಂದಿರುಗಿ ಕಳುಹಿಸಿ ಶೇಷಪ್ಪನ ಚಹರೆಪಟ್ಟಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸಿಸಿದನು.

ಆ ಪ್ರಕಟಣೆಯನ್ನು ನೋಡಿ ಬಾಲಕೃಷ್ಣನು ಗಾಬರಿಯಾದನಾದರೂ ಎದೆಗುಂದಲಿಲ್ಲ. ಹಾಗೊಂದು ವೇಳೆ ರಹಸ್ಯವು ಬಯಲಾಗುವ ಪ್ರಸಂಗಬಂದರೆ ಆ ಮೊಕದ್ದಮೆಗೆ ಸಂಬಂದ ಪಟ್ಟವರನ್ನು ಸರಿಪಡಿಸಿಕೊಳ್ಳುವ ಚೈತನ್ಯವುಳ್ಳವನಾಗಿದ್ದನು.

ಗುಟ್ಟು ರಟ್ಟಾಗಲಿಲ್ಲ.

ತಮ್ಮ ಮಗನು ಇದ್ದಕ್ಕಿದ್ದ ಹಾಗೆಯೇ ಯಾರ ಜೊತೆಯಲ್ಲಿಯೋ ಬೆಂಗಳೂರು, ತಪ್ಪಿದರೆ ಬೊಂಬಾಯಿಗೆ ಹೋಗಿರಬೇಕೆಂದು ಗೋಪಾಲಯ್ಯನು ನಿರ್ಧರಮಾಡಿಕೊಂಡನು.

ಶೇಷಪ್ಪನು ಬಾಲಕೃಷ್ಣನ ಮನೆಗೆ ಬರುತ್ತಿದ್ದುದು ಸಾಮಾನ್ಯವಾಗಿ ಯಾರಿಗೂ ತಿಳಿದಿರಲಿಲ್ಲ. ಅಲ್ಲದೆ ಬಾಲಕೃಷ್ಣನು ಶೇಷಪ್ಪನನ್ನು ಕಾರಿನಲ್ಲಿ ಕೂರಿಸಿ ಕರೆದುಕೊಂಡು ಹೋದುದನ್ನು ಯಾರೊಬ್ಬರೂ ನೋಡಿರಲಿಲ್ಲ. ಆ ಪ್ರಯುಕ್ತ ಬಾಲಕೃಷ್ಣನ ಮೇಲೆ ಯಾವ ವಿಧವಾದ ಅಪವಾದವು ಬರಲವಕಾಶವಾಗಲಿಲ್ಲ.

ಶೇಷಪ್ಪನ ಸ್ಥಿತಿಗತಿಗಳೇನಾಯಿತೆಂಬುದನ್ನು ತಿಳಿದವರು ಇಬ್ಬರೇ. ಮೂರನೆಯವರ್ಯಾರಿಗೂ ತಿಳಿಯದು.

ಸರೋಜಿನಿಯ ಭೌತಿಕ ಶರೀರವು ಅಂತರಾತ್ಮನಲ್ಲಿ ಲೀನವಾಗಿ ಶವರೂಪದ ದೇಹವು ಅಗ್ನಿಗಾಹುತಿಯಾದ ಮೇಲೆ, ಬಾಲಕೃಷ್ಣನೇ ಆಕೆಯ ತಿಥಿ ಕರ್ಮಾದಿಗಳನ್ನು ನೆರವೇರಿಸಿದನು.

ಇನ್ನು ಸರಸ್ವತಿಯ ಮನೋಭಿಲಾಷೆಯನ್ನು ಈಡೇರಿಸುವುದೊಂದು ಉಳಿಯಿತು.

ಇನ್ನು ಅನಾದರಣೆ ಮಾಡುವುದು ಅನಾವಶ್ಯಕವೆಂದು ತಿಳಿದು ಜಗನ್ನಾಥನನ್ನು ಕರೆಯಿಸಿ ಆತನ ಒಪ್ಪಿಗೆಯನ್ನು ಪಡೆದು ಪುರೋಹಿತರಿಂದ ಮುಹೂರ್ತವನ್ನು ಗೊತ್ತುಮಾಡಿ, ಆ ಶುಭ ಘಳಿಗೆಯಲ್ಲಿ ಧಾರಾಪೂರ್ವಕವಾಗಿ, ವಿವಾಹವನ್ನು ಅತ್ಯಂತ ವೈಭವದಿಂದ ನೆರವೇರಿಸಿದನು.

ಸರಸ್ವತಿ, ಜಗನ್ನಾಥರು ಅತ್ಯಾನಂದಗೊಂಡರು.

ಜಗನ್ನಾಥನ ಜೀವನೋಪಾಯಕ್ಕೆ ತೊಂದರೆಯೇನೂ ಇಲ್ಲದ್ದರಿಂದ ಸರಸ್ವತಿಯು ಅಲ್ಲಿ ನೆಮ್ಮದಿಯಾಗಿರುವಳೆಂದು ಬಾಲಕೃಷ್ಣನು ಭಾವಿಸಿಕೊಂಡನು.

ತನಗೆ ಅಡಿಗೆ ಮಾಡುವವರಾರೂ ಇಲ್ಲದ ಪ್ರಯುಕ್ತ ಇನ್ನು ತಾನು ಒಂಟಿ ಜೀವನವನ್ನು ನಡೆಸಬಾರದೆಂದು ಭಾವಿಸಿ ಹಿಂದೆ ತಾನು ಒಂದೆರಡು ಸಾರಿ ನಿರಾಕರಿಸಿ ಬಿಟ್ಟಿದ್ದ ಕಾಂಚೀನಗರದ ದೇವರಾಜಯ್ಯನ ಮಗಳಾದ ರಾಜೇಶ್ವರಿಯನ್ನು ಅತ್ಯಂತ ವಿಜೃಂಭಣೆಯಿಂದಲೇ ವಿವಾಹವಾದನು.

ಶೇಷಪ್ಪನನ್ನು ಕೊಲೆಮಾಡಿದ ಭಯವು ಆಗಾಗ್ಗೆ ಕಾಣಿಸಿಕೊಳ್ಳುತ್ತಿದ್ದುದರಿಂದ ಆ ಸಮಯದಲ್ಲೆಲ್ಲಾ ಸರಸ್ವತಿಯ ಬಳಿಗೆ ಹೋಗಿ ಎಚ್ಚರಿಸುತ್ತಿದ್ದನು.

ತನ್ನ ಮನೋಭಿಲಾಷೆಯನ್ನು ನೆರವೇರಿಸಿದುದರಿಂದ ಅಣ್ಣನ ರಹಸ್ಯವನ್ನು ಯಾರಲ್ಲಿಯೂ ಹೇಳಬಾರದೆಂದು ಸರಸ್ವತಿಯು ನಿರ್ಧರಮಾಡಿಕೊಂಡಿದ್ದಳು.

ಬಾಲಕೃಷ್ಣನಿಗೆ ರಾಜನಗರದಲ್ಲಿರುವುದಕ್ಕೇ ಒಂದು ವಿಧವಾದ **ಭೀತಿ**ಯುಂಟಾಯಿತು.

ಈ ನಗರದಲ್ಲಿರುವುದೇ ಕ್ಷೇಮವಲ್ಲವೆಂದು ಭಾವಿಸಿ ಬಾಲಕೃಷ್ಣನು ತನ್ನ ಅತ್ತೇಮಾವಂದಿರು ಇರುವ ಕಾಂಚೀನಗರಕ್ಕೆ ಹೋಗಬೇಕೆಂದು ನಿರ್ಧರಿಸಿ ಅದಕ್ಕೆ ಬೇಕಾದ ಏರ್ಪಾಡು ಮಾಡಿಕೊಂಡನು.

ತನ್ನ ಮನೆ, ಮಠಗಳನ್ನು ಮಾರಿ ಕಾಂಚೀನಗರಕ್ಕೆ ಬಂದು ಅಲ್ಲಿ ತನಗೆ ಅನುಕೂಲವಾಗುವಂತಹ ಬಂಗಲೆಯನ್ನು ಕೊಂಡುಕೊಂಡನಲ್ಲದೆ, ಇನ್ನೂ ಹಲವು ಬಂಗಲೆಗಳನ್ನು ತೆಗೆದುಕೊಂಡನು.

ತನ್ನ ತಂಗಿಯು ತನ್ನ ಎದುರಿನಲ್ಲಿಯೇ ಇರಬೇಕೆಂದು ಭಾವಿಸಿ ಜಗನ್ನಾಥ ನನ್ನು ಒಡಂಬಡಿಸಿ ಅವರಿಬ್ಬರನ್ನೂ ಕಾಂಚೀನಗರಕ್ಕೆ ಕರೆದುಕೊಂಡು ಬಂದು ಭಾವಮೈದುನನಿಗಾಗಿ ದೊಡ್ಡ ಪ್ರೆಸ್ಸನ್ನು ಖರೀದಿಮಾಡಿ ತನ್ನ ತಂಗಿಯ ಹೆಸರಿ ನಲ್ಲಿ ಆ ಪ್ರೆಸ್ಸನ್ನು ಬರೆಯಿಸಿ ರಿಜಿಸ್ಟರ್ಡ್ ಮಾಡಿಸಿಕೊಟ್ಟನು.

ಈ ಒಂದು ವಿಷಯದಲ್ಲಿ ಜಗನ್ನಾಥನಿಗೆ ಅಸಮಾಧಾನವಾಯಿತು. ಆದರೂ ಅದನ್ನು ತೋರ್ಪಡಿಸಿಕೊಳ್ಳಲಿಲ್ಲ.

ಜಗನ್ನಾಥನು ಜೂಜುಕೋರನಾದ್ದರಿಂದ ಪ್ರೆಸ್ಸನ್ನು ಹಾಳುಮಾಡಬಹು ದೆಂಬ ಅಭಿಪ್ರಾಯದಿಂದ ಬಾಲಕೃಷ್ಣನು ತನ್ನ ತಂಗಿಯ ಹೆಸರಿಗೆ ಆ ಪ್ರೆಸ್ಸನ್ನು ಬರೆಯಿಸಿದ್ದನು. ಹಾಗೆ ಬರೆಯಿಸಿದುದೇ ಜಗನ್ನಾಥನ ಅಸಮಾಧಾನಕ್ಕೆ ಕಾರಣವಾಯಿತು.

ಅವನ ಮೇಲಿನ ಕ್ರೋಧವನ್ನು ತನ್ನ ಪತ್ನಿಯ ಮೇಲೆ ತೋರಿಸಿಕೊಳ್ಳ ಲಿಲ್ಲ. ಅದನ್ನು ಅವಕಾಶ ದೊರೆತಾಗ ಆತನ ಮೇಲೆಯೇ ತೀರಿಸಿಕೊಳ್ಳ ಬೇಕೆಂದು ಸಮಯವನ್ನು ಕಾಯುತ್ತಿದ್ದನು.

ಬಾಲಕೃಷ್ಣನು ಜಗನ್ನಾಥನ ಅಂತರ್ಯವನ್ನು ಅರಿಯದೆ ಹೋದನು.

ಇನ್ನು ತಾನು ಸೋಮಾರಿಯಂತೆ ಕಾಲ ಕಳೆಯಬಾರದೆಂದು ಯೋಚಿಸಿ ಸ್ವಂತವಾಗಿ ಒಂದು ಔಷಧಾಲಯವನ್ನು ತೆಗೆದನು.

ಶೇಷಪ್ಪನ ನೆನಪು ಬಂದಾಗಲೆಲ್ಲಾ ಸರಸ್ವತಿಯ ಮನೆಗೆ ಹೋಗಿಯೋ, ಅಥವಾ ಆಕೆಯನ್ನು ತನ್ನಲ್ಲಿಗೆ ಕರೆಯಿಸಿಕೊಂಡೋ, ಆ ವಿಷಯವಾಗಿ ಬಹಳ ಎಚ್ಚರಿಕೆ ಕೊಡುತ್ತಿದ್ದನು.

ಹಲವು ತಿಂಗಳು ಕಳೆಯಿತು.

ಒಂದು ದಿನ ಪ್ರಾತಃಕ್ಕಾಲ ತನ್ನ ಬಂಗಲೆಯ ವಿಶ್ರಾಂತಿ ಗೃಹದಲ್ಲಿ ಕುಳಿತು ಕೊಂಡು ವೈದ್ಯಕೀಯಕ್ಕೆ ಸಂಬಂಧ ಪಟ್ಟ ಇಂಗ್ಲೀಷ್ ಪುಸ್ತಕವನ್ನು ಓದುತ್ತಿರಲು ಟಪಾಲಿನವನು ಕಾಗದವನ್ನು ತಂದಿತ್ತು ಹೊರಟು ಹೋದನು.

ತನಗೆ ಮಾಮೂಲಿನಂತೆ ಬರುವ ಕಾಗದಗಳಲ್ಲಿ ಇದೂ ಒಂದು ಕಾಗದವೆಂದು ಬಾಲಕೃಷ್ಣನು ಭಾವಿಸಿಕೊಂಡು, ಟಪಾಲು ಮುದ್ರೆಯನ್ನು ನೋಡಿ ವಿಸ್ಮಿತನಾಗಿ ವಿಷಯವನ್ನರಿಯುವ ಕುತೂಹಲದಿಂದ ಕವರನ್ನು ಹರಿದು ಒಳಗಿದ್ದ ಕಾಗದವನ್ನು ತೆಗೆದಿದ್ದನು.

ಮುಂದಿನ ವಿಷಯವು ಪ್ರಥಮ ಪರಿಚ್ಛೇದದಲ್ಲಿಯೇ ತಿಳಿಸಿದೆ.

## ೬

ಸರಸ್ವತಿಯು ತನ್ನ ಮನೆಯಲ್ಲಿ ಒಬ್ಬಳೇ ಕುಳಿತುಕೊಂಡು **"ಹೊಸಲು ದಾಟದ ಗಂಡು"** ಎಂಬ ಹೆಸರಿನ ಪತ್ತೇದಾರಿ ಕಾದಂಬರಿಯನ್ನು ಓದುತ್ತಿರಲು ಬಾಲಕೃಷ್ಣನು ಪ್ರವೇಶಿಸಿದನು.

ಆತನ ಮುಖಚಹರೆಯನ್ನು ನೋಡುತ್ತಲೇ ಸರಸ್ವತಿಯು ಗಾಬರಿಯಾದಳು.

ಕಾದಂಬರಿಯನ್ನು ಪಕ್ಕದಲ್ಲಿಟ್ಟು ಅಣ್ಣನ ಮುಖವನ್ನು ನೋಡುತ್ತಾ ವಿಷಯವೇನೆಂದು ಸಂಜ್ಞಾಪೂರ್ವಕವಾಗಿ ಕೇಳಿದಳು.

ಬಾಲಕೃಷ್ಣನು ಕಾಗದವನ್ನು ಆಕೆಯ ಮುಂದೆಸೆದು—

"ಇದನ್ನು ಓದಿ ನೋಡು. ವಿಷಯವೇನೆಂಬುದು ನಿನಗೆ ತಿಳಿಯುತ್ತದೆ." ಎಂದು ಹೇಳಿದನು.

ಸರಸ್ವತಿಯು ಕಾಗದವನ್ನು ಓದಿದಳು. ಬಾಲಕೃಷ್ಣನು ನಿಂತುಕೊಂಡೇ ಆಕೆಯ ಮುಖವನ್ನು ದುರುಗುಟ್ಟಿಕೊಂಡು ನೋಡುತ್ತಿದ್ದನು.

ಸರಸ್ಯತಿಯ ಮುಖದಲ್ಲಿ ಗಾಬರಿಯ ಚಿನ್ಹೆಗಳು ಮೂಡಿದುದನ್ನೂ ನೋಡಿದನು.

ಸರಸ್ವತಿಯು ಕೈಯ್ಯಲ್ಲಿ ಕಾಗದವನ್ನು ಹಿಡಿದುಕೊಂಡೇ—

"ಈ ಕಾಗದವನ್ನು ಯಾರು ಬರೆದವರು ?" ಎಂದು ಕೇಳಿದಳು.

ಬಾಲಕೃಷ್ಣನು ವ್ಯಂಗ್ಯವಾಗಿ—

"ಯಾರು ಬರೆದವರೆಂದು ಕೇಳುವೆಯಾ ? ನಿನಗೇನೂ ತಿಳಿಯದಲ್ಲವೇ ? ಎಂದು ಗದರಿದನು.

---

* **ಹೊಸಲು ದಾಟದ ಗಂಡು—ಪುರುಷೋತ್ತಮನ ಇಪ್ಪತ್ತಮೂರನೆಯ ಸಾಹಸ.**

"ಅಣ್ಣಾ!" ನಿಜವಾಗಿಯೂ ನನಗೆ ತಿಳಿಯದು. ಏಕೆ ಈ ರೀತಿ ನನ್ನ ಮೇಲೆ ಸಿಟ್ಟಾಗಿರುವೆ ?"

"ಸರಸ್ವತಿ ! ಈ ಬಣ್ಣದ ಮಾತುಗಳನ್ನು ನನ್ನೊಡನೆ ಆಡಬೇಡ. ತಿಳಿಯಿತೇ ? ನಿಜ ಹೇಳು ! ಯಾರ ಕೈಯ್ಯಲ್ಲಿ ಈ ಕಾಗದವನ್ನು ಬರೆಯಿಸಿರುವೆ ?"

"ನಾನೇಕೆ ಬರೆಯಿಸಲಿ ? ನನಗೆ ಈ ವಿಷಯವೇ ತಿಳಿಯದು."

"ಅಯ್ಯೋ! ಪಾಪ, ಏನೂ ತಿಳಿಯದಲ್ಲವೇ ? ಶೇಷಪ್ಪನನ್ನು ಕೊಲೆ ಮಾಡಿದ ವಿಷಯವು ನಿಮ್ಮಿಬ್ಬರ ವಿನಃ ಬೇರೆ ಯಾರಿಗೂ ತಿಳಿಯದು. ಹೀಗಿರುವಾಗ ಈ ಕಾಗದವನ್ನು ನನಗೆ ಬರೆದವರಾರು ? ಹೇಳು ?"

"ನಿಜವಾಗಿಯೂ ನನಗೆ ತಿಳಿಯದು."

"ಸರಸ್ವತಿ ! ಸುಳ್ಳಾಡಬೇಡ. ನಿಜ ಹೇಳು ?"

"ನಿಜವಾಗಿಯೂ ನನಗೆ ತಿಳಿಯದು. ನಾನೇಕೆ ಸುಳ್ಳು ಹೇಳಲಿ ?"

"ನೀನು ಈ ರೀತಿ ಹೇಳಿದರೆ ನಾನು ಒಪ್ಪುವೆನೆಂದು ತಿಳಿದೆಯಾ ? ಆ ಸಮಯದಲ್ಲಿ ನಿನ್ನನ್ನು ನನ್ನ ಜೊತೆಯಲ್ಲಿ ಕರೆದುಕೊಂಡು ಹೋದದ್ದೇ ದೊಡ್ಡ ತಪ್ಪಾಯಿತು. ಕರೆದುಕೊಂಡು ಹೋದ ತಪ್ಪಿಗೆ ನಿನ್ನನ್ನೂ ಆ ನದಿಗೆ ತಳ್ಳಿಬಿಡಬೇಕಾಗಿತ್ತು. ಹಾಗೆ ಮಾಡಿದ್ದರೆ ನನಗೆ ಈ ವಿಧವಾದ ಕಾಗದವೇ ಬರುತ್ತಿರಲಿಲ್ಲ."

"ಅಣ್ಣಾ ! ನಿನಗೆ ನನ್ನಮೇಲೆ ಅಸಮಾಧಾನ ಮತ್ತು ಕೋಪವಿದೆಯಲ್ಲವೇ? ........ಹಾಗಿದ್ದರೆ ತಡವೇಕೆ ? ಈಗಲೇ ನನ್ನನ್ನು ಕೊಂದುಬಿಡು. ನಾನು ಬೇಡವೆನ್ನಲಾರೆ ?"

"ಸರಸ್ವತಿ ! ಈ ಮರುಳು ಮಾತಿಗೆ ಮೋಸ ಹೋಗುವವನು ನಾನಲ್ಲ. ನೀನು ಈ ಕಾಗದವನ್ನು ಬರೆಯಿಸಿ ಏನೂ ಅರಿಯದವಳಂತಿರುವೆ. ನಿನ್ನ ಜೊತೆಗೆ ಬೇರೆ ಯಾರೋ ಸಹಾಯಕರಾಗಿ ಸೇರಿಕೊಂಡಿರುವರು. ಬಹುಶಃ ನಿನ್ನ ಪತಿಯೇ ಇದ್ದರೂ ಇರಬಹುದು. ಅವನು ಹೆಂಡ ಕುಡುಕ. ಮೇಲಾಗಿ ಜೂಜುಕೋರ. ತಾನು ದುಡಿದುದೆಲ್ಲವೂ ಜೂಜಿಗೇ ಸಾಲದು. ನೀನು ಆತನ ಬಳಿಯಲ್ಲಿ ಈ ವಿಷಯವನ್ನು ಹೇಳಿರುವೆ. ಅವನು ನನ್ನಿಂದ ಹಣ ಕಸಿಯುವ ಯುಕ್ತಿಯಿಂದ ಈ ರೀತಿ ಬರೆದಿರುವನೆಂದು ನಿರ್ಧಾರವಾಗಿ ಹೇಳಬಹುದಾಗಿದೆ."

ಅಣ್ಣಾ ! ನನ್ನನ್ನು ಅಂತಹ ನೀಚಳೆಂದು ಭಾವಿಸಬೇಡ. ನಾನು ಯಾರೊಡನೆಯೂ ಆ ವಿಷಯವನ್ನು ಮಾತ್ರ ಹೇಳಲಿ."

"ಹಾಗಾದರೇ! ಈ ಕಾಗದವನ್ನು ಬರೆದವರಾರು?"

"ಯಾರು ಬರೆದರೋ ನನಗೆ ತಿಳಿಯದು. ನಾನು ಹೇಳಿ ಬರೆಸಿದಳೆಂದು ನನ್ನನ್ನು ಏಕೆ ಈ ರೀತಿ ಪೀಡಿಸುತ್ತಿರುವೆ?"

"ಸರಸ್ವತೀ! ನೀನು ಮಾತನಾಡುತ್ತಾ ಹೋದಹಾಗೆ ನನ್ನ ಕೋಪವು ಇನ್ನೂ ಹೆಚ್ಚುತ್ತಲೇ ಹೋಗುತ್ತದೆ. ನಿನ್ನ ಕೈವಾಡವಿಲ್ಲದೆ ಈ ಕಾಗದವು ಬಂದಿಲ್ಲ. ನೀನು ಒಪ್ಪಿದವನಿಗೆ ನಿನ್ನನ್ನಿತ್ತು ವಿವಾಹ ಮಾಡಿದುದರ ಪರಿಣಾಮವಾಗಿ, ಈ ರೀತಿ ಉಪಕಾರವನ್ನು ತೀರಿಸಿಕೊಳ್ಳುತ್ತಿರುವೆ. ಅಲ್ಲವೇ?"

ಈ ಮಾತಿನಿಂದ ಸರಸ್ವತಿಗೂ ಕೋಪವುಂಟಾಯಿತು

"ಅಣ್ಣಾ! ನಾನು ಯಾವ ವಿಧದಲ್ಲಿ, ಎಷ್ಟು ಬಗೆಯಲ್ಲಿ ಹೇಳಿದರೂ ನೀನು ನಂಬುತ್ತಿಲ್ಲ. ಇನ್ನು ನಾನು ನಿನ್ನನ್ನು ಸಮಾಧಾನ ಪಡಿಸಲಾರೆ. ತಲೆಯನ್ನು ಕಡಿದು ಮುಂದಿಟ್ಟರೂ 'ಇದು ಮನುಷ್ಯರ ತಲೆಯಲ್ಲ. ಕುರಿಯ ತಲೆ' ಎನ್ನುವವರಿಗೆ ಯಾವರೀತಿ ಸಮಾಧಾನ ಪಡಿಸಬೇಕು? ನಾನೇ ಬರೆದುದೋ, ಅಥವಾ ಬರೆಯಿಸಿದುದೋ ಹೇಗೆ ಬೇಕಾದರೂ ಭಾವಿಸಿಕೊ. ನಿನ್ನ ಇಷ್ಟ ಬಂದಹಾಗೆ ಮಾಡು ನಾನು ಬೇಡವೆನ್ನಲಾರೆ."

—ಎಂದು ಸಿಟ್ಟಿನ ಆವೇಶದಲ್ಲಿ ತನಗರಿವಿಲ್ಲದೆಯೇ ನುಡಿದುಬಿಟ್ಟಳು.

ತಂಗಿಯ ಮಾತನ್ನು ಕೇಳುತ್ತಲೇ ಬಾಲಕೃಷ್ಣನ ಕೈಕಾಲುಗಳು ತಣ್ಣಗಾದುವು.

ಸಿಟ್ಟು ಮೇರೆ ಮೀರಿತು. ಆದರೇ! ಆಗ ಸರಸ್ವತಿಯ ಮೇಲೆ ಕೈ ಮಾಡುವ ಪರಿಸ್ಥಿತಿಯಲ್ಲಿರಲಿಲ್ಲ. ಹೊಟ್ಟೆಯಲ್ಲಿ ಸಿಟ್ಟಿದ್ದರೂ ರೆಟ್ಟೆಯಲ್ಲಿ ಬಲವಿಲ್ಲದಂತಾಯಿತು. ಆತನ ಸ್ಥಿತಿ.

"ನೀನು ಸತ್ಯವಾಗಿಯೂ ಬರೆದಿಲ್ಲವೇ?"

"ಇಲ್ಲ."

—ಎಂದು ಗಾಂಭೀರ್ಯದಿಂದ ಸರಸ್ವತಿಯು ಉತ್ತರವಿತ್ತಳು.

"ಯಾರೊಡನೆಯೂ ಹೇಳಲಿಲ್ಲವೇ?"

"ಇಲ್ಲ."

"ನಿನ್ನ ತಂದೆ, ತಾಯಿಯರ ಮೇಲೆ ಆಣೆಯಿಟ್ಟು ಹೇಳು."

"ಅವರ ಮೇಲೆಯೇ?"

"ಹೌದು."

"ಈ ವಿಷಯಗಳಿಗಾಗಿ ಅವರ ಮೇಲೆ ಆಣೆಯಿಡಲಾರೆ."

"ಹಾಗಾದರೇ ! ಇದರಲ್ಲಿ ನಿನ್ನ ಕೈವಾಡವಿದೆ. ಇದು ಸಣ್ಣ ವಿಷಯವೆಂದು ಭಾವಿಸುವ ನಿನ್ನ ಮೂಢತನಕ್ಕೇನು ಹೇಳಲಿ ?"

"ನೀನು ಹೇಗೆ ಬೇಕಾದರೂ ಭಾವಿಸಿಕೊ. ನಾನು ಬೇಡವೆನ್ನಲಾರೆ."

'ಈಕೆಯೇ ಕಾಗದವನ್ನು ಬರೆಯಿಸಿರುವಳೆಂಬುದರಲ್ಲಿ ಸಂದೇಹವಿಲ್ಲ.' ಎಂದು ಬಾಲಕೃಷ್ಣನು ನಿರ್ಧರಿಸಿಕೊಂಡನು.

'ಸಮಯಾನುಸಾರ ಈಕೆಯನ್ನೂ ಶೇಷಪ್ಪನ ಬಳಿಗೆ ಕಳುಹಿಸದೆ ಬಿಡಬಾರದು. ಇಲ್ಲವಾದರೆ ತನಗೆ ಉಳಿಗಾಲವಿಲ್ಲ.' ಎಂದು ಯೋಚಿಸಿಕೊಂಡನು.

ಅವನ ಮನಸ್ಸಿಗೆ ಕೊಂಚಮಾತ್ರವೂ ಸಮಾಧಾನವಿಲ್ಲವಾಯಿತು. ಯಾವ ವಿಧದಲ್ಲಿಯಾದರೂ ಈ ಗಂಡಾಂತರದಿಂದ ಪಾರಾಗದೆ ಹೋದರೆ ತಾನು ಮರ್ಯಾದೆ ಯಿಂದ ಬಾಳಲು ಸಾಧ್ಯವಿಲ್ಲವೆಂದು ಯೋಚಿಸಿಕೊಂಡನು.

ಇನ್ನು ಅಲ್ಲಿರಲು ಮನಸ್ಸು ಬರಲಿಲ್ಲ. ಆಕೆಯ ಮುಖವನ್ನು ಕೆಂಗಣ್ಣು ಗಳಿಂದ ನೋಡುತ್ತಾ ಅವಳ ಕೈಯ್ಯಲ್ಲಿದ್ದ ಕಾಗದವನ್ನು ಕಿತ್ತುಕೊಂಡು ಹಿಂದಿ ರುಗಿದನು.

ಆಗಿನ ಆತನ ಮುಖಚಹರೆಯು ಸರಸ್ವತಿಯ ಮೇಲೆ ಸೇಡು ತೀರಿಸಿ ಕೊಳ್ಳದೆ ಬಿಡಲಾರೆನೆಂಬಂತೆ ತೋರುತ್ತಿತ್ತು.

ತನ್ನ ಬಂಗಲೆಗೆ ಬರುವ ವೇಳೆಗೆ ರಾಜೇಶ್ವರಿಯು ಬಾಗಿಲಲ್ಲಿ ನಿಂತು ಕೊಂಡು ತನ್ನ ದಾರಿಯನ್ನೇ ಎದುರು ನೋಡುತ್ತಿರುವುದನ್ನು ಕಂಡನು.

ಬಾಲಕೃಷ್ಣನಿಗೆ ಊಟ, ಉಪಚಾರವೇನೂ ಬೇಕಾಗಿರಲಿಲ್ಲ. ನೇರವಾಗಿ ತನ್ನ ರೂಮಿನೊಳಗೆ ಹೋಗಿ ಬಾಗಿಲು ಹಾಕಿಕೊಂಡನು.

ತಾನಾಗಿಯೇ ಹೊರಗೆ ಬರುವವರೆವಿಗೆ ಯಾರೊಬ್ಬರೂ ಬಾಗಿಲನ್ನು ತಟ್ಟಿ ತನ್ನ ಯೋಚನೆಗೆ ಭಂಗವುಂಟುಮಾಡಬಾರದೆಂದು ತಿಳಿಸಿದ್ದನು.

ಪತಿಯ ಕೋಪದ ಪ್ರಭಾವವನ್ನು ಸಂಪೂರ್ಣವಾಗಿ ಅರಿತಿದ್ದ ರಾಜೇ ಶ್ವರಿಯು ಬದಲುತ್ತರವೀಯದೆ, ಮಲಗುವ ರೂಮಿಗೆ ಹೋಗಿ ಮಂಚದಮೇಲೆ ಕುಳಿತುಕೊಂಡಳು.

ಬಾಲಕೃಷ್ಣನು ಯಾವ ಬಗೆಯಲ್ಲಿ ಯೋಚಿಸಿದರೂ ಆತನ ಮನಸ್ಸಿಗೆ ಸಮಾಧಾನವಾಗಲಿಲ್ಲ.

ತನಗೂ, ಸರಸ್ವತಿಗೂ ನಡೆದ ವಾದವಿವಾದವನ್ನು ನಾಲ್ಕಾರುಸಾರಿ ಸ್ಮರಣೆಗೆ ತಂದುಕೊಂಡು ತುಲನೆ ಮಾಡಿ ನೋಡಿದನು.

ಕಾಗದವನ್ನು ಹತ್ತಾರುಸಾರಿ ಓದಿ ನೋಡಿದನು.

'ಈ ಕಾಗದದ ತೀರ್ಮಾನದಂತೆ ಇಂದು ರಾತ್ರಿ ಹಣದ ಸಮೇತ ಹೋಗಿ ಆತನಾರೆಂಬುದನ್ನು ನೋಡುವೆನು. ಈಗ ದುಡುಕಿ ಫಲವಿಲ್ಲ. ಆತನಾರೆಂಬುದನ್ನು ನೋಡಿ ತಿಳಿದನಂತರ, ವಿಷಯವೇನಿದ್ದರೂ ತಿಳಿಯುತ್ತದೆ. ಬಳಿಕ ಆತನನ್ನೂ, ಸರಸ್ವತಿಯನ್ನೂ ಒಟ್ಟಿಗೆ ಕೊನೆಗಾಣಿಸಿದರಾಯಿತು' ಎಂದು ತೀರ್ಮಾನಿಸಿಕೊಂಡನು.

ತನ್ನ ಯೋಚನೆಯ ನಿರ್ಧರದಂತೆ ಐದುಸಾವಿರ ರೂಪಾಯಿಗಳನ್ನು ಸಿದ್ಧಮಾಡಿಟ್ಟುಕೊಂಡನು.

ತನ್ನ ಪತ್ನಿಯೊಡನೆ ಯಾವ ವಿಷಯವನ್ನೂ ಹೇಳಲಿಲ್ಲ.

# ೭

ರಾತ್ರಿ ಹನ್ನೊಂದು ಘಂಟೆಯವರೆವಿಗೂ ನಾನಾ ಬಗೆಯಾದ ಯೋಚನೆಗಳಲ್ಲಿ ಮುಳುಗಿದ್ದು ತರುವಾಯ ಐದುಸಾವಿರ ರೂಪಾಯಿಗಳನ್ನು ಕಟ್ಟಿದ್ದ ಚೀಲವನ್ನು ಜೇಬಿನಲ್ಲಿಟ್ಟುಕೊಂಡು ಮಹಡಿಯಿಂದ ಕೆಳಗಿಳಿದು ಗ್ಯಾರೇಜಿನ ಬಾಗಿಲನ್ನು ತೆಗೆದು ಕಾರನ್ನು ಸ್ಟಾರ್ಟ್ ಮಾಡಿ ರಸ್ತೆಗೆ ತಂದು ನಿಲ್ಲಿಸಿದನು.

ಬಳಿಕ ಗ್ಯಾರೇಜು, ಮತ್ತು ಗೇಟಿನ ಬಾಗಿಲನ್ನು ಹಾಕಿಕೊಂಡು ಘಂಟೆಯನ್ನು ನೋಡಲು ಹನ್ನೆರಡು ಘಂಟೆಗೆ ಇನ್ನೂ ನಲವತ್ತು ನಿಮಿಷಗಳಿದ್ದುವು.

ಹತ್ತು ನಿಮಿಷ ಕಾರಿನಲ್ಲಿಯೇ ಕುಳಿತು ಹಿಂದಿನ ಘಟನೆಗಳನ್ನೆಲ್ಲಾ ನೆನೆಯುತ್ತಾ, ಬಳಿಕ ಕಾರನ್ನು ಸ್ಟಾರ್ಟ್ ಮಾಡಿ ಸೆಕೆಂಡ್‌ಗೇರಿಗೆ ಹಾಕಿ 'ಮೂ' ಮಾಡಿದನು.

ತನಗೆ ಕಾಗದ ಬರೆದವರಾರು? ಹಣ ತೆಗೆದುಕೊಳ್ಳುವವರಾರು? ಈ ರಹಸ್ಯವು ಹೇಗೆ ಬಯಲಾಯಿತೆಂಬುದನ್ನು ಅರಿಯುವ ಕುತೂಹಲವು ಬಾಲಕೃಷ್ಣನ ಹೃದಯದಲ್ಲಿ ಪೂರ್ಣವಾಗಿ ತುಂಬಿತ್ತು.

ಹತ್ತು ನಿಮಿಷದಲ್ಲಿಯೇ ಕಾರು ಜೋಗೀ ಕಣಿವೆಯ ಸಮೀಪದಲ್ಲಿರುವ ಐದನೆಯ ಮೈಲಿಕಲ್ಲಿನ ಬಳಿಗೆ ಬಂದಿತು.

ಕಾರನ್ನು ಅಲ್ಲಿಯೇ ವಿಶಾಲವಾಗಿ ಬೆಳೆದಿದ್ದ ಗೋಣೀ ಮರದ ಕೆಳಗೆ ನಿಲ್ಲಿಸಿ ಹಣವನ್ನು ಕೈಯ್ಯಿಂದ ಮುಟ್ಟಿ ನೋಡಿಕೊಂಡು ಎರಡು ಕೈಗಳನ್ನು ಮೇಲಕ್ಕೆ ಎತ್ತಿ ತನಗೆ ಎಡಭಾಗದಲ್ಲಿದ್ದ ಕಾಳಿಕಾ ದೇವಾಲಯದ ಕಡೆಗೆ ಹೊರಟನು.

ಅಮಾವಾಸ್ಯೆಯು ಕಳೆದು ಕೇವಲ ಎರಡು ದಿನಗಳಾಗಿದ್ದುವು. ಆ ಪ್ರಯುಕ್ತ ಕತ್ತಲು ಎಲ್ಲಾ ಕಡೆಗಳಲ್ಲಿಯೂ ಆವರಿಸಿಕೊಂಡಿತ್ತು. ಆ ಕಾರ್ಗತ್ತಲೆ

ಯಲ್ಲಿ ಎದುರಿಗಿದ್ದವರೂ ಸಹ ಕಾಣುತ್ತಿರಲಿಲ್ಲ. ಮತ್ತು ಕತ್ತಲೆಗೆ ಬೆಂಬಲವಾಗಿ ಮೋಡವೂ ಕವಿದಿತ್ತು.

ಕಾಗದವನ್ನು ಬರೆದವನು ಬಂದಿರುವನೋ, ಇಲ್ಲವೋ, ಎಂಬ ಸಂದೇಹ ದಿಂದ ಕತ್ತಲಿನಲ್ಲಿಯೇ ತಡವರಿಸುತ್ತಾ ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಸುಮಾರು ಇಪ್ಪತ್ತು ಮಾರು ದೂರ ಹೋದನು.

ಕಾಳಿಕಾ ದೇವಾಲಯವು ಇನ್ನೂ ಮೂವತ್ತು ಮಾರುಗಳ ದೂರದಲ್ಲಿತ್ತು.

ಬಾಲಕೃಷ್ಣನು ತಡವರಿಸುತ್ತಾ ಕತ್ತಲಿನಲ್ಲಿಯೇ ಮುಂದೆ ಹೋಗುತ್ತಿರಲು ಕೆಂಪು ಲೈಟು ಗೋಚರಿಸಿತು.

ಆ ಲೈಟು ಕಾಣುತ್ತಲೇ ಈತನು ನನಗಾಗಿಯೇ ಕಾಯುತ್ತಿರುವನು. ಎಂದು ಯೋಚಿಸಿ ಮುಂದೆ ಹೋಗದೆ ಅಲ್ಲಿಯೇ ನಿಂತನು.

ಆ ಕೆಂಪು ಲೈಟು ಕಂಡ ಸ್ಥಳಕ್ಕೂ, ಆತನಿಗೂ ಸುಮಾರು ಹದಿನೈದು ಮಾರುಗಳ ದೂರವಿತ್ತು.

ಬಾಲಕೃಷ್ಣನು ನಿಂತುಕೊಂಡು ಕೆಂಪು ಲೈಟಿನ ಕಡೆಯೇ ನೋಡುತ್ತಿರಲು ಅದು ಫಕ್ಕನೆ ಆರಿಹೋಯಿತು.

ಕತ್ತಲು ಕವಿದುದರಿಂದ ಆ ವ್ಯಕ್ತಿ ಯಾರೆಂಬುದನ್ನು ಬಾಲಕೃಷ್ಣನಿಂದ ನೋಡಲಾಗಲಿಲ್ಲ.

ಅತ್ತ ಕಡೆಯೇ ದೃಷ್ಟಿಸಿ ನೋಡುತ್ತಿರಲು ಯಾರೋ ಸರಸರನೆ ನಡೆದು ಬಂದಂತೆ ಒಣಗಿದ ಎಲೆಗಳ ಶಬ್ದದಿಂದ ತಿಳಿಯಿತು. ಕಾಗದವನ್ನು ಬರೆದ ವ್ಯಕ್ತಿಯು ಸಮೀಪಕ್ಕೆ ಬಂದನೆಂದರಿತು ಕದಲದೆ ನಿಂತುಕೊಂಡನು.

ವ್ಯಕ್ತಿಯು ಆತನಿಗೆ ಒಂದುಮಾರು ದೂರದಲ್ಲಿ ನಿಂತು ತನ್ನ ಜೇಬಿನಿಂದ ಚಿಕ್ಕ ಟಾರ್ಚ್ ಲೈಟನ್ನು ತೆಗೆದು ಹತ್ತಿಸಿ ಬಾಲಕೃಷ್ಣನ ಮುಖಕ್ಕೆ ಹಿಡಿದು ನೋಡಲು ಆತನು ಕೈಗಳನ್ನು ಮೇಲಕ್ಕೆ ಎತ್ತಿಕೊಂಡೇ ನಿಂತಿರುವುದು ಗೋಚರಿಸಿತು.

ಎಡಗೈಯ್ಯಲ್ಲಿ ಟಾರ್ಚೂ, ಬಲಗೈಯ್ಯಲ್ಲಿ ಪಿಸ್ತೂಲು ಇರುವುದನ್ನು ಬಾಲಕೃಷ್ಣನು ಆ ಬೆಳಕಿನಲ್ಲಿ ಕಂಡನು. ಆ ವ್ಯಕ್ತಿಯ ಮುಖವನ್ನು ನೋಡಿ ಗುರುತಿಸುವ ಹಾಗಿರಲಿಲ್ಲ.

ಅದರ ದೇಹವು ಕಪ್ಪು ವಸ್ತ್ರಗಳಿಂದ ಅಲಂಕೃತವಾಗಿತ್ತು. ಸ್ವಲ್ಪಮಾತ್ರವೂ ಗುರುತು ಸಿಕ್ಕುವಂತಿರಲಿಲ್ಲ.

ವ್ಯಕ್ತಿಯು ಬಾಲಕೃಷ್ಣನ ಜೇಬಿನಲ್ಲಿದ್ದ ಹಣವನ್ನು ನೋಡಿ ಟಾರ್ಚನ್ನು ಆರಿಸಿ ಆತನ ಸಮೀಪಕ್ಕೆ ಬಂದು ಎಡಗೈಯಿಂದ ಬಾಲಕೃಷ್ಣನ ಹಣವನ್ನು ತೆಗೆದುಕೊಂಡಿತು.

ಆ ವೇಳೆಯಲ್ಲಿ ಬಾಲಕೃಷ್ಣನ ಸರ್ವಾಂಗವೆಲ್ಲಾ ಬೆವತುಹೋಯಿತು. ತನ್ನ ಜೇಬಿಗೆ ಕೈ ಹಾಕಿ ಹಣವನ್ನು ತೆಗೆದುಕೊಳ್ಳುವಾಗ ಆ ವ್ಯಕ್ತಿಯನ್ನು ಹಾಗೇ ಬಲವಾಗಿ ಆ ಕತ್ತಲಿನಲ್ಲಿಯೇ ಹಿಡಿದುಕೊಳ್ಳಬಹುದಿತ್ತು.

ಹಾಗೊಂದುವೇಳೆ ಹಿಡಿದುಕೊಳ್ಳಲು ಪ್ರಯತ್ನಿಸಿದರೆ ಆ ವ್ಯಕ್ತಿಯ ಕೈಯ್ಯಲ್ಲಿರುವ ಪಿಸ್ತೂಲಿನ ಗುಂಡುಗಳು ತನ್ನ ಎದೆಯನ್ನು ತೂರಿಹೋಗುವುದೆಂದು ತಿಳಿದು ಭಯಚಕಿತನಾಗಿ ಏನೂ ಮಾಡಲಾರದವನಾಗಿ ಗೋಮಟೇಶ್ವರನಂತೆ ನಿಂತುಕೊಂಡಿದ್ದನು.

ಕೆಲವು ನಿಮಿಷಗಳಲ್ಲಿಯೇ ತನಗೆ ಕೆಂಪು ಲೈಟು ಗೋಚರಿಸಿದ ಸ್ಥಳದಲ್ಲಿ ಹಸುರು ಲೈಟು ಕಂಡುಬಂದಿತು.

ಬಾಲಕೃಷ್ಣನು ಅತ್ಯಂತ ಆಶ್ಚರ್ಯಚಕಿತನಾದನು.

'ಈ ವ್ಯಕ್ತಿಯು ಅಷ್ಟು ಜಾಗ್ರತೆ ಅಲ್ಲಿಗೆ ಹೇಗೆ ಹೋಗಿರಬಹುದು. ಬರುವಾಗ ನಡಿಗೆಯ ಶಬ್ದವಾದುದು, ಹೋಗುವಾಗ ಆಗಲಿಲ್ಲವೇಕೆ ?.... ತಿಳಿಯಿತು ! ತಿಳಿಯಿತು !! ತನಗೆ ತಿಳಿಯಲೆಂಬ ಅಭಿಪ್ರಾಯದಿಂದ ಬರುವಾಗ ಬೇಕೆಂತಲೇ ಶಬ್ದ ಮಾಡಿರಬಹುದು. ಹೋಗುವಾಗ ಮಿಂಚಿನಂತೆ ಹೊರಟು ಹೋಗಿರಬಹುದು.' ಎಂದು ಯೋಚಿಸಿಕೊಂಡು ಅಲ್ಲಿಂದ ಹಿಂದಿರುಗಿದನು.

ಕೈಗಳನ್ನು ಕೆಳಗೆ ಬಿಟ್ಟರೆ ಗುಂಡಿನ ಏಟು ತನ್ನ ಬೆನ್ನಿಗೆ ಬೀಳಬಹುದೆಂಬ ಭಯದಿಂದ ಕೈಗಳನ್ನು ಮೇಲಕ್ಕೆ ಎತ್ತಿಕೊಂಡೇ ಕಾರಿನ ಬಳಿಗೆ ಬಂದನು.

ಕಾರು ಯಥಾಸ್ಥಾನದಲ್ಲಿ ನಿಂತಿತ್ತು.

ಕಾರಿನ ಬಳಿಗೆ ಬಂದನಂತರ ಕೈಗಳನ್ನು ಕೆಳಗೆ ಬಿಟ್ಟು ಕಾರಿನಲ್ಲಿ ಕುಳಿತು ಅದನ್ನು ಸ್ಟಾರ್ಟ್ ಮಾಡಿದನು.

ಹಣವನ್ನು ತೆಗೆದುಕೊಂಡ ವ್ಯಕ್ತಿಯನ್ನು ಗುರುತಿಸಲು ಸಾಧ್ಯವಾಗದೆ ಹೋಯಿತಲ್ಲಾ ಎಂಬ ವ್ಯಥೆಯಿಂದಲೇ ನಗರಕ್ಕೆ ಹಿಂದಿರುಗಿದನು.

ಆತನು ತಿಳಿಸಿದಂತೆ ಐದುಸಾವಿರ ರೂಪಾಯಿಗಳನ್ನು ಕೊಟ್ಟದ್ದಾಯಿತು. ಇನ್ನು ನನ್ನ ಸಹವಾಸಕ್ಕೆ ಬರುವಹಾಗಿಲ್ಲ. ಆತನು ಯಾರಾದರೂ ಆಗಿರಲಿ.... ಆದರೆ! ಸರಸ್ವತಿಯ ಮೇಲೆ ಮಾತ್ರ ನಿಗಾ ಇಟ್ಟಿರಲೇಬೇಕು.' ಎಂದು ನಿರ್ಧರ ಮಾಡಿಕೊಂಡನು.

ಕಾರನ್ನು ಬಂಗಲೆಯ ಮುಂದೆ ನಿಲ್ಲಿಸಿ ಘಂಟೆಯನ್ನು ನೋಡಲು ಒಂದು ಘಂಟೆಯಾಗಿತ್ತು. ನಗರದಲ್ಲಿ ಜನ ಸಂಚಾರವೇ ಇರಲಿಲ್ಲ.

ಕಾರಿನಿಂದ ಕೆಳಗಿಳಿದು ಗೇಟ್ ಬಾಗಿಲನ್ನೂ, ಗ್ಯಾರೇಜಿನ ಬಾಗಿಲನ್ನೂ ತೆಗೆದು ಬಳಿಕ ಕಾರನ್ನು ಗ್ಯಾರೇಜಿನಲ್ಲಿ ಬಿಟ್ಟು ಎರಡು ಬಾಗಿಲುಗಳನ್ನೂ ಮುಚ್ಚಿ ತರುವಾಯ ಮನೆಗೆ ಹೋಗಿ ಬಾಗಿಲನ್ನು ತಟ್ಟಲು ರಂಗಮ್ಮನು ಬಂದು ಬಾಗಿಲನ್ನು ತೆಗೆದಳು.

ಬಾಲಕೃಷ್ಣನು ಆಕೆಯೊಡನೆ ಯಾವ ಮಾತನ್ನೂ ಆಡದೆ ಮಹಡಿಯ ಮೇಲೆ ಹೋದನು.

ಮಲಗುವ ರೂಮಿಗೆ ಹೋಗಿ ನೋಡಲು ರಾಜೇಶ್ವರಿಯು ಮಲಗಿ ನಿದ್ರಿಸುತ್ತಿದ್ದಳು.

ಈಕೆಗೆ ನಿದ್ರಾಭಂಗ ಮಾಡಬಾರದೆಂದು ಭಾವಿಸಿ ಆಕೆಯ ಪಕ್ಕದಲ್ಲಿಯೇ ತಾನು ಮಲಗಿಕೊಂಡು ಮುಸುಕೆಳೆದುಕೊಂಡನು.

ಚಿಂತಾಸಾಗರದಲ್ಲಿ ಮುಳುಗಿದ್ದುದರಿಂದ ನಿದ್ರಾದೇವಿಯು ಕೂಡಲೇ ಆತನನ್ನು ಸಮೀಪಿಸಲಿಲ್ಲ.

ಯೋಚನೆಯ ಅಲೆಗಳು ಅವನ ತಲೆಯನ್ನು ಮುತ್ತಿಕೊಂಡುವು.

ಯೋಚನಾಪರಂಪರೆಯಲ್ಲಿಯೇ ಸೂರ್ಯೋದಯವಾಯಿತು. ರಾತ್ರಿ ನಡೆದ ವಿಷಯವನ್ನು ಯಾರಲ್ಲಿಯೂ ತಿಳಿಸದೆ ಆ ಕಾಗದವನ್ನು ಬಚ್ಚಿಟ್ಟುಕೊಂಡನು.

೮

ಒಂದು ತಿಂಗಳು ಕಳೆಯಿತು.

ಈ ಮಧ್ಯೆ ಬಾಲಕೃಷ್ಣನು ತನ್ನ ತಂಗಿಯ ಮನೆಗೆ ಹೋಗುವುದನ್ನು ನಿಷೇಧಿಸಿದನು. ತನ್ನ ಪತ್ನಿಯೂ ಅಲ್ಲಿಗೆ ಹೋಗದಂತೆ ತಡೆ ಮಾಡಿದನು.

ಜಗನ್ನಾಥನೊಡನೆ ಮಾತನಾಡುವುದನ್ನು ಬಿಟ್ಟನು. ಆತನು ಮಾರ್ಗ ದಲ್ಲಿ ಕಂಡರೂ ಕಾಣದವನಂತೆ ನಟಿಸುತ್ತಿದ್ದನು.

ಇದನ್ನು ಜೂಜುಕೋರನಾದ ಜಗನ್ನಾಥನು ಲೇಶಮಾತ್ರವೂ ಲೆಕ್ಕಿಸಲಿಲ್ಲ.

ತನ್ನ ಅಣ್ಣನ ಕ್ರೂರ ಗುಣವನ್ನರಿತಿದ್ದ ಸರಸ್ವತಿಯು ಆತನಿಂದ ತನಗೇನಾದರೂ ಅಪಾಯವುಂಟಾಗಬಹುದೆಂಬ ಭೀತಿಯಿಂದ ಎಚ್ಚರಳಾಗಿಯೇ ಇದ್ದಳು. ತನ್ನ ಪತಿಗೂ ಎಚ್ಚರಿಕೆಯನ್ನಿತ್ತಿದ್ದಳು.

ಜಗನ್ನಾಥನು ಪತ್ನಿಯ ಹಿತವಾದವನ್ನು ಗಮನಕ್ಕೆ ತಂದುಕೊಳ್ಳಲಿಲ್ಲ. ತನ್ನ ಸಹವಾಸಕ್ಕೆ ಬಂದರೆ ಆತನನ್ನು ನಡು ಹಗಲಿನಲ್ಲಿಯೇ ರಾಜಬೀದಿಯಲ್ಲಿ ಕತ್ತರಿಸಿಬಿಡುವೆನೆಂದು ಹೇಳಿದನು.

ತನ್ನ ಪತಿಯು ಹೆಂಡಕುಡುಕ, ಜೂಜುಕೋರ, ಕುಡಿದ ಅಮಲಿನಲ್ಲಿ ನುಡಿದಂತೆ ನಡೆಸಬಹುದೆಂಬ ಭಯದಿಂದ ಸರಸ್ವತಿಯು ತಲ್ಲಣಿಸಿದಳು.

ತಾನು ಹೆಂಡಕುಡುಕನಾದರೂ ಜಗನ್ನಾಥನು ತನ್ನ ಪತ್ನಿಗೆ ಯಾವ ವಿಧವಾದ ತೊಂದರೆಯನ್ನೂ ಕೊಡದೆ ಸೌಖ್ಯದಲ್ಲಿಟ್ಟಿದ್ದನು.

ಸರಸ್ವತಿಯು ತನ್ನ ಪತಿಯ ಇಚ್ಛೆಯಂತೆ ನಡೆಯುತ್ತಾ ಆತನ ಪ್ರೀತಿ ವಿಶ್ವಾಸಕ್ಕೆ ಪಾತ್ರಳಾಗಿದ್ದಳು.

ಅವರಿಬ್ಬರ ಮೇಲೆಯೇ ಸಂದೇಹಗೊಂಡ ಬಾಲಕೃಷ್ಣನು ಅವರ ಮೇಲೆ ಸೇಡು ತೀರಿಸಿಕೊಳ್ಳಲು ಸಮಯವನ್ನು ಕಾಯುತ್ತಲೇ ಇದ್ದನು.

ಯಾರೊಡನೆಯೂ ಹೆಚ್ಚು ಬೆರೆಯುತ್ತಿರಲಿಲ್ಲ. ತನ್ನ ಪಾಡಿಗೆ ತಾನೇ ಮಾತನಾಡಿಕೊಳ್ಳುತ್ತಾ ಹುಚ್ಚನಂತೆ ನಟಿಸುತ್ತಿದ್ದನು.

ವಿಶೇಷವಾಗಿ ಔಷಧಾಲಯಕ್ಕೂ ಹೋಗುತ್ತಿರಲಿಲ್ಲ. ತನ್ನ ಮನಸ್ಸು ಬಂದಂತೆ ವರ್ತಿಸುತ್ತಿದ್ದನು.

ಷಾಪಿನ ರೋಗಿಗಳ ಮೇಲ್ವಿಚಾರಣೆಯನ್ನೆಲ್ಲಾ ಕಾಂಪೌಂಡರ್ ಲೋಕನಾಥನೇ ನೋಡಿಕೊಳ್ಳುತ್ತಿದ್ದನು.

ಲೋಕನಾಥನು ಹೆಚ್ಚು ಅನುಭವಸ್ಥನಾಗಿದ್ದನಲ್ಲದೆ, ನಂಬಿಕಸ್ತನೂ ಆಗಿದ್ದನು. ಮೂರು ಕಾಸನ್ನೂ ಕದಿಯುತ್ತಿರಲಿಲ್ಲ. ಆತನ ವಿಷಯವನ್ನು ತಿಳಿದುದ್ದರಿಂದಲೇ ಬಾಲಕೃಷ್ಣನು ವಿಶೇಷವಾಗಿ ಫಾರ್ಮಸಿಗೆ ಹೋಗುತ್ತಿರಲಿಲ್ಲ.

ಆದರೇ ! ಲೋಕನಾಥನಿಗೆ ಬಾಲಕೃಷ್ಣನು ಕೊಡುತ್ತಿದ್ದ ವೇತನವು ಎರಡು ಜೀವಗಳಿಗೆ ಸಾಲುತ್ತಿರಲಿಲ್ಲ.

ಲೋಕನಾಥನ ಪತ್ನಿಯಾದ ಕಾವೇರಮ್ಮನ ಮೈಮೇಲೆ ಮಾಂಗಲ್ಯದ ವಿನಃ ಬೇರೆ ಒಡವೆಯೇ ಇರಲಿಲ್ಲ.

ನೆಂಟರಿಷ್ಟರ ಮನೆಗೆ ಹೋಗಬೇಕೆಂದರೆ, ಉಟ್ಟುಕೊಳ್ಳಲು ಉತ್ತಮವಾದ ಸೀರೆಯೂ ಇರಲಿಲ್ಲ. ಇದ್ದ ನಾಲ್ಕಾರು ಸೀರೆಗಳು ಹತ್ತಾರು ಕಡೆ ಹರಿದು ಹೋಗಿದ್ದುವಲ್ಲದೆ, ಕೇವಲ ಐದಾರು ರೂಪಾಯಿಗಳ ಸೀರೆಗಳಾಗಿದ್ದುವು. ಎರಡು ಕುಪ್ಪಸಗಳ ಮೇಲ್ಪಟ್ಟಿರಲಿಲ್ಲ. ಅವಕ್ಕೂ ಸಹ ಐದಾರು ಕಡೆ ತೇಪೆಗಳಾಗಿದ್ದುವು.

ತನ್ನ ಪರಿಸ್ಥಿತಿಯು ಈ ರೀತಿಯಿದ್ದರೂ, ಲೋಕನಾಥನು ಒಂದು ಕಾಸನ್ನೂ ಕದಿಯುತ್ತಿರಲಿಲ್ಲ. ಮನಸ್ಸು ಮಾಡಿದ್ದರೆ ಪ್ರತಿದಿನವೂ ಅಲ್ಪಸ್ವಲ್ಪ ರೂಪಾಯಿಗಳನ್ನು ಅಪಹರಿಸಬಹುದಾಗಿತ್ತು. ತನ್ನ ಮೈಮೇಲೂ ಸರಿಯಾದ ಬಟ್ಟೆ ಬರೆಗಳಿಲ್ಲದಿದ್ದರೂ ತಾನು ಅಪ್ರಮಾಣಿಕನಾಗಬಾರದೆಂದು ನಿರ್ಧರಿಸಿಕೊಂಡಿದ್ದನು.

ಸತಿಪತಿಗಳಿಬ್ಬರೇ ಇದ್ದರೂ ಅವರ ಸ್ಥಿತಿಯು ಅತ್ಯಂತ ಶೋಚನೀಯವಾಗಿತ್ತು.

ತನ್ನ ಪತ್ನಿಯನ್ನು ತೃಪ್ತಿಪಡಿಸಲು ಲೋಕನಾಥನು ವಿಶ್ವಪ್ರಯತ್ನ ಪಟ್ಟರೂ ಸಾಧ್ಯವಾಗುತ್ತಿರಲಿಲ್ಲ.

ಸತಿಪತಿಯರಿಗೆ ಪ್ರತಿದಿನವೂ ವಾದವಿವಾದಗಳು ನಡೆಯುತ್ತಲೇ ಇದ್ದುವು. ಅವರು ಜಗಳವಾಡದ ದಿನವೇ ಇರಲಿಲ್ಲ.

ಅಕ್ಕಪಕ್ಕದ ಮನೆಯವರು ಇವರ ಪ್ರತಿದಿನದ ಕೊನೆಮೊದಲಿಲ್ಲದ ಜಗಳವನ್ನು ನೋಡಿ, ನೋಡಿ ಬೇಸತ್ತು ಹೋಗಿದ್ದರು.

ಅವರ ಅಹವಾಲುಗಳನ್ನು ಕೇಳಿದ ಆ ಮನೆ ಮಾಲೀಕನು ತನ್ನ ಮನೆಯನ್ನು ಬಿಟ್ಟುಬಿಡಬೇಕೆಂದು ಲೋಕನಾಥನಿಗೆ ಹತ್ತಾರು ಸಾರಿ ಎಚ್ಚರಿಸಿದ್ದರೂ ಆತನು ಮನೆಯನ್ನು ಬಿಡಲಿಲ್ಲ. ಬಾಡಿಗೆ ಹಣವನ್ನು ಮಾತ್ರ ಆಯಾ ತಿಂಗಳು ಸಲೀಸಾಗಿ ಕೊಡುತ್ತಿದ್ದನು. ಈ ದೆಶೆಯಿಂದ ಮನೆ ಮಾಲೀಕನು ಲೋಕನಾಥನ ಮೇಲೆ ತನ್ನ ಅಧಿಕಾರವನ್ನು ನಡೆಸುವ ಹಾಗಿರಲಿಲ್ಲ.

ಬಾಲಕೃಷ್ಣನೊಡನೆ ತನ್ನ ಸಂಸಾರದ ಅಹವಾಲನ್ನು ಹೇಳಿಕೊಂಡು ಸಂಬಳವನ್ನು ಹೆಚ್ಚಿಸುವಂತೆ ಪ್ರಾರ್ಥಿಕೊಳ್ಳಬೇಕೆಂದು ಲೋಕನಾಥನು ಯೋಚಿಸಿಕೊಂಡಿದ್ದರೂ ಅದಕ್ಕೆ ಸರಿಯಾದ ಸಮಯವೇ ಒದಗಿ ಬಂದಿರಲಿಲ್ಲ.

ಈಚೆಗೆ ಬಾಲಕೃಷ್ಣನ ನಡವಳಿಕೆಗಳಲ್ಲಿ ಉಂಟಾದ ಹಲವಾರು ಮಾರ್ಪಾಟುಗಳನ್ನು ನೋಡಿ ಆ ವಿಷಯವನ್ನು ತಿಳಿಸಲೂ ಸಹ ಹಿಂಜರಿದನು.

ಬಾಲಕೃಷ್ಣನೂ ಸಹ ಅವನೊಡನೆ ವಿಶೇಷವಾಗಿ ಮಾತನಾಡುತ್ತಿರಲಿಲ್ಲ. ಅಕಸ್ಮಾತ್ ಷಾಪಿಗೆ ಬಂದರೆ ಕೆಲವು ಜನ ರೋಗಿಗಳನ್ನು ಪರೀಕ್ಷಿಸಿ, ಬೇಸರದಿಂದ ಹಾಗೇ ಹಿಂದಿರುಗಿ ಹೊರಟು ಹೋಗುತ್ತಿದ್ದನು.

ತನಗೆ ಕಾಗದ ಬರೆದವರಾರೆಂಬುದನ್ನು ತಿಳಿಯುವವರೆವಿಗೂ ಆತನ ಮನಸ್ಸಿಗೆ ಸಮಾಧಾನವಿರಲಿಲ್ಲ.

ಪತಿಯ ನಡವಳಿಕೆಗಳು ಹಿಂದಿನಂತಿರದೆ, ಬೇರೆ ವಿಧವಾಗಿರುವುದನ್ನು ನೋಡಿ ರಾಜೇಶ್ವರಿಯು ಆತನೊಡನೆ ಏನು ವಿಷಯವೆಂದು ಪ್ರಶ್ನಿಸಲು ಬಾಲಕೃಷ್ಣನು ಆಕೆಗೆ ತೃಪ್ತಿಕರವಾದ ಉತ್ತರವೀಯಲಿಲ್ಲ.

ರಾಜೇಶ್ವರಿಯು ಹಲವು ಬಗೆಯಲ್ಲಿ ಪೀಡಿಸಿದರೂ ಬಾಲಕೃಷ್ಣನು ಹೇಳಲಿಲ್ಲ. ಅದನ್ನು ಹೇಳಿದರೆ ತನಗೇ ಗಂಡಾಂತರವೆಂದುಕೊಂಡಿದ್ದನು.

# ೬

ಒಂದು ತಿಂಗಳು ಕಳೆದನಂತರ ಬಾಲಕೃಷ್ಣನಿಗೆ ಇನ್ನೊಂದು ಕವರು ಬಂದಿತು.

ಆ ಕವರನ್ನು ನೋಡುತ್ತಲೇ ಬಾಲಕೃಷ್ಣನು ದಿಗ್ಭ್ರಾಂತನಾದನು. ಈ ಕಾಗದವನ್ನೂ ಆತನೇ ಬರೆದಿರುವನೆಂದು ಟಪಾಲು ಮುದ್ರೆಯನ್ನು ನೋಡಿ ಭಾವಿಸಿಕೊಂಡನು.

ಕವರನ್ನು ಹರಿದು ಒಳಗಡೆಯಿದ್ದ ಕಾಗದವನ್ನು ತೆಗೆದು ನೋಡಲು ಆ ಕಾಗದದಲ್ಲಿ ಈ ರೀತಿ ಬರೆದಿತ್ತು.

'ಬಾಲಕೃಷ್ಣಾ! ನಿನ್ನ ಐದು ಸಾವಿರ ರೂಪಾಯಿಗಳು ನಿರ್ವಿಘ್ನವಾಗಿ ನನ್ನ ಕೈ ಸೇರಿದುದಕ್ಕಾಗಿ ಬಹಳ ಸಂತೋಷವಾಯಿತು. ಆ ಐದು ಸಾವಿರ ರೂಪಾಯಿಗಳು ನನ್ನ ಖರ್ಚಿಗೆ ಸಾಲದೆ ಹೋಯಿತು. ಈಗ ಮತ್ತೆ ರೂಪಾಯಿಗಳು ಬೇಕಾಗಿದೆ. ಆದರೇ! ಐದು ಸಾವಿರ ರೂಪಾಯಿಗಳಲ್ಲ.

ಈ ಸಾರಿ ಎರಡು ಸಾವಿರ ರೂಪಾಯಿಗಳಾದರೆ ಸಾಕು. ನಿಯಮಗಳು ಎಂದಿನಂತೆ. ಮರೆಯಬೇಡ. ಜೊತೆಯಲ್ಲಿ ಯಾರನ್ನಾದರೂ ಕರೆದು ಕೊಂಡು ಬಂದೆಯಾದರೆ, ಅಥವಾ ಆಯುಧವನ್ನು ನಿನ್ನ ಸಂಗಡ ತೆಗೆದು ಕೊಂಡು ಬಂದೆಯಾದರೂ ನಿನಗೆ ಉಳಿಗಾಲವಿಲ್ಲ. ನಾನು ನಿನ್ನ ಚಲನ ವಲನಗಳನ್ನು ಅರಿಯುವುದರಲ್ಲಿಯೇ ನಿರತನಾಗಿರುವೆನು? ಅದ್ದರಿಂದ ಆ ಪ್ರಯತ್ನಕ್ಕೆ ಹೋಗಬೇಡ'

'ನೀನು ಎರಡು ಸಾವಿರ ರೂಪಾಯಿಗಳನ್ನು ಕೊಡುವುದು ಹೆಚ್ಚಿನ ವಿಷಯ ವಲ್ಲ, ಪ್ರತಿತಿಂಗಳೂ ಅದಕ್ಕೂ ಹೆಚ್ಚಿಗೆ ಉತ್ಪತ್ತಿಯು ನಿನಗಿದೆ. ಆದ್ದರಿಂದ

ಈ ಸಾರಿ ಎರಡು ಸಾವಿರ ರೂಪಾಯಿಗಳನ್ನು ಮಾತ್ರ ಕೇಳಿರುವೆನು ಖಂಡಿತಾ ತರುವುದನ್ನು ಮರೆಯಬೇಡ.'

'ಇನ್ನೊಂದು ಮುಖ್ಯವಾದ ವಿಷಯವೇನೆಂದರೆ ಈ ವಿಷಯವನ್ನು ಯಾರಲ್ಲಿಯೂ ತಿಳಿಸಬೇಡ. ತಿಳಿಸಿದರೆ ನಿನಗೇ ಅಪಾಯ. ಒಂದು ವೇಳೆ ಪೋಲೀಸಿಗೆ ದೂರಿತ್ತರೂ ನಿನಗೇ ತೊಂದರೆ. ಇನ್ನು ಹೆಚ್ಚು ಬರೆಯುವುದು ಅನಾವಶ್ಯಕ.'

'ಖಂಡಿತಾ ಈ ದಿನ ರಾತ್ರಿ ಹಣತರಲು ಮರೆಯಬೇಡ. ಉದಾಸೀನನಾದರೆ ಮುಂದಿನ ಪರಿಣಾಮವನ್ನು ಅನುಭವಿಸಬೇಕಾಗುತ್ತದೆ ಎಚ್ಚರಿಕೆ.'

'ಇತಿ ನಿನ್ನ'

**'ಚಿರಪರಿಚಿತ.'**

ಕಾಗದವನ್ನು ಓದಿ ಬಾಲಕೃಷ್ಣನು ಪೆಚ್ಚಾಗಿ ಹೋದನು. 'ಈತನಾರೋ ನಮ್ಮವನೇ. ಇವನು ನನ್ನ ರಹಸ್ಯವೆಲ್ಲವನ್ನೂ ಅರಿತಿರುವನು. ಮೇಲಾಗಿ ನನ್ನ ನಡವಳಿಕೆಗಳ ಮೇಲೂ ಕಣ್ಣಿಟ್ಟಿರುವನು. ಇದಕ್ಕೆಲ್ಲಾ ಮೂಲಕಾರಣಳು ಸರಸ್ವತಿಯೇ, ಎಂಬುದರಲ್ಲಿ ಸಂದೇಹವಿಲ್ಲ. ಜಗನ್ನಾಥನೂ ಇದಕ್ಕೆ ಬೆಂಬಲವಾಗಿರುವನು. ಅವರಿಬ್ಬರನ್ನೂ ನಿರ್ಮೂಲ ಮಾಡಿದರೆ ನನ್ನ ಮೇಲಿರುವ ಗಂಡಾಂತರವು ತಪ್ಪುತ್ತದೆ. ಇಲ್ಲದೆ ಹೋದರೆ ಪ್ರತಿ ತಿಂಗಳೂ ಇದೇ ರೀತಿ ಹಣ ಕೊಡಬೇಕಾಗಬಹುದು. ಇದನ್ನು ತಪ್ಪಿಸಿಕೊಳ್ಳಬೇಕು. ಹಣ ತೆಗೆದು ಕೊಳ್ಳುವವನಾರೆಂಬುದನ್ನು ನೋಡೋಣವೆಂದರೆ ಸಾಧ್ಯವೇ ಇಲ್ಲವಾಗಿದೆ. ಈ ದಿನ ಆತನು ಹಣ ತೆಗೆದುಕೊಳ್ಳುವಾಗ 'ಇನ್ನೊಂದು ಸಾರಿ ಹಣ ಕೊಡಲು ಸಾಧ್ಯವಿಲ್ಲ.' ಎಂದು ಹೇಳುವೆನು. ಅದರಿಂದ ಏನಾಗುವುದೆಂಬುದನ್ನು ನೋಡಿಯೇ ಬಿಡುವೆನೆಂದು ತೀರ್ಮಾನಿಸಿಕೊಂಡನು.

ರಾತ್ರಿ ಹನ್ನೊಂದು ಘಂಟೆಯವರೆವಿಗೂ ಹಾಗೂ, ಹೀಗೂ ಮನಸ್ಸಮಾಧಾನವಿಲ್ಲದೆ ಕಾಲ ಕಳೆದನು.

ತನ್ನ ಪತ್ನಿಯೊಡನೆಯೇ ಆಗಲಿ ಇತರರೊಡನೆಯೇ ಆಗಲಿ, ಆ ವಿಷಯವನ್ನು ಹೇಳಲಿಲ್ಲ.

ರಾತ್ರಿ ಹನ್ನೊಂದುಕಾಲು ಘಂಟೆಯಾದನಂತರ ಎಂದಿನಂತೆ ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಕಾರಿನಲ್ಲಿ ಒಬ್ಬನೇ ಹೊರಟನು.

ಹಿಂದಿನಂತೆ ಕಾರನ್ನು ಐದನೇ ಮೈಲಿ ಕಲ್ಲಿನ ಬಳಿಯಲ್ಲಿ ನಿಲ್ಲಿಸಿ ಕಾರಿನಿಂದ ಇಳಿದು ರೂಪಾಯಿಗಳನ್ನು ನೋಡಿಕೊಂಡು ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಕಾಳಿಕಾದೇವಾಲಯದ ಕಡೆಗೆ ಹೊರಟನು.

ತನಗಿಂತ ಮೊದಲೇ ಆ ವ್ಯಕ್ತಿಯು ಕಾದುಕೊಂಡಿರುವನೆಂದು ಭಾವಿಸಿದ್ದನು. ಅವನ ಊಹೆಯೇನೂ ಸುಳ್ಳಾಗಿರಲಿಲ್ಲ.

ಕೈಗಳನ್ನು ಕೆಳಗೆ ಬಿಟ್ಟರೆ ಪಿಸ್ತೂಲಿನ ಗುಂಡಿಗೆ ಆಹುತಿಯಾಗುವೆನೆಂಬ ಭಯವೂ ಅವನನ್ನು ಬಾಧಿಸುತ್ತಿತ್ತು.

ಸುಮಾರು ಮೂವತ್ತು ಮಾರು ದೂರ ಹೋಗುತ್ತಲೇ ಕೆಂಪು ಲೈಟು ಕಾಣಿಸಿತು. ಕೂಡಲೇ, ಅಲ್ಲಿಯೇ ನಿಂತುಕೊಂಡನು.

ಹಲವು ನಿಮಿಷಗಳನಂತರ ತನಗೆ ಸಮೀಪದಲ್ಲಿ ಯಾರೋ ನಡೆದುಕೊಂಡು ಬರುವಂತೆ ಶಬ್ದವಾಯಿತು.

ಹಿಂದಿನಂತೆ ಚಿಕ್ಕ ಟಾರ್ಚ್‌ಲೈಟು ಹಚ್ಚಲ್ಪಟ್ಟಿತು.

ಈ ಸಾರಿ ವ್ಯಕ್ತಿಯ ಶರೀರವಾದ್ಯಂತವೂ ಕೆಂಪು ಬಟ್ಟೆಯಿಂದ ಆವೃತ ವಾಗಿತ್ತು.

ವ್ಯಕ್ತಿಯು ಮುಂದೆ ಬಂದು ಬಾಲಕೃಷ್ಣನ ಜೇಬಿನಲ್ಲಿದ್ದ ಹಣವನ್ನು ತೆಗೆದುಕೊಳ್ಳುವಾಗ ಟಾರ್ಚನ್ನು ಆರಿಸಿ ಚೀಲವನ್ನು ತೆಗೆದುಕೊಂಡಿತು.

ಆಗ ಬಾಲಕೃಷ್ಣನು ಧೈರ್ಯವನ್ನು ತಂದುಕೊಂಡು—

"ಇದೇ ಕೊನೆ. ಇನ್ನುಮುಂದೆ ನನ್ನಿಂದ ಹಣ ಕೊಡಲು ಸಾಧ್ಯವಿಲ್ಲ. ನನಗೆ ತೊಂದರೆ ಕೊಡಬೇಡ." ಎಂದು ಹೇಳಿದನು.

ವ್ಯಕ್ತಿಯಿಂದ ಯಾವ ಉತ್ತರವೂ ಬರಲಿಲ್ಲ.

ಅದರಿಂದ ಬಾಲಕೃಷ್ಣನ ಆತ್ಮಕ್ಕೆ ಸಮಾಧಾನವಾಗಲಿಲ್ಲ.

ವ್ಯಕ್ತಿಯು ಹೊರಟು ಹೋದುದೇ ಅವನಿಗೆ ಗೊತ್ತಾಗಲಿಲ್ಲ.

ಐದು ನಿಮಿಷಗಳಲ್ಲಿಯೇ ಕೆಂಪು ದೀಪವು ಕಂಡ ಜಾಗದಿಂದ ಹಸುರು ದೀಪವು ಕಾಣಿಸಿತು.

ಕೂಡಲೇ ಕೈಗಳನ್ನು ಮೇಲಕ್ಕೆ ಎತ್ತಿಕೊಂಡೇ ಕಾರಿನ ಬಳಿಗೆ ಬಂದನು.

ಕಾರು ಯಥಾಸ್ಥಾನದಲ್ಲಿಯೇ ಇತ್ತು.

ಕಾರಿನಲ್ಲಿ ಕುಳಿತು ನಗರಕ್ಕೆ ಹಿಂದಿರುಗಿದನು.

ವ್ಯಕ್ತಿಯು ಯಾರಿರಬಹುದೆಂದು ಹಲವು ಬಗೆಯಲ್ಲಿ ಯೋಚಿಸಿದರೂ ಬಗೆ ಹರಿಯಲಿಲ್ಲ.

ರಾತ್ರಿಯೆಲ್ಲಾ ನಿದ್ದೆಯಿಲ್ಲದೆ ಪರಿತಪಿಸುತ್ತಲಿದ್ದನು. ಆ ಯೋಚನೆಯಲ್ಲಿಯೇ ಬೆಳಗಾಯಿತು.

ಆ ದಿನವೆಲ್ಲಾ ಅವನು ಬಂಗಲೆಯಿಂದ ಹೊರಗೆ ಬರಲಿಲ್ಲ.

ರಾಜೇಶ್ವರಿಯು, ತನ್ನ ಪತಿಯು ಚಿಂತೆಗೊಳಗಾಗಿರುವುದನ್ನು ನೋಡಿ ಹಲವು ಬಗೆಯಲ್ಲಿ ಪೀಡಿಸಿ ಕಾರಣವನ್ನು ಕೇಳಿದರೂ ಬಾಲಕೃಷ್ಣನು ಹೇಳಲಿಲ್ಲ.

ಹೆಂಗಸರ ಮುಂದೆ ಹೇಳಿದರೆ ಗುಟ್ಟು ನಿಲ್ಲುವುದಿಲ್ಲವೆಂದೇ ಆತನ ಭಾವನೆಯಾಗಿತ್ತು. ಆ ಕಾರಣ ತನ್ನ ಪತ್ನಿಯ ಮುಂದೆ ಆ ವಿಷಯವನ್ನು ಹೇಳಲು ಹಿಂಜರಿದನು.

ತನ್ನನ್ನು ಈ ರೀತಿಯಾಗಿ ಹೆದರಿಸಿ, ಬೆದರಿಸಿ ಹಣ ತೆಗೆದುಕೊಂಡು ಹೋಗುವವನು ಜಗನ್ನಾಥನೇ ಇರಬೇಕೆಂದು ಅವನು ಧೃಡಪಡಿಸಿಕೊಂಡನು.

ಅವನ ಮೇಲೆ ಸೇಡು ತೀರಿಸಿಕೊಳ್ಳಲು ಸಮಯವನ್ನು ಕಾಯುತ್ತಲೇ ಇದ್ದನು. ಆದರೇ! ಅವನ ಆಸೆಯು ನೆರವೇರಲವಕಾಶವಾಗಲಿಲ್ಲ.

ಶೇಷಪ್ಪನನ್ನು ಕೊಂದ ಹಾಗೆಯೇ ಇವರಿಬ್ಬರನ್ನೂ ಕೊಂದುಬಿಡಬೇಕೆಂದು ಅವನು ಎಣಿಕೆ ಹಾಕಿದ್ದನು. ಹಿಂದಿನ ಘಟನೆಯನ್ನು ಸರಸ್ವತಿಯು ತನ್ನ ಕಣ್ಣಾರೆ ನೋಡಿದ್ದುದರಿಂದ ಸರಸ್ವತಿ ಹೆಚ್ಚು ಜಾಗರೂಕಳಾಗಿಯೇ ಇದ್ದಳು. ಅವನ ಸಂಗಡ ಸಿನಿಮಾ, ನಾಟಕಗಳಿಗೆ ಹೋಗುವುದನ್ನೂ ನಿಷೇಧಿಸಿದಳು.

ಸೇಡು ತೀರಿಸಿಕೊಳ್ಳಲು ವೇಳೆಯನ್ನು ಕಾಯುವುದರಲ್ಲಿಯೇ ಒಂದು ತಿಂಗಳು ಕಳೆಯಿತು.

ಪುನಃ ಹಿಂದಿನಂತೆ ಇನ್ನೊಂದು ಕಾಗದವು ಬಂದಿತು.

ಆ ಕಾಗದವೂ ಎರಡನೆಯ ಕಾಗದದಂತೆಯೇ ಬರೆಯಲ್ಪಟ್ಟಿತ್ತು.

ಕಾಗದವನ್ನು ಓದಿ ಬಾಲಕೃಷ್ಣನು ಅತ್ಯಂತ ರೋಷಭೀಷಣನಾದನು ತನ್ನ ಕ್ರೋಧಾಗ್ನಿಯಲ್ಲಿ ಅವನನ್ನು ಹಿಂಡಿ ಹಿಪ್ಪೇ ಮಾಡಿದನು. ಏನು ಸಿಟ್ಟು ಮಾಡಿಕೊಂಡರೂ ಪ್ರಯೋಜನಕ್ಕೆ ಬರಲಿಲ್ಲ.

ವಿಷಯವನ್ನು ಯಾರಲ್ಲಿಯೂ ತಿಳಿಸದೆ ಆ ದಿನ ರಾತ್ರಿ ಎಂದಿನಂತೆ ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಕೊಟ್ಟು ಬಂದನು.

ವ್ಯಕ್ತಿಯು ಬಂದು ಹಣ ತೆಗೆದುಕೊಳ್ಳುವಾಗ ಅದ್ಯಾರಿರಬಹುದೆಂಬುದನ್ನು ನೋಡಲು ಏನು ಪ್ರಯತ್ನ ಪಟ್ಟರೂ ಸಾಧ್ಯವಾಗದೆ ಹೋಗಿತ್ತು.

ಮತ್ತೆ ಒಂದು ತಿಂಗಳು ಕಳೆಯಿತು.

ಪುನಃ ಹಿಂದಿನಂತೆಯೇ ಕಾಗದ ಬಂದಿತು.

ಬಾಲಕೃಷ್ಣನು ಹಣವನ್ನು ಕೊಡದೆ ವಿಧಿಯಿಲ್ಲ. ಹಾಗಿಲ್ಲವಾದರೆ ಶೇಷಪ್ಪ ನನ್ನು ಕೊಂದ ರಹಸ್ಯವು ಬಯಲಾಗುವುದೆಂದು ಅವನು ಭಯಗೊಂಡಿದ್ದನು.

ಆ ದಿನ ರಾತ್ರಿಯೂ ಎಂದಿನಂತೆಯೇ ಹಣ ತೆಗೆದುಕೊಂಡು ಹೋಗಿ ಕೊಟ್ಟು ಬಂದನು.

ತಿಂಗಳು, ತಿಂಗಳೂ ಇದೇ ರೀತಿಯಾಗುತ್ತಲಿದ್ದರೆ ತಾನು ಇನ್ನು ಉಳಿ ಯುವ ಹಾಗೆಯೇ ಇಲ್ಲವೆಂದುಕೊಂಡನು.

ಮುಂದಿನ ಅಮಾವಾಸ್ಯೆಯು ಬರುವುದರಲ್ಲಿಯೇ ತನ್ನ ತಂಗಿಯನ್ನೂ, ಭಾವಮೈದುನನನ್ನೂ ಕೊಂದುಬಿಡಬೇಕೆಂದು ವಿಶ್ವಪ್ರಯತ್ನ ಪಟ್ಟರೂ ಅದು ಸಾಧ್ಯವಾಗಲಿಲ್ಲ. ಮೇಲಾಗಿ ಅವರು ಮೊದಲಿಗಿಂತಲೂ ಈಗ ನೆಮ್ಮದಿಯಾಗಿ ಬಾಳುತ್ತಿದ್ದರು.

ಅದೊಂದು ಬಾಲಕೃಷ್ಣನ ಸಂದೇಹಕ್ಕೆ ಹೆಚ್ಚಿನ ಆಸ್ಪದವುಂಟುಮಾಡಿತ್ತು.

೧೦

ಅಮಾವಾಸ್ಯೆಯು ಕಳೆದ ಮಾರನೆಯ ದಿನವೇ ಬಾಲಕೃಷ್ಣನಿಗೆ ಕವರು ಬಂದಿತು. ಅದನ್ನು ನೋಡುತ್ತಲೇ ಆ ಚಂಡಾಲನೇ ಬರೆದಿರುವನೆಂದು ಬಾಲ ಕೃಷ್ಣನು ಊಹಿಸಿಕೊಂಡನು.

ಕವರನ್ನು ಹರಿದು ಕಾಗದವನ್ನು ನೋಡಲು ಹಿಂದಿನ ನಿಯಮಾವಳಿಯಂತೆ ಎರಡು ಸಾವಿರ ರೂಪಾಯಿಗಳನ್ನು ತಪ್ಪದೆ ಕೊಡಬೇಕೆಂಬುದಾಗಿ ನಿರೂಪಿಸಲ್ಪಟ್ಟಿತ್ತು.

ಚಿತ್ರಚಂಚಲನಾದ ಬಾಲಕೃಷ್ಣನು ಆತನನ್ನು ಹೇಗೆ ನಾಶಮಾಡಬೇಕೆಂಬುದರ ಬಗ್ಗೆ ಯೋಚಿಸುತ್ತಿರಲು ಕಾಂಪೌಂಡರ್ ಲೋಕನಾಥನು ತನ್ನ ಎದುರಿಗೆ ತಲೆ ಕೆರೆದುಕೊಳ್ಳುತ್ತಾ ಬಂದು ನಿಂತಿರುವುದನ್ನು ಕಂಡನು.

ಆತನ ಮುಖವನ್ನು ನೋಡುತ್ತಲೇ ಬಾಲಕೃಷ್ಣನ ಮುಖದಲ್ಲಿ ನಗೆ ಮಿಂಚೊಂದು ಸುಳಿಯಿತು.

ಈತನ ಸಹಾಯದಿಂದ ಆ ವ್ಯಕ್ತಿಯನ್ನು ಉಪಾಯದಿಂದಲೇ ಕೊನೆಗಾಣಿಸಬೇಕೆಂದು ನಿರ್ಧರ ಮಾಡಿಕೊಂಡನು.

ಲೋಕನಾಥನ ಮುಖವನ್ನು ನೋಡುತ್ತಾ ಏನು ವಿಷಯವೆನ್ನುವಂತೆ ಹುಬ್ಬು ಹಾರಿಸಿ ಕೇಳಿದನು.

ಲೋಕನಾಥನು ಎಡಗೈಯ್ಯಿಂದ ತಲೆ ಕೆರೆದುಕೊಳ್ಳುತ್ತಾ—

"ಸಂಬಳ ಸಾಲುವುದಿಲ್ಲ. ಸ್ವಾಮಿ." ಎಂದು ಹೇಳಿದನು.

"ಎಷ್ಟು ಹೆಚ್ಚು ಮಾಡಬೇಕು ?"

ಲೋಕನಾಥನು ಹಲ್ಲು ಬಿಡುತ್ತಾ—

"ಹತ್ತು ರೂಪಾಯಿ." ಎಂದು ಹೇಳಿದನು.

"ಅಷ್ಟು ಮಾತ್ರವೇ ?"

"ಹೌದು ! ಸ್ವಾಮಿ."

ಹರ್ಷದ ಹೊನಲು ಲೋಕನಾಥನ ಮುಖದಲ್ಲಿ ಕಾಣಿಸಿಕೊಂಡಿತು. ಬಾಲಕೃಷ್ಣನನ್ನು ಮನದಲ್ಲಿಯೇ ಕೊಂಡಾಡಿ ಧನ್ಯವಾದಗಳನ್ನು ಅರ್ಪಿಸಿದನು.

"ಲೋಕನಾಥ ! ನೀನು ಕೇಳಿಕೊಂಡಂತೆ ಹತ್ತು ರೂಪಾಯಿಗಳನ್ನು ಹೆಚ್ಚು ಮಾಡುವೆನು. ನಿನ್ನ ಕೆಲಸವು ನನಗೆ ತೃಪ್ತಿಕರವಾಗಿ ಕಂಡಿದೆ. ಆದರೇ ! ನಿನ್ನಿಂದ ನನಗೊಂದು ಉಪಕಾರವಾಗಬೇಕು."

"ಅದೇನು ಹೇಳಿ ಸ್ವಾಮಿ."

"ರೂಮಿನ ಬಾಗಿಲು ಮುಚ್ಚು ಅನಂತರ ಹೇಳುವೆನು."

ಲೋಕನಾಥನು ಬಾಗಿಲನ್ನು ಮುಚ್ಚಿ ಅಗುಳಿ ಹಾಕಿದನು.

"ಲೋಕನಾಥ ! ವಿಷಯವು ಅತ್ಯಂತ ರಹಸ್ಯವಾದುದು. ಯಾರೊಡನೆಯೂ ತಿಳಿಸಬಾರದು."

"ಇಲ್ಲಾ ! ಸ್ವಾಮಿ !! ತಿಳಿಸುವುದಿಲ್ಲ."

"ಈ ದಿನ ರಾತ್ರಿ ಹನ್ನೆರಡು ಘಂಟೆಯ ವೇಳೆಗೆ ನಾನು ಕಾರಿನಲ್ಲಿ ಜೋಗಿ ಕಣಿವೆಯ ಬಳಿಗೆ ಹೋಗುವೆನು. ನೀನು ಮೊದಲೇ ಕಾರಿನ ಹಿಂಭಾಗದ ಸೀಟಿನಲ್ಲಿ ಯಾರೊಬ್ಬರಿಗೂ ಕಾಣದಂತೆ ಮಲಗಿಕೊಂಡಿರು. ನಾನು ಜೋಗಿ ಕಣಿವೆಯ ಸಮೀಪದಲ್ಲಿರುವ ಐದನೆಯ ಮೈಲಿ ಕಲ್ಲಿನ ಬಳಿಯಲ್ಲಿ ಕಾರನ್ನು ನಿಲ್ಲಿಸಿ ಎರಡು ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಎಡಭಾಗದಲ್ಲಿರುವ ಕಾಳಿಕಾ ದೇವಾಲಯದ ಕಡೆಗೆ ಹೋಗುವೆನು. ನೀನು ಸ್ವಲ್ಪ ಮಾತ್ರವೂ ಶಬ್ದಮಾಡದಂತೆ ಆ ಕತ್ತಲಿನಲ್ಲಿಯೇ ನನ್ನನ್ನು ಹಿಂಬಾಲಿಸಬೇಕು. ಮುಂದೆ ಸ್ವಲ್ಪದೂರ ಹೋದನಂತರ ಕೆಂಪು ಲೈಟು ಕಾಣಿಸಿಕೊಳ್ಳುವುದು. ಆಗ ನಾನು ನಿಂತುಕೊಳ್ಳುವೆನು. ಆಗ ನೀನೂ ನಿಂತುಕೊ. ಕೆಲವು ನಿಮಿಷಗಳನಂತರ ನನ್ನ ಸಮೀಪದಲ್ಲಿ ಟಾರ್ಚ್ ಬೆಳಕು ಕಾಣಿಸುವುದು. ಆಗ ಆ ವ್ಯಕ್ತಿಯಾರೆಂಬುದನ್ನು ನೋಡು. ಬಳಿಕ ಆ ವ್ಯಕ್ತಿಯು ಟಾರ್ಚನ್ನು ಆರಿಸಿ ನನ್ನ ಮಗ್ಗುಲಿಗೆ ಬಂದು ನನ್ನ ಜೇಬಿನಲ್ಲಿರುವ ಹಣವನ್ನು ತೆಗೆದುಕೊಳ್ಳುವುದು. ಆಗ ನೀನು

ಅಂದಾಜಿನ ಮೇಲೆ ಗುರಿಯಿಟ್ಟು ಪಿಸ್ತೂಲಿನಿಂದ ಆ ವ್ಯಕ್ತಿಯನ್ನು ಹೊಡೆಯ ಬೇಕು. ಹೊಡೆಯುವಾಗ ಎಚ್ಚರಿಕೆ."

ಲೋಕನಾಥನ ಸರ್ವಾಂಗವೂ ನಡುಗಿಹೋಯಿತು.

"ಕೊಲೆ ಮಾಡಿದರೆ ನನ್ನನ್ನು ಬಿಡುವರೇ ?"

—ಎಂದು ಭಯದಿಂದಲೇ ಕೇಳಿದನು.

"ನೀನೇನೂ ಆ ವಿಷಯವಾಗಿ ಭಯಪಡಬೇಡ. ನಿನ್ನ ಮೇಲೆ ಯಾವ ಅಪವಾದವೂ ಬಾರದಂತೆ ನೋಡಿಕೊಳ್ಳುವ ಭಾರವು ನನಗಿರಲಿ. ನೀನು ಸ್ವಲ್ಪ ಮಾತ್ರವೂ ಯೋಚಿಸಬೇಡ."

"ಸ್ವಾಮಿ! ಈಗಲೇ ಅರಹೊಟ್ಟೆಯ ಜೀವನವಾಗಿದೆ. ಮುಂದೆ ನನ್ನ ಮೇಲೆ ಅಪವಾದವು ಬಾರದಿರುವುದಿಲ್ಲ. ನನ್ನನ್ನು ದಸ್ತಗಿರಿ ಮಾಡಿ ಸೆರೆಮನೆಗೆ ಕಳುಹಿಸಿದರೆ ನನ್ನ ಪತ್ನಿಯ ಗತಿಯೇನು ?"

"ಲೋಕನಾಥ! ನೀನು ಸ್ವಲ್ಪ ಮಾತ್ರವೂ ಹಿಂದು ಮುಂದಿನ ಆಲೋಚನೆಯಿಲ್ಲದೆ ಮಾತನಾಡುವಂತೆ ತೋರುತ್ತದೆ. ನಿನ್ನ ವಿಷಯವಾಗಿ ನಾನಿರುವೆನೆಂದು ಹೇಳಿದರೂ ಮಂಕು ಕವಿದವನಂತೆ ಮಾತನಾಡುವೆಯಲ್ಲ. ನಿನ್ನ ಅವಿವೇಕಕ್ಕೆ ಏನು ಹೇಳಲಿ ? ಈ ಕಾರ್ಯ ಮಾಡಿದರೆ ನಿನಗೇನೂ ಪ್ರತಿಫಲವಿಲ್ಲವೆಂದು ಭಾವಿಸಬೇಡ. ಎರಡು ಸಾವಿರ ರೂಪಾಯಿಗಳನ್ನು ಕೊಡುವೆನು. ಡಾಕ್ಟರು ಕೊಡುವರೋ ಇಲ್ಲವೋ ಎಂಬ ಅನುಮಾನವು ನಿನಗಿರಬಹುದು. ನೀನು ಸಂದೇಹಗೊಳ್ಳಬೇಡ. ಈಗಲೇ ಒಂದು ಸಾವಿರ ರೂಪಾಯಿಗಳನ್ನು ಅಡ್ವಾನ್ಸಾಗಿ ಕೊಡುವೆನು. ತೆಗೆದುಕೊಂಡು ಹೋಗು."

ಒಂದು ಸಾವಿರ ರೂಪಾಯಿಗಳೆನ್ನುತ್ತಲೇ ಲೋಕನಾಥನ ಮುಖವು ಅರಳಿತು. ತನಗೂ, ತನ್ನ ಪತ್ನಿಗೂ ದಿನವೂ ನಡೆಯುತ್ತಿದ್ದ ರಾದ್ಧಾಂತವು ಕಣ್ಮುಂದೆ ಗೋಚರಿಸಿ ಇನ್ನು ಮುಂದಾದರೂ ಕಾವೇರಿಯನ್ನು ಸೌಖ್ಯದಲ್ಲಿಡಬಹುದೆಂದು ಯೋಚಿಸಿಕೊಂಡು ಆನಂದಪಟ್ಟನು.

ಅವನ ಮುಖಚಹರೆಯನ್ನು ನೋಡಿ ಈತನು ಒಪ್ಪಿದನೆಂದು ಬಾಲಕೃಷ್ಣನು ಅರಿತುಕೊಂಡನು.

ಎಲ್ಲಾ ಧನದ ಮಹಿಮೆ.

ಲೋಕನಾಥನು ಕೆಲವು ನಿಮಿಷ ಯೋಚಿಸಿ—

"ಸ್ವಾಮೀ ! ಒಂದು ವಿಷಯ." ಎಂದನು.

"ಏನು ! ಒಂದು ವಿಷಯ ?"

"ಕತ್ತಲಿನಲ್ಲಿ ಆತನಿಗೆ ಹೊಡೆಯುವುದಾದರೂ ಹೇಗೆ ? ಅಕಸ್ಮಾತ್ ಆ ಏಟು ನಿಮಗೇ ಬಿದ್ದು ಬಿಟ್ಟರೆ ?"

"ನೀನು ಆ ವಿಷಯದಲ್ಲಿ ಬಹಳ ಹೆಚ್ಚು ಜಾಗರೂಕನಾಗಿರಬೇಕು. ಆ ವ್ಯಕ್ತಿಯು ನನ್ನ ಹತ್ತಿರಕ್ಕೆ ಬಂದು ಟಾರ್ಚ್ ಹಚ್ಚಿದಾಗ ಅದರ ಮಾರ್ಗವನ್ನು ನೋಡಿಕೊಂಡು ಹೊಡೆಯಬೇಕು."

"ಹಾಗಾದರೇ ! ಒಂದು ಕೆಲಸ ಮಾಡುವೆನು."

"ಏನು ?"

"ನಾನು ನಿಮ್ಮ ಹಿಂದೆಯೇ ಬರಬೇಕಾದ ಕಾರಣವಿಲ್ಲ."

"ಏಕೆ ?"

"ನೀವು ಕಾರಿನಿಂದ ಇಳಿದು ಮುಂದೆ ಹೊರಟುಹೋಗಿ. ನಾನು ಕಾರಿನಲ್ಲಿಯೇ ಕುಳಿತು ನಿಮ್ಮ ಕಡೆಯೇ ನೋಡುವೆನು. ವ್ಯಕ್ತಿಯು ಕೆಂಪುಲೈಟು ತೋರಿಸುತ್ತಲೇ ಕಾರಿನಿಂದಿಳಿದು ಸರ್‍ರನೆ ಅಲ್ಲಿಗೆ ಬರುವೆನು. ನಿಮ್ಮ ಸಮೀಪಕ್ಕೆ ಬಂದು ಟಾರ್ಚ್ ಲೈಟನ್ನು ಹಚ್ಚುತ್ತಲೇ ಪಿಸ್ತೂಲಿನಿಂದ ಹೊಡೆಯುವೆನು."

ಲೋಕನಾಥನ ಸಲಹೆಯು ಸರಿಯೆಂದು ಬಾಲಕೃಷ್ಣನ ಮನಕ್ಕೆ ತೋಚಿತು. 'ಈ ರೀತಿ ಮಾಡಿದರೆ ಆತನು ನಿರ್ನಾಮವಾಗುವನಲ್ಲದೆ ನನ್ನ ಮೇಲಿನ ಗಂಡಾಂತರವೂ ಕಳೆದುಹೋಗುತ್ತದೆ.' ಎಂದು ಯೋಚಿಸಿಕೊಂಡನು.

ಅವನ ಸಲಹೆಗೆ ಒಪ್ಪಿ ಸಾವಿರ ರೂಪಾಯಿಗಳನ್ನು ಕೂಡಲೇ ಎಣಿಸಿ ಕೊಟ್ಟನು.

ಲೋಕನಾಥನು ಮಹದಾನಂದದಿಂದ ರೂಪಾಯಿಗಳನ್ನು ತೆಗೆದುಕೊಂಡು ತನ್ನ ಮನೆಗೆ ಹೊರಟನು.

ಪ್ರತಿತಿಂಗಳು, ತಿಂಗಳೂ ಎರಡೆರಡು ಸಾವಿರ ರೂಪಾಯಿ ಕೊಡುವ ಬದಲು ಒಂದೇಸಾರಿಗೆ ಎರಡುಸಾವಿರ ರೂಪಾಯಿ ಹೋಗಲೆಂಬ ಅಭಿಪ್ರಾಯವು ಬಾಲಕೃಷ್ಣನ ಮನದಲ್ಲಿ ಇತ್ತಲ್ಲದೆ, ಇಂದಿಗೆ ದೊಡ್ಡ ಗಂಡಾಂತರವೂ ಪಾರಾಗುವುದೆಂದು ಆಗಂದುಕೊಂಡಿದ್ದನು.

ಸರೋಜಳಂತೆ ಸರಸ್ವತಿಯೂ ವಿಧವೆಯಾಗುವುದರಲ್ಲಿ ಸಂಶಯವಿಲ್ಲವೆಂದು ಕೊಂಡನು. ಕಾರಣ:-ಜಗನ್ನಾಥನೇ ಅಲ್ಲಿಗೆ ಬಂದು ಹಣ ತೆಗೆದುಕೊಳ್ಳುವವ ನೆಂದು ಅವನು ಭಾವಿಸಿಕೊಂಡಿದ್ದನು.

ಇಂದಿಗೆ ನನ್ನ ಗುಪ್ತವೈರಿಯು ಇಂದಿಗೆ ನಾಶವಾಗುವನೆಂದು ಆನಂದ ಗೊಂಡನು.

ಈ ದಿನವೂ ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೋಗ ಬೇಕೆಂತಲೂ, ಆತನು ಪಿಸ್ತೂಲಿನ ಏಟಿಗೆ ಸಿಕ್ಕಿ ಆ ವ್ಯಕ್ತಿಯು ಕೊಲೆಯಾದರೆ ಅಲ್ಲಿಯೇ ಲೋಕನಾಥನಿಗೆ ಒಂದು ಸಾವಿರ ರೂಪಾಯಿಗಳನ್ನು ಕೊಡಬೇಕೆಂತಲೂ ನಿರ್ಧರಿಸಿಕೊಂಡನಲ್ಲದೆ, ಆ ವ್ಯಕ್ತಿ ಯಾರೆಂಬುದನ್ನೂ ನೋಡಬಹುದೆಂದು ಕೊಂಡನು.

ಆ ವ್ಯಕ್ತಿಯು ಕೊಲೆಯಾದನಂತರ ಯಾರೆಂಬುದನ್ನು ನೋಡಿಕೊಂಡು ಶವವನ್ನು ಯಾವುದಾದರೊಂದು ನದಿಗೆ ಎಸೆದುಬಿಟ್ಟರೆ ವಿಷಯವು ರಹಸ್ಯ ವಾಗಿಯೇ ಉಳಿಯುವುದೆಂದುಕೊಂಡನು.

ಲೋಕನಾಥನಿಗೂ ಎಚ್ಚರಿಕೆಯನ್ನಿತ್ತು, ಮುಂದೆ ಏನಾದರೂ ಬಹಿರಂಗ ಪಡಿಸುವುದಾಗಿ ಕಂಡುಬಂದರೆ ಈತನನ್ನೂ ಕೊನೆಗಾಣಿಸಿ ಬಿಡಬೇಕೆಂದು ನಿರ್ಧರ ಮಾಡಿಕೊಂಡನು.

ಯೋಚನೆಯ ಮತ್ತಿನಲ್ಲಿರುವಾಗಲೇ ರಾಜೇಶ್ವರಿಯು ರೂಮಿನೊಳಗೆ ಪ್ರವೇಶಿಸಿದಳು.

ಈಚಿನ ಹೊಸ ಮಾರ್ಪಾಟಿಗೆ ಕಾರಣವೇನೆಂದು ಆಕೆಯು ತನ್ನ ಪತಿಯನ್ನು ಹಲವು ಬಗೆಯಲ್ಲಿ ಪೀಡಿಸಿ ಕೇಳಿದರೂ ಆತನು ಹೇಳಲಿಲ್ಲ. ಇಂದಿಗೆ ತನ್ನ ಯೋಚನೆಗಳೆಲ್ಲಾ ದೂರವಾಗುವುದೆಂದು ಒಂದೇ ಮಾತಿನಲ್ಲಿ ಹೇಳಿ ಮುಗಿಸಿದನು.

# ೧೧

ಬಾಲಕೃಷ್ಣನಿಂದ ಒಂದು ಸಾವಿರ ರೂಪಾಯಿಗಳನ್ನು ಪಡೆದ ಲೋಕನಾಥನು ಪರಮಾನಂದದಿಂದ ಹೊರಟು ಬಂದು ತನ್ನ ಮನೆಯೊಳಗೆ ಕಾಲಿಡುತ್ತಲೇ "ಕಾವೇರಿ" ಎಂದು ಕೂಗಿದನು.

ಅಡಿಗೆ ಮನೆಯಲ್ಲಿದ್ದ ಕಾವೇರಿಯು ಹೊರಗೆ ಬಂದಳು. ಹೊಗೆಯಲ್ಲಿ ಕುಳಿತಿದ್ದುದರಿಂದ ಅವಳ ಕಣ್ಣುಗಳೆಲ್ಲಾ ಊದಿಕೊಂಡಿದ್ದುವು.

ಲೋಕನಾಥನು ಹರ್ಷದಿಂದ—

"ಕಾವೇರಿ ! ಇಂದಿಗೆ ನಮ್ಮ ಕಷ್ಟಗಳೆಲ್ಲಾ ನಿವಾರಣೆಯಾದುವು." ಎಂದು ಹೇಳಿದನು.

ವಿಸ್ಮಿತಳಾದ ಕಾವೇರಿಯು—

"ಅದು ಹೇಗೆ ?" ಎಂದು ಕೇಳಿದಳು.

"ಹೇಗಾದರೂ ಆಗಲಿ, ಈಗ ಅಡಿಗೆಯಾಗಿರುವುದೇ ?"

"ಹಸೀ ಸೌದೆಯನ್ನು ತಂದುಕೊಟ್ಟು ಇಷ್ಟು ಜಾಗ್ರತೆ 'ಅಡಿಗೆಯಾಯಿತೇ?' ಎಂದು ಕೇಳಲು ನಿಮಗೆ ನಾಚಿಕೆಯಾಗುವುದಿಲ್ಲವೇ ?"

—ಎಂದು ಸಿಟ್ಟಿನಿಂದಲೇ ಉತ್ತರವಿತ್ತಳು.

"ಆ ವಿಷಯವೆಲ್ಲಾ ಬೇಡ. ನಿನ್ನ ಗೊಡ್ಡು ಪುರಾಣವು ನಿನ್ನಲ್ಲಿಯೇ ಇರಲಿ. ಅಡಿಗೆಯಾಗಿರುವುದೋ, ಇಲ್ಲವೋ ಅಷ್ಟು ಹೇಳು ?"

"ಇನ್ನೂ ಆಗಿಲ್ಲ."

"ಹಾಗಿದ್ದ ಮೇಲೆ ಒಲೆಯನ್ನು ಆರಿಸಿಬಿಡು. ಹೋಟೆಲಿನಿಂದ ಊಟ ತರುವೆನು."

"ಇದೇನು ಈ ದಿನ ಇಷ್ಟು ಸಂಭ್ರಮ."

"ಅದೆಲ್ಲಾ ನಿನಗೆ ಬೇಡ. ಮೊದಲು ಒಲೆಯನ್ನು ಆರಿಸು. ಈ ಹೊಗೆಯಲ್ಲಿ ನಿಲ್ಲಲು ನನಗೆ ಸಾಧ್ಯವಿಲ್ಲ."

"ಅಯ್ಯೋ! ಪಾಪ!! ಇಷ್ಟು ದಿನ ಹೊಗೆಯಿರಲಿಲ್ಲ. ಈ ದಿನ ಮಾತ್ರ ಹೊಗೆಯಿರುವುದಲ್ಲವೇ?"

"ಈಗ ಒಲೆ ಆರಿಸುವೆಯೋ? ಇಲ್ಲವೋ? ಅಷ್ಟು ಹೇಳು?"

ಕಾವೇರಿಯು ಮಾರ್ನುಡಿಯದೆ ಒಳಗೆ ಹೋಗಿ ಒಲೆಯನ್ನು ಆರಿಸಿ ಹೊರಗೆ ಬಂದಳು.

ಲೋಕನಾಥನು ಹೊರಗೆ ಹೋಗಬೇಕೆನ್ನುವಷ್ಟರಲ್ಲಿಯೇ ಪಕ್ಕದ ಮನೆ ಗಣೇಶರಾಯರೊಡನೆ ದಫೇದಾರರು ಬಂದರು.

ಅವರನ್ನು ನೋಡುತ್ತಲೇ ಲೋಕನಾಥನ ಜಂಘಾಬಲವೇ ಉಡುಗಿ ಹೋಯಿತು.

ದಫೇದಾರರು ದರ್ಪವಾಣಿಯಿಂದ—

"ಲೋಕನಾಥರೆಂದರೆ ನೀವೇಯೋ?" ಎಂದು ಕೇಳಿದರು.

"ಹೌದು."

—ಎಂದು ತಡವರಿಸುತ್ತಲೇ ಲೋಕನಾಥನು ಹೇಳಿದನು.

"ನಿಮ್ಮನ್ನು ಇನ್ಸ್‌ಪೆಕ್ಟರ್ ಸಾಹೇಬರು ಕರೆದುಕೊಂಡು ಬರುವಂತೆ ಹೇಳಿ ಕಳುಹಿಸಿರುವರು. ಹೊರಟು ಬನ್ನಿ."

"ಏಕೆ?"

"ಆ ವಿಷಯವೆಲ್ಲಾ ನಿಮಗೆ ಬೇಡಿ. ಮೊದಲು ಹೊರಡಿ. ಅಲ್ಲಿಗೆ ಬಂದನಂತರ ಏನು ವಿಷಯವೆಂಬುದು ನಿಮಗೇ ತಿಳಿಯುತ್ತದೆ."

ಏನೋ ಒಳಸಂಚು ನಡೆದಿದೆಯೆಂದು ಲೋಕನಾಥನು ಊಹಿಸಿಕೊಂಡನು. ಅವನ ಧೈರ್ಯವೆಲ್ಲಾ ಉಡುಗಿಹೋಯಿತು. ಹರ್ಷವೆಲ್ಲಾ ಮಾಯವಾಯಿತು.

ಬೇರೆ ಉಡುಪುಗಳನ್ನು ಹಾಕಿಕೊಂಡು ಬರುವೆನೆಂದು ಹೇಳಲು ದಫೇದಾರರು ಒಪ್ಪಿದರು.

ರೂಪಾಯಿಗಳನ್ನು ಪೆಟಿಗೆಯಲ್ಲಿಟ್ಟು ಹೋಗಬೇಕೆಂದು ಲೋಕನಾಥನು

ನಿರ್ಧರಿಸಿದನಾದರೂ, ಅತ್ತ ಹೋಗುತ್ತಲೇ ತನ್ನ ಪತ್ನಿಯು ಎಲ್ಲಿ ರೂಪಾಯಿಗಳನ್ನು ತೆಗೆದುಕೊಳ್ಳುವಳೋ ಎಂಬ ಅನುಮಾನವೂ ಅಂಕುರಿಸಿತು.

ಧೈರ್ಯಮಾಡಿಕೊಂಡು ರೂಪಾಯಿಗಳನ್ನು ತನ್ನ ಪತ್ನಿಗೆ ಕಾಣದಂತೆ ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿ ಉಡುಪುಗಳನ್ನು ಬದಲಾಯಿಸಿಕೊಂಡು ಹೊರಡಲು ತಯಾರಾದನು.

ಲೋಕನಾಥನು ಹೊರಡಲು ಅಣಿಯಾಗುತ್ತಲೇ ದಫೇದಾರರಿಗೆ ಪೇಚಾಟಕ್ಕಿಟ್ಟುಕೊಂಡಿತು.

ಗಣೇಶರಾಯರ ಕಡೆ ನೋಡಿ ಕಣ್ಣು ಮಿಟುಕಿಸಿದರು.

ಗಣೇಶರಾಯರು ಸಹಜವಾಗಿಯೇ—

"ಪೋಲೀಸ್ ಠಾಣೆಗೆ ಏಕೆ ಸಾರ್. ಇನ್ಸ್‌ಪೆಕ್ಟರ್ ಸಾಹೇಬರು ತುಂಬಾ ಸಿಟ್ಟಿನವರು. ಅಲ್ಲಿಗೆ ಹೋದರೆ ಏನಾದರೂ ರಾದ್ಧಾಂತವಾಗುತ್ತದೆ. ಆದ್ದರಿಂದ ಇಲ್ಲಿಯೇ ಸರಿಪಡಿಸಿ." ಎಂದರು.

ಲೋಕನಾಥನು ಕಕ್ಕಾಬಿಕ್ಕಿಯಾದನು. ಅವರಿಬ್ಬರೂ ಬಂದ ಮರ್ಮವೇನೆಂದೇ ತಿಳಿಯಲಾಗಲಿಲ್ಲ.

ಕಾವೇರಮ್ಮನು ಅಡಿಗೆ ಮನೆಯಿಂದ ಇಣಿಕಿ ನೋಡುತ್ತಾ ಭೀತಿಯಿಂದ ತಲ್ಲಣಿಸುತ್ತಿದ್ದಳು.

ದಫೇದಾರರು ತಮ್ಮ ಗಂಟಲನ್ನು ಸರಿಪಡಿಸಿಕೊಂಡು ದರ್ಪವಾಣಿಯಿಂದ–

"ನೀವು ಪ್ರತಿದಿನವೂ ಗಲಾಟೆಮಾಡುತ್ತಾ ಅಕ್ಕಪಕ್ಕದ ಮನೆಯವರಿಗೆ ತೊಂದರೆಯುಂಟು ಮಾಡುತ್ತಿರುವಿರಿ. ಅವರೆಲ್ಲರೂ ಸೇರಿ ನಿಮ್ಮ ಮೇಲೆ ದೂರು ಕೊಟ್ಟಿರುವರು. ಅದಕ್ಕಾಗಿಯೇ ಇನ್ಸ್‌ಪೆಕ್ಟರ್ ಸಾಹೇಬರು ನಿಮ್ಮನ್ನು ಕರೆದು ಕೊಂಡು ಬರುವಂತೆ ಹೇಳಿದರು. ಈಗ ಅಲ್ಲಿಗೆ ಬಂದರೆ ನಿಮ್ಮ ಮೇಲೆ ಕೇಸಾಕುವರು. ನೀವು ಇನ್ನು ಮುಂದೆ ಗಲಾಟೆಮಾಡದೆ ಅಕ್ಕಪಕ್ಕದ ಮನೆಯವರಿಗೆ ತೊಂದರೆಯುಂಟು ಮಾಡುವುದಿಲ್ಲವೆಂದು ಹೇಳಿದರೆ ಇನ್ಸ್‌ಪೆಕ್ಟರನ್ನು ಹೇಗಾದರೂ ನಾನು ಸಮಾಧಾನ ಪಡಿಸುವೆನು. ಇಲ್ಲದೆ ಹೋದರೆ ನಿಮ್ಮ ಮೇಲೆ ಕೇಸಾಗುವುದು ಖಂಡಿತಾ, ಇದಕ್ಕೆ ಏನು ಹೇಳುವಿರಿ ?" ಎಂದು ಪ್ರಶ್ನಿಸಿದರು.

ದಫೇದಾರರ ಮಾತುಗಳನ್ನು ಕೇಳುತ್ತಲೇ ಇದು ಗಣೇಶರಾಯರ ಕುತಂತ್ರವೆಂದು ಲೋಕನಾಥನು ಅರಿತುಕೊಂಡನಲ್ಲದೆ, ಪೋಲೀಸ್‌ಠಾಣೆಗೆ ದೂರು

ಹೋಗಿಲ್ಲವೆಂದು ತಿಳಿದವನಲ್ಲದೆ, ಈಗ ಶಾಂತಿಯಿಂದಲೇ ವರ್ತಿಸುವುದು ಉತ್ತಮ ವೆಂದು ಭಾವಿಸಿಕೊಂಡನು.

ಇನ್ನುಮುಂದೆ ಗಲಾಟೆ ಮಾಡುವುದಿಲ್ಲವೆಂದು ದಫೇದಾರರಿಗೆ ಹೇಳಿದನು. ದಫೇದಾರರು ತಲೆಯಾಡಿಸಿದರೂ ಕೂಡಲೇ ಹೋಗುವಂತೆ ತೋರಲಿಲ್ಲ.

ಸೂಕ್ಷ್ಮವನ್ನರಿತ ಲೋಕನಾಥನು ಹಿರಣ್ಯಗರ್ಭದಿಂದ ಅವರನ್ನು ತೃಪ್ತಿ ಪಡಿಸಲು ತಮ್ಮ ಜೇಬನ್ನು ಮುಟ್ಟಿ ನೋಡಿಕೊಳ್ಳುತ್ತಲೇ ದಫೇದಾರರು ಗಣೇಶ ರಾಯರೊಡನೆ ಹಿಂದಿರುಗಿದರು.

ಅವರು ಹೋಗುತ್ತಲೇ 'ಬದುಕಿದೆಯಾ ? ಬಡಜೀವವೇ ?' ಎಂದುಕೊಂಡ ಲೋಕನಾಥನು ರೂಪಾಯಿಗಳನ್ನು ತೆಗೆದುಕೊಂಡು, ತನ್ನ ಪತ್ನಿಯನ್ನು ಸಂಗಡವೇ ಕರೆದುಕೊಂಡು ಹೋಗಲು ತೀರ್ಮಾನಿಸಿ ಮನೆ ಬಾಗಿಲಿಗೆ ಬೀಗ ಹಾಕಿ ಆಕೆ ಯನ್ನು ಸಂಗಡ ಕರೆದುಕೊಂಡು ಹೊರಟನು.

ಕಾವೇರಮ್ಮನಿಗೆ ಪತಿಯ ವರ್ತನೆಯನ್ನು ನೋಡಿ ಆಶ್ಚರ್ಯವಾಯಿತು.

ಲೋಕನಾಥನು ಪತ್ನಿಯನ್ನು ಕರೆದುಕೊಂಡು ಮೊದಲು ಕೈಲಾಸಭವನಕ್ಕೆ ಹೋದನು.

ಇಬ್ಬರೂ ಆ ಹೋಟೆಲಿನಲ್ಲಿ ಊಟ ಮಾಡಿದರು.

ಬಳಿಕ ತನ್ನ ಪತ್ನಿಯನ್ನು ಕರೆದುಕೊಂಡು ದೊಡ್ಡ ಜವಳಿ ಅಂಗಡಿಗೆ ಹೋದನು.

ತನಗಿಷ್ಟಬಂದ ಸೀರೆಗಳನ್ನು ತೆಗೆದುಕೊಳ್ಳುವಂತೆ ತನ್ನ ಪತ್ನಿಗೆ ಲೋಕ ನಾಥನು ಹೇಳಲು ಆಕೆಯು ವಿಸ್ಮಿತಳಾದಳು.

ತನ್ನ ಮನಸ್ಸಿಗೆ ಒಪ್ಪಿದ ಸೀರೆಗಳನ್ನೆಲ್ಲಾ ತೆಗೆಸಿದಳು. ಲೋಕನಾಥನು ಯಾವುದಕ್ಕೂ ಅಡ್ಡಿ ಬರಲಿಲ್ಲ. ಇಪ್ಪತ್ತೈದು, ಮೂವತ್ತು ಕಣಗಳನ್ನು ತೆಗೆದು ಕೊಂಡಳು.

ತನಗೆ ಬೇಕಾದ ಸೀರೆ ಕಣ ವಗೈರೆಗಳನ್ನೆಲ್ಲಾ ಕಾವೇರಿಯು ತೆಗೆದುಕೊಂಡ ನಂತರ ಲೋಕನಾಥನು ಬಿಲ್ಲಿನ ಹಣವನ್ನಿತ್ತು ತನ್ನ ಪತ್ನಿಯೊಡನೆ ಜ್ಯೂಯಲರ್ಸ್ ಅಂಗಡಿಗೆ ಬಂದನು.

ಅಲ್ಲಿ ತನ್ನ ಪತ್ನಿಗೆ ಬೇಕಾದ ಕೆಲವು ಒಡವೆಗಳನ್ನು ಕೊಡಿಸಿದನು. ಕಾವೇರಮ್ಮನಿಗೆ ಉಂಟಾದ ಆಶ್ಚರ್ಯವನ್ನು ವರ್ಣಿಸಲಾಗದುದಾಯಿತು. ತಾನು

ಪೂರ್ವಜನ್ಮದಲ್ಲಿ ಮಾಡಿದ ಪುಣ್ಯಫಲದಿಂದ ಇವರ ಪತ್ನಿಯಾದೆನಲ್ಲದೆ ಮುಂದೆ ಏಳು ಜನ್ಮಗಳಲ್ಲಿಯೂ ಇವರೇ ತನ್ನ ಪತಿಯಾಗಿರಲೆಂದು ತನ್ನ ಮನೆದೇವರಿಗೆ ಹರಕೆ ಹೊತ್ತಳು. ಅವನನ್ನು ಹಿಂದೆ ಹೀಯಾಳಿಸಿದುದು ತನ್ನ ಮಹಾಪರಾಧ ವೆಂದುಕೊಂಡಳು.

ಆಕೆಯ ಒಡವೆ, ವಸ್ತ್ರಗಳಿಗಾಗಿ ಏಳು ನೂರು ರೂಪಾಯಿಗಳಾಯಿತು. ಇನ್ನೂ ಒಂದು ಸಾವಿರ ರೂಪಾಯಿಗಳು ಸಿಗುವುದೆಂಬ ಆಸೆಯಿಂದಿದ್ದ ಲೋಕ ನಾಥನು ರೂಪಾಯಿಗಳನ್ನು ಖರ್ಚು ಮಾಡಲು ಸ್ವಲ್ಪ ಮಾತ್ರವೂ ಹಿಂದೆ ಮುಂದೆ ನೋಡಲಿಲ್ಲ.

ಅನಂತರ ಇಬ್ಬರೂ ಮನೆಗೆ ಬಂದರು.

ಲೋಕನಾಥನು ಎರಡು ತಿಂಗಳಿಗೆ ಸಾಕಾಗುವಷ್ಟು ದವಸಧಾನ್ಯಗಳನ್ನು ತಂದು ಹಾಕಿದನು.

ಏಕಾಏಕಿ ಇವರು ಈ ರೀತಿ ಮಾರ್ಪಾಟಾದುದನ್ನು ನೋಡಿ ಅಕ್ಕಪಕ್ಕದ ಮನೆಯವರು ಸೋಜಿಗಗೊಂಡರು.

ಕಾವೇರಮ್ಮನು ಮೈತುಂಬ ಒಡವೆಗಳನ್ನು ಧರಿಸಿಕೊಂಡು, ಮಿರುಮಿರು ಗುವ ಸೀರೆಯನ್ನುಟ್ಟುಕೊಂಡು, ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಆನಂದದಿಂದ ಹಿಗ್ಗಿದಳು.

ಆದರೇ ! ತನ್ನ ಪತಿಯು ಕೊಳಕು ಬಟ್ಟೆಯಲ್ಲಿರುವುದನ್ನು ನೋಡಿದಳು.

ಆ ಸುಳಿವನ್ನರಿತ ಲೋಕನಾಥನು ಗಂಭೀರಭಾವದಿಂದ—

"ಕಾವೇರಿ ! ನಾನು ನಾಳೆಯ ದಿನ ಹೊಲೆಸಿಕೊಳ್ಳುವೆನು. ಈಗ ನಿನಗೆ ತೃಪ್ತಿಯಾಯಿತೋ ಇಲ್ಲವೋ ?" ಎಂದು ಕೇಳಿದನು.

"ಆಯಿತು. ಆದರೇ ! ನೀವು ಈ ಕೊಳಕು ಬಟ್ಟೆಯಲ್ಲಿರುವುದು ನನ್ನ ಮನಸ್ಸಿಗೆ ಒಪ್ಪಿಗೆಯಿಲ್ಲ."

"ನಾಳೆಯ ದಿನವೇ ನಾನೂ ಹೊಲೆಸಿಕೊಳ್ಳುವೆನಲ್ಲ."

"ಈ ದಿನವೇ ಹೊಲೆಸಿಕೊಂಡರೇನಾಗುತ್ತದೆ ?"

"ಈಗ ತಂದಿದ್ದ ಸಾವಿರ ರೂಪಾಯಿಗಳಲ್ಲಿ ಎಲ್ಲವೂ ಖರ್ಚಾಗಿ ಸ್ವಲ್ಪ ರೂಪಾಯಿಗಳು ಮಾತ್ರ ಉಳಿದಿದೆ. ನಾಳೆಯ ದಿನ ಇನ್ನೂ ಒಂದು ಸಾವಿರ ರೂಪಾಯಿಗಳು ಸಿಗುತ್ತದೆ. ಆಗ ಹೊಲೆಸಿಕೊಳ್ಳುವೆನು."

"ಸಾವಿರ ರೂಪಾಯಿಗಳೇ ?"

"ಹೌದು."

"ಯಾರು ಕೊಟ್ಟರು ? ಮತ್ತೆ ಯಾರು ಕೊಡುವರು ?"

"ಯಾರಾದರೂ ಕೊಟ್ಟಿರಲಿ! ಯಾರಾದರೂ ಕೊಡುವರಿರಲಿ. ಆ ವಿಷಯವು ನಿನಗೇಕೆ ?"

"ನಾನು ಕೇಳಬಾರದೇ ?"

"ಕೇಳಬಹುದು."

"ಅದು ನಾನು ತಿಳಿಯಬಾರದಂತಹ ವಿಷಯವೇ ?"

"ಅದೇನೂ ಅಂತಹ ಪ್ರಮಾದವಾದ ವಿಷಯವಲ್ಲ. ಅದಿರಲಿ ಇಂದು ರಾತ್ರಿ ಸ್ವಲ್ಪ ಕೆಲಸವಿದೆ. ಅದನ್ನು ಮುಗಿಸಿಬಿಟ್ಟರಾಯಿತು. ನಾಳೆಯ ದಿನ ಸಾವಿರ ರೂಪಾಯಿಗಳು ನನ್ನ ಕೈ ಸೇರುತ್ತದೆ."

"ಏನು ಕೆಲಸ ?"

"ಪುನಃ ಏನು ಕೆಲಸವೆಂದು ಕೇಳಬೇಡ. ಅದೆಲ್ಲಾ ಅತ್ಯಂತ ರಹಸ್ಯವಾದುದು."

"ಹಾಗೋ."

"ಹೌದು."

ಕಾವೇರಮ್ಮನು ಮುಂದೆ ಮಾತನಾಡಲಿಲ್ಲ. ಯಾವ ಕೆಲಸಕ್ಕಾಗಿ ಎರಡು ಸಾವಿರ ರೂಪಾಯಿಗಳ ಲಾಭವೆಂದು ಊಹಿಸಲಸಮರ್ಥಳಾದಳು.

## ೧೨

ರಾತ್ರಿಯಾಗುವುದನ್ನೇ ಕಾಯುತ್ತಾ ಮನದಲ್ಲಿ ಬಗೆಬಗೆಯಾಗಿ ಗಾಳಿ ಗೋಪುರಗಳನ್ನು ಕಟ್ಟುತ್ತಿದ್ದ ಲೋಕನಾಥನು ರಾತ್ರಿ ಹತ್ತು ಘಂಟೆಯಾಗುತ್ತಲೇ ಯಾರೊಬ್ಬರಿಗೂ ಅರಿವಾಗದಂತೆ ಬಾಲಕೃಷ್ಣನಲ್ಲಿಗೆ ಬಂದನು.

ಬಾಲಕೃಷ್ಣನು ಆತನ ಕೈಗೆ ಪಿಸ್ತೂಲನ್ನು ಕೊಟ್ಟು ಕಳುಹಿಸಲು ಆತನು ಗ್ಯಾರೇಜಿನೊಳಗೆ ಪ್ರವೇಶಿಸಿ ಕಾರಿನ ಹಿಂಭಾಗದ ಸೀಟಿನಲ್ಲಿ ಮಲಗಿಕೊಂಡನು.

ವೇಳೆಯಾಗುತ್ತಲೇ ಬಾಲಕೃಷ್ಣನು ಎರಡು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಗ್ಯಾರೇಜಿಗೆ ಬಂದು ಲೋಕನಾಥನು ಮಲಗಿರುವುದನ್ನು ನೋಡಿ ಇಂದಿಗೆ ತನ್ನ ಗುಪ್ತವೈರಿ ನಾಶವಾದನೆಂದು ಭಾವಿಸಿ ಸ್ಟೇರಿಂಗ್ ಮುಂದೆ ಕುಳಿತು ಕಾರನ್ನು ಸ್ಟಾರ್ಟ್ ಮಾಡಿ ರಸ್ತೆಗೆ ತಂದು ನಿಲ್ಲಿಸಿ ಬಳಿಕ ಗ್ಯಾರೇಜಿನ ಬಾಗಿಲನ್ನೂ ಗೇಟನ್ನೂ ಹಾಕಿ, ಕಾರಿನಲ್ಲಿ ಕುಳಿತು ಡ್ರೈವ್ ಮಾಡಿಕೊಂಡು ಜೋಗಿ ಕಣಿವೆಗೆ ಹೊರಟನು.

ಎಂದಿನಂತೆ ಕಾರನ್ನು ಐದನೇ ಮೈಲಿ ಕಲ್ಲಿನ ಬಳಿಯಲ್ಲಿ ಮರದ ಕೆಳಗೆ ನಿಲ್ಲಿಸಿ ಲೋಕನಾಥನಿಗೆ ಸೂಕ್ಷ್ಮವಾಗಿ ಎಚ್ಚರಿಕೆಯನ್ನಿತ್ತು, ಹಿಂದಿನಂತೆ ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಹೊರಟನು.

ಈ ಸಾರಿ ಕಾಳಿಕಾ ದೇವಾಲಯದ ಸಮೀಪಕ್ಕೆ ಹೋಗುವವರೆವಿಗೂ ಕೆಂಪು ಲೈಟು ಕಾಣಿಸಲಿಲ್ಲ. ಆ ದೇವಾಲಯದ ಸಮೀಪಕ್ಕೆ ಹೋಗಿ ಅಲ್ಲಿಯೇ ನಿಂತುಕೊಂಡನು. ಕತ್ತಲಿನಲ್ಲಿ ಯಾವ ವಸ್ತುವೂ ಕಾಣುತ್ತಿರಲಿಲ್ಲ.

ಅಲ್ಲಿಯೇ ಹಾಗೇ ನಿಂತುಕೊಂಡನು. ಕೈಗಳೆರಡು ಮೇಲೆಯೇ ಇದ್ದುವು. ಈ ಸಾರಿ ಮುಸುಕಿನ ವ್ಯಕ್ತಿಯ ಆಯಸ್ಸು ಪೂರ್ಣವಾಗುವುದೆಂದು ಅವನು ಹರ್ಷಭರಿತನಾಗಿದ್ದನು.

ಹತ್ತು ನಿಮಿಷಗಳಾದರೂ ಕೆಂಪು ದೀಪವು ಕಾಣಿಸಿಕೊಳ್ಳಲಿಲ್ಲ. ಬಾಲ ಕೃಷ್ಣನ ಮನಕ್ಕೆ ಏನೋ ಒಂದು ವಿಧವಾದ ಸಂದೇಹವು ಮೂಡಿತು.

'ಪ್ರತಿಸಾರಿಯೂ ಇನ್ನೂ ಹಿಂದೆಯೇ ಇರುವಾಗಲೇ ಕೆಂಪು ದೀಪವು ಕಾಣಿಸಿಕೊಳ್ಳುತ್ತಿತ್ತು. ಆದರೇ! ಈ ಸಾರಿ ಇಷ್ಟು ದೂರ ಬಂದು ಹತ್ತು ನಿಮಿಷಗಳಾದರೂ ಅದು ಕಾಣಿಕೊಳ್ಳದಿರುವ ಕಾರಣವೇನು? ನಮ್ಮ ರಹಸ್ಯವು ತಿಳಿದುಹೋಗಿರಬಹುದೇ? ಅದಕ್ಕಾಗಿ ಬಾರದಿರಬಹುದೇ? ಇದ್ದರೂ ಇರಬಹುದು. ಒಂದುವೇಳೆ ಈಗ ಬಂದರೂ ಉಳಿಯುವಹಾಗಿಲ್ಲ. ಲೋಕನಾಥನು ಸಿದ್ಧ ನಾಗಿಯೇ ಇರುವನು. ಇನ್ನುಮುಂದೆ ನನಗೆ ಕಾಗದವೂ ಬರಲಾರದು. ಒಂದು ವೇಳೆ ಬಂದರೇ ಇದೇ ಏರ್ಪಾಡು ಮಾಡಿಕೊಳ್ಳುವೆನು.' ಎಂದು ಯೋಚಿಸುತ್ತಾ ಇನ್ನು ಹಿಂದಿರುಗುವುದೇ ಉತ್ತಮವೆಂದು ಭಾವಿಸಿ ಹಿಂದಿರುಗಲನುವಾಗ ಬೇಕೆಂದಿರಲು ಆತನಿಗೆ ಸಮೀಪದಲ್ಲಿಯೇ ಕೆಂಪುಲೈಟು ಗೋಚರಿಸಿತು.

ಅದನ್ನು ನೋಡುತ್ತಲೇ ಅವನು ಬೆರಗಾಗಿ ಹಾಗೆಯೇ ನಿಂತನು. ಮನದಲ್ಲಿ ಹರ್ಷವು ಒಡಮೂಡಿತು. ಇಂದಿಗೆ ಇವನ ಆಯಸ್ಸು ಪರಿಪೂರ್ಣವಾಯಿತೆಂದು ಕೊಂಡನು.

ಕೆಂಪುಲೈಟು ಆರಿಹೋಯಿತು.

ವ್ಯಕ್ತಿಯು ತನ್ನ ಹತ್ತಿರಕ್ಕೆ ಬಂದು ಟಾರ್ಚ್ ದೀಪವನ್ನು ಹತ್ತಿಸುತ್ತಲೇ ಆತನಿಗೆ ಲೋಕನಾಥನು ಪಿಸ್ತೂಲಿನಿಂದ ಹೊಡೆಯುವನೆಂದು ಭಾವಿಸಿಕೊಂಡಿದ್ದನು.

ವ್ಯಕ್ತಿಯು ಬಾಲಕೃಷ್ಣನಿಗೆ ಒಂದುಮಾರು ದೂರವಿರುವಾಗ ಚಿಕ್ಕ ಟಾರ್ಚ್ ಲೈಟನ್ನು ಹತ್ತಿಸಿ ಬಾಲಕೃಷ್ಣನ ಜೇಬಿನಲ್ಲಿರುವ ಹಣದ ಗಂಟನ್ನು ನೋಡಿ ಟಾರ್ಚನ್ನು ಆರಿಸಿ ಅವನ ಸಮೀಪಕ್ಕೆ ಬಂದು ಗಂಟನ್ನು ತೆಗೆದುಕೊಂಡಿತು.

ಟಾರ್ಚ್ ಹತ್ತುತ್ತಲೇ 'ನಿನ್ನ ಆಯುಸ್ಸು ಪೂರ್ಣವಾಯಿತು' ಎಂದು ಬಾಲಕೃಷ್ಣನು ಹೇಳುವುದರಲ್ಲಿದ್ದನು. ಆದರೇ! ನಾಲಿಗೆ ಹೊರಳಲಿಲ್ಲ.

ಲೋಕನಾಥನು ಗುಂಡು ಹಾರಿಸುವನೆಂದು ಭಾವಿಸಿದ್ದ ಅವನ ಊಹೆಯು ಸುಳ್ಳಾಯಿತು.

ವ್ಯಕ್ತಿಯು ತನ್ನ ಜೇಬಿನಿಂದ ಹಣವನ್ನು ತೆಗೆದುಕೊಂಡರೂ ಲೋಕನಾಥನು ಗುಂಡು ಹಾರಿಸದೆ ಇದ್ದುದಕ್ಕಾಗಿ ಬಾಲಕೃಷ್ಣನು ಲೋಕನಾಥನ ಮೇಲೆ ಕೋಪ ಗೊಂಡನು.

ಆತನು ಗಾಬರಿಯಾಗಿ ಯಾರಿಗೆ ಹೊಡೆಯಬೇಕೆಂದು ತಿಳಿಯದೆ ತಟಸ್ಥ ನಾಗಿರಬಹುದು. ಎಂದು ಯೋಚಿಸಿ 'ಈಗ ಕಾರಿನ ಬಳಿಗೆ ಹೋದರೆ ಏನು ವಿಷಯವಿದ್ದರೂ ತಿಳಿಯುತ್ತದೆ.' ಎಂದು ಆಲೋಚಿಸಿಕೊಳ್ಳುತ್ತಿರಲು ಕೆಂಪು ದೀಪವು ಕಾಣಿಸಿಕೊಂಡ ಸ್ಥಳದಿಂದ ಹಸುರು ದೀಪವು ಕಾಣಿಸಿತು.

ಕೂಡಲೇ ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಹಾಗೇ ಹಿಂದಿರುಗಿ ಕಾರಿನ ಬಳಿಗೆ ಬಂದನು.

ಲೋಕನಾಥನಿಗೆ ತಕ್ಕ ಪ್ರಾಯಶ್ಚಿತ್ತ ಮಾಡಬೇಕೆಂದು ಬಯಸಿ ಲೋಕ ನಾಥನ ಹೆಸರಿಡಿದು ಕೂಗಲು ಉತ್ತರವೇ ಬರಲಿಲ್ಲ.

ಇನ್ನೂ ಮಲಗಿಕೊಂಡೇ ಇರಬಹುದೆಂದು ಭಾವಿಸಿ ಸಿಟ್ಟಿನಿಂದ ಕಾರಿನೊಳಗೆ ನೋಡಲು ಲೋಕನಾಥನು ಅಸ್ತಾವಸ್ತೆಯಾಗಿ ಬಿದ್ದಿರುವುದು ಆ ಕತ್ತಲಿನಲ್ಲಿ ಅಲ್ಪಸ್ವಲ್ಪವಾಗಿ ಕಂಡಿತು.

ಗಾಬರಿಯಾಗಿ ಟಾಪ್‌ಲೈಟನ್ನು ಹಚ್ಚಿಸಿ ನೋಡಲು ಲೋಕನಾಥನ ಅಂತ ರಾತ್ಮವು ಪರಮಾತ್ಮನಲ್ಲಿ ಬೆರೆತುಹೋಗಿದ್ದಿತು.

ಆ ದೃಶ್ಯವನ್ನು ನೋಡುತ್ತಲೇ ಬಾಲಕೃಷ್ಣನು ದಿಗ್ಭ್ರಾಂತನಾದನು.

ಲೋಕನಾಥನ ಎದೆಗೆ ಪಿಸ್ತೂಲಿನ ಏಟು ಬಿದ್ದಿತ್ತು. ಕಣ್ಣುಗಳು ತೆರೆ ದಿದ್ದಹಾಗೆಯೇ ಪ್ರಾಣವಾಯುವು ಹೊರಟುಹೋಗಿತ್ತು. ಆತನ ಬಟ್ಟೆಗಳೆಲ್ಲಾ ರಕ್ತಮಯವಾಗಿ ರಕ್ತವು ಕಾರಿನ ತುಂಬಾ ಹರಡಿಕೊಂಡಿತ್ತು.

ಲೋಕನಾಥನ ಶವವನ್ನು ಏನು ಮಾಡಬೇಕೆಂದೇ ಬಾಲಕೃಷ್ಣನ ಮನಕ್ಕೆ ಹೊಳೆಯಲಿಲ್ಲ.

ಆತನ ಸಾವಿನ ಬಗ್ಗೆ ನಾನಾ ಬಗೆಯಾಗಿ ಯೋಚನಾತರಂಗಗಳೆದ್ದುವು.

'ಈತನನ್ನು ಯಾರು ಕೊಲೆ ಮಾಡಿರಬಹುದು ? ಮುಸುಕಿನ ವ್ಯಕ್ತಿಯೇ ಕೊಲೆ ಮಾಡಿರುವನೆಂಬುದರಲ್ಲಿ ಸಂದೇಹವಿಲ್ಲ. ಆದರೇ ? ಆತನಿಗೆ ನಮ್ಮ ರಹಸ್ಯವು ತಿಳಿದ ಬಗೆಯಾದರೂ ಹೇಗೆ ? ಈತನು ಹೇಳಿರಬಹುದೇ ?........ಛೇ ! ಈತನೇಕೆ ಹೇಳುವನು ? ತಾನೇ ಮೃತ್ಯುವನ್ನು ತಂದು ಕೊಳ್ಳುವನೇ ? ಹಾಗಾ ದರೇ ! ಯಾರು ಹೇಳಿರಬಹುದು ? ಆ ವ್ಯಕ್ತಿಯು ಸದಾ ನನ್ನ ಚಲನವಲನ ಗಳನ್ನು ಅರಿಯುವುದರಲ್ಲಿಯೇ ನಿರತನಾಗಿರಬಹುದೇ ? ಅಥವಾ ನಗರದಿಂದ ಇಲ್ಲಿಗೆ ಬರುವಾಗ ಕಾರಿನಲ್ಲಿ ಎಷ್ಟು ಜನರಿರುವರೆಂಬುದನ್ನು ನೋಡಲು ಯಾರನ್ನಾ

ದರೂ ನಿಯಮಿಸಿರಬಹುದೇ? ಇದ್ದರೂ ಇರಬಹುದು. ಆತನು ಈ ಲೋಕ ನಾಥನು ಕಾರಿನಲ್ಲಿ ಕುಳಿತುದನ್ನು ನೋಡಿರಬಹುದು. ನಾನು ಕಾರನ್ನು ಇಲ್ಲಿಗೆ ತೆಗೆದುಕೊಂಡು ಬಂದನಂತರ ಬೇರೊಂದು ಕಾರಿನಲ್ಲಿಯೋ, ಅಥವಾ ಮೋಟಾರ್ ಸೈಕಲ್ಲಿನಲ್ಲಿಯೋ ಹಿಂಭಾಲಿಸಿ ಬಂದಿರಬಹುದು. ನಾನು ಈತನನ್ನು ಇಲ್ಲಿ ಬಿಟ್ಟು ಹೋದನಂತರ ಈತನನ್ನು ಕೊಲೆಮಾಡಿ ಹಿಂದಿರುಗಿ ಹೊರಟು ಹೋಗಿರಬಹುದು. ಬಹುಶಃ ಪಿಸ್ತೂಲಿಗೆ ಸೈಲೆನ್ಸರ್ ಹಚ್ಚಿರಬಹುದು. ಆದ್ದರಿಂದ ಗುಂಡಿನ ಶಬ್ದ ಕೇಳಿಸಲಿಲ್ಲ ಇಲ್ಲಿ ನಡೆದ ಘಟನೆಯು ನನಗೆ ತಿಳಿಯಬಾರದೆಂಬ ಉದ್ದೇಶದಿಂದ ಆ ವ್ಯಕ್ತಿಯು ನನ್ನನ್ನು ಕಾಳಿಯ ದೇವಸ್ಥಾನದವರೆವಿಗೂ ಕರೆಯಿಸಿಕೊಂಡಿತು. ಒಟ್ಟಿನಲ್ಲಿ ಆ ವ್ಯಕ್ತಿಯು ನನ್ನ ಮೇಲೆ ಪೂರ್ಣ ನಿಗಾ ಇಟ್ಟಿರುವನು. ಇದರಲ್ಲಿ ಸಂದೇಹವಿಲ್ಲ. ಅದನ್ನು ಕೊಲ್ಲುವುದಕ್ಕೆ ಹೋಗಿ ಇವನನ್ನು ಬಲಿ ಕೊಟ್ಟುದಾ ಯಿತೂ. ಆ ವ್ಯಕ್ತಿಯು ತನ್ನ ಸಹಾಯಕ್ಕೆ ಇನ್ನೂ ಕೆಲವರನ್ನು ನಿಯಮಿಸಿ ಕೊಂಡಿರಬಹುದು. ಒಟ್ಟಿನಲ್ಲಿ ನಾನು ಉಳಿದದ್ದೇ ನನ್ನ ಪೂರ್ವಜನ್ಮದ ಪುಣ್ಯ ಫಲವೆಂದೇ ಹೇಳಬೇಕು.' ಎಂಬುದಾಗಿ ಯೋಚಿಸುತ್ತಾ ನಿರ್ವಿಣ್ಣವದನನಾಗಿ ನಿಂತುಕೊಂಡನು.

ಲೋಕನಾಥನ ಬಗ್ಗೆ ದೊಡ್ಡ ಯೋಚನೆಯುಂಟಾಯಿತು. ಆ ಅಪಾದನೆ ಯಿಂದ ಯಾವ ರೀತಿ ಪಾರಾಗಬೇಕೆಂಬುದರ ಬಗ್ಗೆ ತನ್ನ ತಲೆಯನ್ನು ಕೆಡಿಸಿ ಕೊಳ್ಳಬೇಕಾಯಿತು.

ಆ ಕಾರ್ಗತ್ತಲಿನಲ್ಲಿ ನಿಂತ ಹಾಗಿಯೇ ನಿಂತುಕೊಂಡು ಕೆಲಕಾಲ ಯೋಚಿ ಸಿದನು. ಹತ್ತಾರು ಬಗೆಯಾಗಿ ಯೋಚಿಸಿದರೂ ಯಾವುದೂ ಬಗೆ ಹರಿಯಲಿಲ್ಲ.

ಯೋಚಿಸಿ, ಯೋಚಿಸಿ ಹುಚ್ಚನಂತಾದನು.

ಕಡೆಗೆ 'ಈ ಶವವನ್ನು ಶೇಷಪ್ಪನ ಶವವನ್ನು ಎಸೆದಂತೆ ಯಾವುದಾದ ರೊಂದು ನದಿಗೆ ಎಸೆದರೆ ರಹಸ್ಯವು ಬಯಲಾಗದೆ ಉಳಿಯಬಹುದು.' ಎಂದು ನಿಶ್ಚಯಿಸಿಕೊಂಡನಾದರೂ 'ಈತನು ತನ್ನ ಪತ್ನಿಯಲ್ಲಿ ತಾನು ನನ್ನ ಸಂಗಡ ಹೋಗುವುದನ್ನು ತಿಳಿಸಿರಬಹುದು. ಆಕೆಯು ತನ್ನ ಪತಿಯು ಬಾರದೆ ಇದ್ದುದನ್ನು ನೋಡಿ ಪೋಲೀಸ್ ಠಾಣೆಗೆ ದೂರಿತ್ತರೆ ನಾನು ತೊಂದರೆ ಪಡಬೇಕಾಗುತ್ತದೆ.' ಎಂಬುದಾಗಿಯೂ ಯೋಚಿಸಿಕೊಂಡನು.

ಒಂದೊಂದು ಸಾರಿ ಒಂದೊಂದು ವಿಧವಾದ ಯೋಚನೆಯು ಹೊಳೆದು ಅವನ ಮೆದುಳನ್ನು ಕಲಕುತ್ತಿತ್ತು.

'ಈಗಲೇ ಈ ಶವವನ್ನು ಈತನ ಪತ್ನಿಯ ವಶಕ್ಕೆ ಒಪ್ಪಿಸಿ ಆಕೆಗೆ ಹಣದಾಸೆಯನ್ನು ತೋರಿಸಿದರೆ, ಅಕಸ್ಮಾತ್ ಸತ್ತು ಹೋದರೆಂದು ಆಕೆಯು ಹೇಳಬಲ್ಲಳೇ ?' ಎಂಬುದಾಗಿ ಯೋಚಿಸಿದನು. ಅದೂ ಬಗೆ ಹರಿಯಲಿಲ್ಲ. ಶವ ಸಂಸ್ಕಾರಕ್ಕೆ ಬಂದವರು ಆಯುಧದ ಗಾಯವನ್ನು ನೋಡದೆ ಇರುವುದಿಲ್ಲ. ಆಗ ಆಕೆಯನ್ನು ಬೆದರಿಸಿ ಕೇಳಿದರೆ ಆಕೆಯು ನಡೆದ ವಿಷಯವನ್ನು ಹೇಳಿಬಿಡುವಳು. ಅನಂತರ ನಾನು ತೊಂದರೆಗೊಳಗಾಗುವೆನು. ಈ ರಹಸ್ಯವೆಲ್ಲವೂ ಬಯಲಾಗುತ್ತದೆ. ಉಪಾಯದಿಂದ ಕೆಲಸ ಸಾಧಿಸಿಕೊಳ್ಳಲು ಹೋಗಿದ್ದಕ್ಕೆ ಅಪಾಯವುಂಟಾಯಿತು. ಈ ಅಪಾಯದಿಂದ ಉಳಿಯುವ ಉಪಾಯವೇ ತೋಚದಂತಾಗಿದೆ. ನಾನಾಗಿಯೇ ಗಂಡಾಂತರವನ್ನು ತಂದುಕೊಂಡಂತಾಯಿತು.' ಎಂದು ಯೋಚಿಸಿ ತನ್ನ ದುರ್ವಿಧಿಯನ್ನು ಅಳಿದುಕೊಳ್ಳುತ್ತಾ ಪರಿತಪಿಸಿದನು.

ತನ್ನ ಹಣೆಯನ್ನು ಬಡಿದುಕೊಂಡನು.

'ನಾನೂ ಸಹ ಇಲ್ಲಿಯೇ ಆತ್ಮಹತ್ಯೆ ಮಾಡಿಕೊಂಡು ಬಿಡಲೇ ?' ಎಂದೂ ಯೋಚಿಸಿಕೊಂಡನು. ಅದಕ್ಕೆ ಮನಸ್ಸು ಹಿಂಜರಿಯಿತು.

ಯೋಚಿಸಿ, ಯೋಚಿಸಿ 'ನಾನು ಈ ಗಂಡಾಂತರದಿಂದ ಉಳಿದುಕೊಳ್ಳಬೇಕಾದರೆ ಈ ಶವವು ಪೋಲೀಸ್ ಅಧಿಕಾರಿಗಳ ಕೈಗೆ ಸಿಗದಂತೆ ಮಾಡುವುದೇ ಮೊದಲನೆಯ ಕರ್ತವ್ಯ. ಶೇಷಪ್ಪನ ಶವವನ್ನು ನದಿಗೆ ಎಸೆದುದರಿಂದ ರಹಸ್ಯವು ಬಯಲಾಗದೆ ಉಳಿದುಕೊಂಡಿತು. ಅದೇ ರೀತಿ ಈತನ ಶವವನ್ನು ನದಿಗೆ ಎಸೆಯುವುದೇ ಉತ್ತಮವಾದ ಕೆಲಸ. ಪೋಲೀಸ್ ಅಧಿಕಾರಿಗಳ ಕೈಗೆ ಈ ಶವವು ದೊರೆತರೆ ನಾನೂ ಸಹ ಮುಂದೆ ಬರಬೇಕಾಗುತ್ತದೆ. ಆದ್ದರಿಂದ ಇದು ಅವರ ಕೈಗೆ ಸಿಕ್ಕದಂತೆ ಮಾಡುವುದೇ ಉತ್ತಮ.' ಎಂದು ಯೋಚಿಸಿ 'ಈ ರೀತಿ ಮಾಡಿದರೆ ತನ್ನ ಗುಟ್ಟು ರಟ್ಟಾಗುವುದಿಲ್ಲ'ವೆಂದು ನಿರ್ಧರಿಸಿಕೊಂಡನು.

ಇನ್ನು ತಡಮಾಡುವುದು ಅನಾವಶ್ಯಕವೆಂದು ಭಾವಿಸಿ ಕಾರನ್ನು ಸ್ಟಾರ್ಟ್ ಮಾಡಿ ಮುಂದೆ ಹೊರಟನು.

ಸುಮಾರು ಹದಿಮೂರು ಮೈಲಿಗಳ ದೂರ ಹೋದನಂತರ ದೊಡ್ಡದಾದ ನದಿಯು ಸಿಕ್ಕಿತು.

ಕಾರನ್ನು ಸೇತುವೆಯ ಪಕ್ಕದಲ್ಲಿ ನಿಲ್ಲಿಸಿ, ಬಳಿಕ ತಾನು ಕಾರಿನಿಂದ ಕೆಳಗಿಳಿದು ಲೋಕನಾಥನ ಶವವನ್ನು ಶ್ರಮವಹಿಸಿ ಎತ್ತಿ ನದಿಗೆ ಎಸೆದನು.

ಶವವು ನೀರಿನಲ್ಲಿ ಬೀಳುತ್ತಲೇ ದೊಡ್ಡದಾಗಿ ಶಬ್ದವಾಯಿತು. ಬಾಲಕೃಷ್ಣನು ಆ ಶಬ್ದಕ್ಕೆ ಬೆಚ್ಚಿ ಬಿದ್ದನು.

ಕಾರ್ಗತ್ತಲೆಯು ಮಂಜು ಕವಿದಂತೆ ಕವಿದಿದೆ.

ಶವವನ್ನು ನದಿಗೆ ಎಸೆದನಂತರ ಬಾಲಕೃಷ್ಣನಿಗೆ ಅಲ್ಲಿ ನಿಲ್ಲಲು ಭಯವಾಯಿತು. ಭೋರ್ಗರೆಯುವ ನೀರಿನ ಶಬ್ದದಿಂದ ಅವನು ಭೀತಿಯಿಂದ ತಲ್ಲಣಿಸಿದನು.

ಅವನ ಎದೆಯಲ್ಲಿ ಅವಲಕ್ಕಿ ಕುಟ್ಟಿದಂತಾಗುತ್ತಿತ್ತು.

ಭೀತಿಯಿಂದ ತಲ್ಲಣಿಸಿ, ಇಲ್ಲಿರುವುದು ನಿಷ್ಪ್ರಯೋಜನವೆಂದು ಭಾವಿಸಿ ಕಾರಿನಲ್ಲಿ ಕುಳಿತನು.

ಕೈ ಕಾಲುಗಳು ನಡುಗುತ್ತಿದ್ದುವು. ತುಟಿಗಳು ಅದುರುತ್ತಿದ್ದುವು.

ಕಾರನ್ನು ಸ್ಟಾರ್ಟ್ ಮಾಡಿ ನಡುಗುವ ಕೈಗಳಿಂದಲೇ, ಬಲಗೈಯ್ಯಲ್ಲಿ ಸ್ಟೀರಿಂಗ್ ಹಿಡಿದುಕೊಂಡು ಎಡಗೈಯಿಂದ ಸೆಕೆಂಡ್ ಗೇರಿಗೆ ಹಾಕಿ 'ಮೂ' ಮಾಡಿದನು.

ಸುಮಾರು ಒಂದುಮೈಲಿ ದೂರ ಹೋದನಂತರ ಆತನ ಮನಸ್ಸಿಗೆ ಏನೋ ಒಂದು ವಿಧದಲ್ಲಿ ಸ್ವಲ್ಪ ಧೈರ್ಯವುಂಟಾಯಿತು.

'ಶೇಷಪ್ಪನನ್ನು ಕೊಲೆ ಮಾಡುವಾಗ ಇದೇರೀತಿ ಒಬ್ಬನೇ ಮಾಡಿದ್ದರೆ ಈ ರೀತಿ ಅನಾಹುತಗಳಿಗೆ ಕಾರಣವಾಗುತ್ತಿರಲಿಲ್ಲ. ಈ ದುರ್ದೆಶೆಗಳಿಗೆ ಅವಕಾಶವೂ ಆಗುತ್ತಿರಲಿಲ್ಲ. ನನ್ನ ತಂಗಿಯೊಬ್ಬಳಿಗೆ ತಿಳಿದಿದ್ದುದರಿಂದ ಈ ಅನಾಹುತಗಳಿಗೆ ಕಾರಣವಾಯಿತು. ಇದು ಯಾವ ಅನಾಹುತಕ್ಕೂ ಕಾರಣವಾಗಲಾರದು.' ಎಂದು ಯೋಚಿಸಿ ಕಾರನ್ನು ಮೂವತ್ತು ಮೈಲಿಯ ವೇಗದಲ್ಲಿ ಓಡಿಸಿದನು.

ಲೋಕನಾಥನು ಕೊಲೆಯಾಗಿದ್ದ ಐದನೆಯ ಮೈಲಿ ಕಲ್ಲಿನ ಬಳಿಗೆ ಕಾರು ಬಂದಾಗ ನಾನಾವಿಧವಾದ ಯೋಚನೆಗಳು ಅವನ ತಲೆಯನ್ನು ಮುತ್ತಿಕೊಂಡು ಚಿತ್ತಚಂಚಲನನ್ನಾಗಿ ಮಾಡಿದುವು.

ನಗರವು ಇನ್ನು ಎರಡು ಮೈಲಿಗಳಿದೆ ಎನ್ನುವಾಗ ಕಾರು 'ಭುರ್ರ್ಕು, ಭುರ್ರ್ಕು' ಎನ್ನುತ್ತಾ ನಿಂತಿತು.

ಬಾಲಕೃಷ್ಣನ ಜಂಘಾಬಲವೇ ಉಡುಗಿ ಹೋದಂತಾಯಿತು. ಕಾರಿನಿಂದ ಕೆಳಗಿಳಿಯಲು ಭಯವಾಯಿತು.

ಕಾರಿನಲ್ಲಿ ಪೆಟ್ರೋಲು ಮುಗಿದಿರಬಹುದೆಂದು ಯೋಚಿಸಿದನು. ಅವನ ಸರ್ವಾಂಗವೆಲ್ಲವೂ ಗಡಗಡನೆ ನಡುಗುತ್ತಿತ್ತು.

ಕಾರಿನಿಂದ ಕೆಳಗಿಳಿದು ಟ್ಯಾಂಕಿನಲ್ಲಿ ಪೆಟ್ರೋಲನ್ನು ನೋಡಲು ಇನ್ನೂ ಒಂದೂವರೆ ಇಂಚು ಉದ್ದವಿತ್ತು.

ಅದನ್ನು ನೋಡಿ ಮನಸ್ಸಿಗೆ ಧೈರ್ಯವಾಯಿತು.

ಪೆಟ್ರೋಲ್ ಪೈಪಿನಲ್ಲಿ ಕಸ ಸಿಕ್ಕಿಕೊಂಡಿದೆಯೆಂದು ಭಾವಿಸಿ, ಸ್ಪಾನರ್ ತೆಗೆದುಕೊಂಡು ಏಸಿಪೊಂಪಿನ ಬಳಿ ನಟ್ಟನ್ನು ಬಿಚ್ಚಿ ಪೊಂಪಿನಿಂದ ಗಾಳಿ ಹೊಡೆದು ಮತ್ತೆ ಫಿಟ್ ಮಾಡಿದನು.

ಬಳಿಕ ಸ್ಟಾರ್ಟ್ ಮಾಡಿ ಹರ್ಷದಿಂದ ಹೊರಟನು.

ಕಾರು ನಗರದ ಆವರಣದೊಳಗೆ ಪ್ರವೇಶಿಸಿದಾಗ ಘಂಟೆಯನ್ನು ನೋಡಲು ಮೂರು ಘಂಟೆಯಾಗಿತ್ತು.

ಕಾರನ್ನು ಬಂಗಲೆಯ ಮುಂದೆ ನಿಲ್ಲಿಸಿ ಗೇಟನ್ನು ತೆಗೆದು ಗ್ಯಾರೇಜಿನ ಬಾಗಿಲುಗಳನ್ನು ತೆಗೆದು ಕಾರನ್ನು ಒಳಗೆ ಬಿಟ್ಟು, ಮಾರನೆಯ ದಿನ ರಕ್ತವನ್ನೆಲ್ಲಾ ಒರೆಸಿಬಿಡಬೇಕೆಂದು ನಿರ್ಧರಿಸಿ ಅಡಿಗೆಯವಳಿಂದ ಬಾಗಿಲನ್ನು ತೆಗೆಸಿಕೊಂಡು ತನ್ನ ಡ್ರೆಸ್ಸಿಂಗ್ ರೂಮಿಗೆ ಹೋಗಿ ಉಡುಪುಗಳನ್ನು ಬದಲಾಯಿಸಿಕೊಂಡು ಮಲಗುವ ರೂಮಿಗೆ ಹೋದನು.

ರಾಜೇಶ್ವರಿಯು ಇವನಿಗಾಗಿ ಕಾಯುತ್ತಾ ಕುಳಿತಿದ್ದಳು.

ಪತಿಯು ಬಂದುದನ್ನು ನೋಡಿ "ಈ ವೇಳೆಯಲ್ಲಿ ಎಲ್ಲಿಗೆ ಹೋಗಿದ್ದಿರಿ ?" ಎಂದು ಕೇಳಲು ಸಿಟ್ಟಿನಿಂದ ಬಾಲಕೃಷ್ಣನು "ಆ ವಿಷಯವೆಲ್ಲಾ ನಿನಗೆ ಬೇಡ. ನಿನ್ನ ಕೆಲಸವನ್ನು ನೀನು ನೋಡು." ಎಂದು ಗದರಿಸಿದನು.

ರಾಜೇಶ್ವರಿಯು ಸುಮ್ಮನಾದಳು.

ರಾತ್ರಿಯೆಲ್ಲಾ ಬಾಲಕೃಷ್ಣನಿಗೆ ನಿದ್ದೆ ಬರಲಿಲ್ಲ.

# ೧೩

ಲೋಕನಾಥನು ಕೊಲೆಯಾಗಿ ಎರಡು ದಿನಗಳು ಕಳೆದುವು. ಬಾಲ ಕೃಷ್ಣನ ಆತ್ಮಕ್ಕೆ ಶಾಂತಿಯೇ ಇಲ್ಲ. ಸದಾ ಆತನ ಕೊಲೆಯ ವಿಷಯವನ್ನೇ ಯೋಚಿಸುತ್ತಾ ಪರಿತಪಿಸುತ್ತಿದ್ದನು. ನಿದ್ದೆಯಲ್ಲಿಯೂ ಸಹ ಒಂದೊಂದು ಸಾರಿ ಬೆಚ್ಚಿ ಬೀಳುತ್ತಿದ್ದನು.

ಆತನು ಕೊಲೆಯಾದ ಪ್ರಯುಕ್ತ ಔಷಧಾಲಯಕ್ಕೆ ತಾನೇ ಹೋಗಬೇಕೆಂದು ನಿಷ್ಕರ್ಷೆ ಮಾಡಿಕೊಂಡರೂ ಹೋಗಲು ಮನಸ್ಸಾಗಲಿಲ್ಲ.

ಔಷಧಗಳಿಗಾಗಿ ಜನರು ಬೆಳಿಗ್ಗೆ, ಸಾಯಂಕಾಲ ಕಾದು ನಿರಾಶರಾಗಿ ಹಾಗೇ ಹಿಂದಿರುಗುತ್ತಿದ್ದರು.

'ಡಾಕ್ಟರಿಗೆ ಹಣಮದವಿದೆ. ಕಾಂಪೌಂಡರನು ಬೇರೆ ಯಾವುದೋ ಊರಿಗೆ ಹೋಗಿರಬಹುದು' ಎಂದು ಭಾವಿಸಿ ತಮತಮಗೆ ತೋಚಿದಂತೆ ವಿಧವಿಧವಾಗಿ ಮಾತನಾಡಿಕೊಳ್ಳುತ್ತಿದ್ದರು.

ಲೋಕನಾಥನ ಪರಿಸ್ಥಿತಿಯು ಏನಾಯಿತು? ಬಾಲಕೃಷ್ಣನ ಅವಸ್ಥೆಯು ಯಾವ ಮಟ್ಟದಲ್ಲಿರುವುದೆಂಬುದನ್ನು ಅವರೇನು ಬಲ್ಲರು?

ಮುಸುಕಿನ ವ್ಯಕ್ತಿಯು ಯಾರಿರಬಹುದೆಂಬುದನ್ನು ಕಂಡು ಹಿಡಿಯುವವರೆವಿಗೂ ಬಾಲಕೃಷ್ಣನ ಮನಸ್ಸಿಗೆ ಸಮಾಧಾನವಿಲ್ಲವಾಗಿದ್ದಿತು.

ಆತನು ಅಳಿಯುವವರೆವಿಗೂ, ತಾನು ಉಳಿಯುವ ಹಾಗಿಲ್ಲವೆಂದು ನಿರ್ಧರ ಮಾಡಿಕೊಂಡಿದ್ದನು.

ಮೂರನೆಯ ದಿನ ಬಾಲಕೃಷ್ಣನ ಹೆಸರಿಗೆ ಬೇರೊಂದು ಕವರು ಬಂದಿತು. ಅದನ್ನು ನೋಡುತ್ತಲೇ ಬಾಲಕೃಷ್ಣನು ಸಿಂಹವನ್ನು ಕಂಡ ಕುರಿಮರಿಯಂತೆ ಬೆದರಿ ಬೆಂಡಾಗಿ ಹೋದನು.

ಈ ಸಾರಿ ಏನು ಬರೆದಿರುವದೋ, ಎಂಬ ವಿಷಯವನ್ನರಿಯುವ ಕುತೂಹಲವುಳ್ಳವನಾಗಿ ಕವರನ್ನು ಹರಿದನು.

ಆ ಕವರನ್ನು ಹರಿಯುವಾಗಲೂ ಅವನ ಕೈಗಳು ನಡುಗುತ್ತಿದ್ದುವು. ನಡುಗುವ ಕೈಗಳಿಂದಲೇ ಒಳಗಡೆಯಿದ್ದ ಕಾಗದವನ್ನು ತೆಗೆದು ನೋಡಲು ಅದರಲ್ಲಿ ಈ ರೀತಿ ಬರೆದಿತ್ತು.

'ಬಾಲಕೃಷ್ಣಾ ! ನನ್ನ ಸಾಮರ್ಥ್ಯವು ನಿನಗೆ ಈಗ ತಿಳಿಯಿತಲ್ಲವೇ ? ನನ್ನನ್ನು ಕೊಲ್ಲಿಸಿಬಿಡಬೇಕೆಂದು ಲೋಕನಾಥನನ್ನು ಕರೆದುಕೊಂಡು ಬಂದಿದ್ದೆಯಲ್ಲವೇ ? ಅವನ ಅವಸ್ಥೆಯೇನಾಯಿತು? ನಾನು ಈ ವಿಷಯವಾಗಿ ಮೊದಲೇ ನಿನಗೆ ಎಚ್ಚರಿಸಿದೆ. ಆದರೂ ನೀನು ಉಪೇಕ್ಷೆಯಿಂದ ವರ್ತಿಸಿ ಅವನ ಕೊಲೆಗೆ ಕಾರಣನಾದೆ. ಕೊನೆಗೆ ಅವನ ಶವವನ್ನೂ ಸಹ ಇಲ್ಲಿಗೆ ತರದೆ, ಯಾವುದಾದರೊಂದು ನದಿಗೆ ಎಸೆದು ಬಿಟ್ಟೆಯೋ, ಏನೋ. ನಾನು ಬರೆದ ಪ್ರಕಾರ ನೀನು ನಡೆಯದೆ ಹೋದ್ದರಿಂದ, ನಾನು ಸಹ ವಿಶೇಷ ಶ್ರಮ ಪಡಬೇಕಾಯಿತು. ನೀನು ನನ್ನನ್ನು ಕೊಲೆ ಮಾಡಲು ಪ್ರಯತ್ನಿಸಿದೆಯಾದ್ದರಿಂದ ಈ ಸಾರಿ ನೀನು ನನಗೆ ಹತ್ತು ಸಾವಿರ ರೂಪಾಯಿಗಳನ್ನು ತಂದುಕೊಡಬೇಕು. ಹಾಗೆ ತಂದುಕೊಡದೇ ಹೋದರೆ ನಿನ್ನ ಅವಸ್ಥೆಯೇನಾಗುವುದೆಂದು ನೀನೇ ಮುಂದೆ ನೋಡುವೆ. ನಿನ್ನನ್ನೂ ಲೋಕನಾಥನ ಸಂಗಡ ಕೊಲ್ಲುತ್ತಿದ್ದೆನು. ಆದರೇ ! ಏನೋ ಒಂದು ವಿಧದಲ್ಲಿ ಯೋಚಿಸಿ ಬಿಟ್ಟಿರುವೆನು. ಅದನ್ನು ಯೋಚಿಸಿಯಾದರೂ ವಿವೇಕವನ್ನು ತಂದುಕೊ. ನೀನು ಒಂದು ವೇಳೆ ಪೋಲೀಸಿಗೆ ದೂರಿತ್ತರೂ ನೀನೇ ಶಿಕ್ಷೆಗೆ ಗುರಿಯಾಗುವೆಯಲ್ಲದೆ ಅವರು ನನ್ನನ್ನೇನೂ ಮಾಡಲಾರರು. ನಾನು ಯಾರೆಂದು ತಿಳಿದಿದ್ದರಲ್ಲವೇ ? ಅವರು ನನ್ನನ್ನು ಹಿಡಿಯುವುದು. ನನ್ನನ್ನು ಹಿಡಿಯುವ, ಅಥವಾ ಹಿಡಿಸುವ ಸಾಹಸಕ್ಕೆ ನೀನು ಹೋಗಬೇಡ. ಅದರಿಂದ ನಿನಗೇ ತೊಂದರೆಯಲ್ಲದೆ ನನಗಲ್ಲ. ಇನ್ನು ಕೆಲವು ದಿನಗಳಲ್ಲಿಯೇ ನನಗೆ ರೂಪಾಯಿಗಳು ಬೇಕಾಗುತ್ತದೆ. ಆಗ ತಿಳಿಸುವೆನು. ಅದನ್ನು ತಂದೊಪ್ಪಿಸಲು ಈಗಿನಿಂದಲೇ ಸಿದ್ಧತೆಗಳನ್ನು ಮಾಡಿಕೋ.'

ಇತಿ ನಿನ್ನ

**'ಚಿರಪರಿಚಿತ.'**

ಕಾಗದವನ್ನು ಓದಿದ ಬಾಲಕೃಷ್ಣನು ನಿರ್ವಿಣ್ಣವದನನಾದನು. ಆತನ ತಲೆಯ ಮೇಲೆ ಆಕಾಶವೇ ಕಳಚಿ ಬಿದ್ದಂತಾಯಿತು. ಇನ್ನು ತಾನು ಉಳಿಯುವ ಹಾಗೆಯೇ ಇಲ್ಲವೆಂದುಕೊಂಡು ತಲೆಯ ಮೇಲೆ ಕೈ ಹೊತ್ತು ಕುಳಿತುಕೊಂಡನು.

ಯಾರನ್ನಾದರೂ ಖಾಸಗೀ ಪತ್ತೇದಾರನನ್ನು ಹಿಡಿದು ಆತನ ಮೂಲಕ ಈ ಮುಸುಕಿನ ವ್ಯಕ್ತಿ ಯಾರೆಂಬುದನ್ನು ಪತ್ತೇಮಾಡಿ ಹಿಡಿಯಬೇಕೆಂದು ನಿರ್ಧರ ಮಾಡಿಕೊಂಡನು.

ಹಾಗೆ ಯೋಚಿಸುತ್ತಲೇ ಆ ಕಾಲದಲ್ಲಿ ಕಾಂಚೀನಗರದಲ್ಲಿಯೇ ಇದ್ದು ಕೊಂಡು, ಕಳ್ಳ ದರೋಡೆಕೋರರಿಗೆ ಶೂಲಪ್ರಾಯನಾಗಿದ್ದ ಪತ್ತೇದಾರ ಪುರು ಷೋತ್ತಮನ ನೆನಪುಂಟಾಯಿತು.

ಅವನ ನೆನಪಾಗುತ್ತಲೇ ಭಯವುಂಟಾಯಿತು. “ಪುರುಷೋತ್ತಮನು ನ್ಯಾಯವಾಧಿ. ತಪ್ಪುಮಾಡಿದವರು ಯಾರಾಗಿದ್ದರೂ ಸರಿ! ಅವರನ್ನು ಶಿಕ್ಷೆಗೆ ಗುರಿ ಪಡಿಸದಿರುವುದಿಲ್ಲ. ಒಂದು ವೇಳೆ ಆತನಲ್ಲಿ ನಾನು ಈ ವಿಷಯವನ್ನು ಮಾತ್ರ ತಿಳಿಸಿದರೂ ನನ್ನ ತಪ್ಪನ್ನೂ ಕಂಡು ಹಿಡಿಯುವನು. ಹೀಗಿರುವಾಗ ಆತನಲ್ಲಿ ಹೇಳಲಾಗದು. ಹೇಳಿದರೆ ನಾನೇ ಹಗ್ಗವನ್ನು ಕೊಟ್ಟು ಕೈ ಕಟ್ಟಿಸಿ ಕೊಂಡಂತಾಗುವುದು. ಬೇರೆ ಯಾರಲ್ಲಿಯಾದರೂ ಹೇಳಬೇಕು. ಬೇರೆ ಯಾರಿರುವರು? ಆ ಮುಸುಕಿನ ವ್ಯಕ್ತಿಯಾರೆಂಬುದನ್ನು ಪತ್ತೇಮಾಡಿ ಹಿಡಿಯ ಬೇಕಾದರೆ ಪುರುಷೋತ್ತಮನೇ ಸಮರ್ಥನು. ಇತರರಿಂದ ಸಾಧ್ಯವಿಲ್ಲ. ಹಾಗಾ ದರೇ! ಏನು ಮಾಡಲಿ? ಯಾವ ವಿಧದಲ್ಲಿ ಆತನೊಡನೆ ತಿಳುಹಿಸಲಿ? ಒಂದು ವೇಳೆ ತಿಳುಹಿಸಿದರೂ ನನ್ನ ಮೇಲೆ ಅಪವಾದವು ಬಾರದಂತೆ ತಿಳುಹಿಸಬೇಕು. ಹೇಗೆ ತಿಳುಹಿಸಬೇಕು? ಯಾವ ವಿಧಾನವಾಗಿ ಹೇಳಬೇಕು?’ ಮುಂತಾಗಿ ಯೋಚಿಸಿದನು.

ಕೂಡಲೇ ಯಾವ ಯೋಚನೆಯ ನಿರ್ಧರಕ್ಕೂ ಬಾರದಂತಾಗಿ ಚಿತ್ತ ಭ್ರಮಣೆ ಹೊಂದಿದವನಂತಾದನು.

ಒಂದು ಘಂಟೆಯುವರೆವಿಗೂ ವಿಧವಿಧವಾಗಿ ಯೋಚಿಸಿ ಈ ರೀತಿ ಮಾಡಿದರೆ ತನ್ನ ಮೇಲೆ ಅಪವಾದವು ಬಾರದಿರುವುದಲ್ಲದೆ ಮುಸುಕಿನ ವ್ಯಕ್ತಿಯನ್ನೂ ಹಿಡಿಯ ಬಹುದೆಂದುಕೊಂಡನು.

ಶೇಷಪ್ಪನನ್ನು ಕೊಲೆ ಮಾಡುವಾಗ ತನ್ನ ತಂಗಿಯನ್ನು ಸಹಾಯಕ್ಕೆ ಕರೆದುಕೊಂಡುಹೋಗಿದ್ದುದರಿಂದ ಈ ರಾದ್ಧಾಂತಕ್ಕೆಲ್ಲಾ ಕಾರಣವಾಯಿತೆಂದು ಭಾವಿಸಿ ಈ ಸಾರಿ ತನ್ನ ಮನೋಭಿಪ್ರಾಯವನ್ನು ಯಾರೊಡನೆಯೂ ತಿಳಿಸಲಿಲ್ಲ.

ಪುರುಷೋತ್ತಮನೊಡನೆ ತಿಳಿಸಿದರೆ ಮುಸುಕಿನ ವ್ಯಕ್ತಿಯು ನಿರ್ನಾಮವಾಗುವುನೆಂದು ಬಾಲಕೃಷ್ಣನು ನಿರ್ಧರಪಡಿಸಿಕೊಂಡನು.

ನಾಲ್ಕು ದಿನಗಳು ಕಳೆಯಿತು.

ಈ ಮಧ್ಯೆ ಅವನನ್ನು ಹಲವು ಜನ ಸ್ನೇಹಿತರು ಸಂಧಿಸಿ "ಲೋಕನಾಥನೆಲ್ಲಿ ? ಷಾಪನ್ನು ಏಕೆ ತೆರೆಯುತ್ತಿಲ್ಲ ?" ಎಂದು ಪ್ರಶ್ನಿಸಿದ್ದಕ್ಕೆ ಬಾಲಕೃಷ್ಣನು ಗಾಂಭೀರ್ಯದಿಂದ "ಆತನೆಲ್ಲಿರುವನೋ, ಏನೋ, ನನಗೆ ತಿಳಿಯದು. ನನಗೆ ಹೇಳದೆ ಕೇಳದೆ ಹೊರಟು ಹೋಗಿರುವನು. ಷಾಪನ್ನು ನಡೆಸಿಯೇ ನಾನು ಕಾಲ ತಳ್ಳಬೇಕೆಂಬ ಇಚ್ಛೆಯೇನೂ ನನಗಿಲ್ಲ. ಯಾರಾದರೂ ಕೊಂಡುಕೊಳ್ಳುವವರಿದ್ದರೆ ಮಾರಿಬಿಡುವೆನು." ಎಂದು ಹೇಳುತ್ತಿದ್ದನು.

ಅವರಾರೂ ಅವನ ರಹಸ್ಯವನ್ನು ಅರಿಯದೆ ಹೋದರು.

ಷಾಪನ್ನು ಮಾರುವ ವಿಷಯವು ಹಲವು ಜನ ದಳ್ಳಾಳಿಗಳಿಗೆ ತಿಳಿದು ಅವರು ಗಿರಾಕಿಗಳನ್ನು ಹುಡುಕತೊಡಗಿದರು.

ಐದು ದಿನ ಕಳೆದು ಆರನೆಯ ದಿನ ಆತನ ಹೆಸರಿಗೆ ಮತ್ತೊಂದು ಕವರು ಬಂದಿತು.

ಕವರನ್ನು ನೋಡುತ್ತಲೇ ಅವನ ಎದೆಯೊಡೆದು ನೀರಾಯಿತು.

ಕವರನ್ನು ಬಿಚ್ಚಿ ಒಳಗಡೆಯ ಕಾಗದವನ್ನು ಬಿಡಿಸಿ ನೋಡಲು ಅದರಲ್ಲಿ ಈ ರೀತಿ ಬರೆದಿತ್ತು.

'ಬಾಲಕೃಷ್ಣಾ ! ಈ ರಾತ್ರಿ ನಿಯಮಿತ ವೇಳೆಗೆ ಹತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಬರಬೇಕು. ಮರೆಯ ಬೇಡ. ಅನಾಧರಣೆ ಮಾಡಿದರೆ ಮುಂದಿನ ಸ್ಥಿತಿಗತಿಗಳ ಬಗ್ಗೆ ಪರಿತಾಪ ಪಡಬೇಕಾಗುತ್ತದೆ. ಆದ್ದರಿಂದ ಈಗಲೇ ಎಚ್ಚೆತ್ತುಕೊಳ್ಳುವುದು ಉತ್ತಮ. ನಿಯಮಗಳು ಹಿಂದಿನಂತೆ. ಜ್ಞಾಪಕವಿರಲಿ.'

ಇತಿ ನಿನ್ನ
**'ಚಿರಪರಿಚಿತ.'**

ಕಾಗದವನ್ನು ನಾಲ್ಕಾರು ಸಾರಿ ಓದಿದನು. ಮನಸ್ಸಿಗೆ ಒಂದು ವಿಧದಲ್ಲಿ ಹರ್ಷವುಂಟಾಯಿತು.

ಕೂಡಲೇ ತನ್ನ ಏಕಾಂತ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡು ಕೃತಕ ಪತ್ರವೊಂದನ್ನು ರಚಿಸಿದನು.

ಅದನ್ನು ಹತ್ತಾರು ಸಾರಿ ಓದಿದನು. ಮನಸ್ಸಿಗೆ ಒಂದು ವಿಧದಲ್ಲಿ ಶಾಂತಿಯುಂಟಾದಂತಾಯಿತು.

ಮುಸುಕಿನ ವ್ಯಕ್ತಿಯನ್ನು ಗಲ್ಲಿಗೆ ಏರಿಸಿದರೆ ತನ್ನ ಮನಸ್ಸಿಗೆ ಸಮಾಧಾನ ವಾಗುವುದೆಂದು ಭಾವಿಸಿಕೊಂಡಿದ್ದನು.

ಮುಸುಕಿನ ವ್ಯಕ್ತಿಯನ್ನು ಪುರುಷೋತ್ತಮನು ಹಿಡಿದಾಗ ಆತನು ತನ್ನ ರಹಸ್ಯವನ್ನು ಹೇಳಬಹುದು. ಹಾಗೆ ಹೇಳುವ ಮೊದಲೇ ಅವನನ್ನು ಯಾವ ಉಪಾಯದಿಂದಲಾದರೂ ಪಿಸ್ತೂಲಿನಿಂದ ಹೊಡೆದು ಬಿಡಬೇಕೆಂದು ನಿರ್ಧರ ಮಾಡಿಕೊಂಡನು.

ಹುಸಿನಗುವೊಂದು ಮುಖದಲ್ಲಿ ಕಾಣಿಸಿಕೊಂಡು ಮಾಯವಾಯಿತು.

ಐದು ನಿಮಿಷಗಳನಂತರ ಏನೋ ಒಂದು ವಿಧವಾದ ಭೀತಿಯೂ ಪುನಃ ತಲೆದೋರಿತು.

ಈ ದಿನ ರಾತ್ರಿ ಹಣ ತೆಗೆದುಕೊಂಡು ಹೋಗದೆ ಇದ್ದರೆ ಮುಂದೆ ಏನು ಗಂಡಾಂತರವು ಸಂಭವಿಸುವುದೋ ಎಂದು ಹೆದರಿದನು.

ಆದರೂ ಪುರುಷೋತ್ತಮನಲ್ಲಿಗೆ ಹೋಗಲು ಮನಸ್ಸು ತವಕಗೊಳ್ಳುತ್ತಿತ್ತು.

## ೧೪

ಪತ್ತೇದಾರ ಪುರುಷೋತ್ತಮನು ತನ್ನ ಮನೆಯ ಏಕಾಂತರೂಮಿನ ಕಿರುಮನೆಯಲ್ಲಿ ಕುಳಿತುಕೊಂಡು, ತನ್ನ ಗೆಳೆಯನಾದ ರಾಮನಾಥನೊಡನೆ ವಿಜ್ಞಾನ ವಿಷಯವಾಗಿ ಚರ್ಚೆ ಮಾಡುತ್ತಾ ಕುಳಿತಿರಲು ಹೊರಗಡೆ ಆಗಮನ ಸೂಚಕದ ಘಂಟೆಯು ಬಾರಿಸಿತು.

ಘಂಟೆಯ ಶಬ್ದವನ್ನು ಕೇಳುತ್ತಲೇ ಯಾರೋ ಹೊಸಬರು ತನ್ನನ್ನು ನೋಡಲು ಬಂದಿರುವರೆಂದು ಪುರುಷೋತ್ತಮನು ಭಾವಿಸಿಕೊಂಡನು.

ತನ್ನ ಮುಖವನ್ನು ನೋಡುತ್ತಿದ್ದ ರಾಮನಾಥನೊಡನೆ—

"ರಾಮನಾಥ! ಯಾರೋ ಹೊಸಬರು ನಮ್ಮನ್ನು ನೋಡಲು ಬಂದಿರುವರು. ಅವರನ್ನು ಇಲ್ಲಿಗೆ ಕರೆದುಕೊಂಡು ಬಾ." ಎಂದು ಹೇಳಿದನು.

"ಹೊಸಬರೇ?"

—ಎಂದು ವಿಸ್ಮಿತನಾದ ರಾಮನಾಥನು ಕೇಳಿದನು.

"ಹೌದು."

"ಅದನ್ನು ಹೇಗೆ ಹೇಳುವೆ? ಅವರ ಮುಖವೇನಾದರೂ ನಿನಗೆ ಕಂಡಿತೇ? ಹಾಗೆ ನೋಡಲು ಇಲ್ಲಿ ಸೂಕ್ಷ್ಮದರ್ಶಕವಾದ ಕನ್ನಡಿಯನ್ನೇನಾದರೂ ಇಟ್ಟಿರುವೆಯಾ?"

ಪುರುಷೋತ್ತಮನು ನಸುನಗುತ್ತಾ—

"ಕನ್ನಡಿಯೂ ಇಲ್ಲ! ಏನೂ ಇಲ್ಲ. ಈಗ ಬಂದವರನ್ನು ಮೊದಲು ನೋಡಿಯೂ ಇಲ್ಲ. ಈ ವೇಳೆಗೆ ಬರುವೆನೆಂದು ಬೇರೆ ಯಾವ ವಿಧದಲ್ಲಿಯೇ ಆಗಲಿ, ನನ್ನೊಡನೆ ಅವರು ತಿಳಿಸಿಯೂ ಇರಲಿಲ್ಲ." ಎಂದು ಹೇಳಿದನು.

"ಹಾಗಿದ್ದ ಮೇಲೆ ಹೊಸಬರೆಂದು ಹೇಗೆ ಹೇಳಿದೆ ?"

"ನನ್ನನ್ನು ನೋಡುವುದಕ್ಕೆ ಪರಿಚಯವುಳ್ಳವರಾರು ಬಂದರೂ ಸರಿ! ಹಾಗೇ ಒಳಗೆ ಬರುವರು. ಸಾಮಾನ್ಯವಾಗಿ ಈ ರೀತಿ ಆಗಮನ ಸೂಚಕ ಘಂಟೆಯನ್ನು ಅವರು ಬಾರಿಸುವುದಿಲ್ಲ. ಈಗ ಆ ಶಬ್ದವನ್ನು ಕೇಳಿದುದರಿಂದ ಅವರು ಹೊಸಬರಿರಬೇಕೆಂದು ತಿಳಿದೆನು."

ಪುರುಷೋತ್ತಮನ ಮಾತಿಗೆ ಬೆರಗಾದ ರಾಮನಾಥನು ಮುಂದೆ ಮಾತ ನಾಡದೆ, ಆತನ ನೈಪುಣ್ಯತೆಯನ್ನು ನೋಡಿ ತಿಳಿಯುವ ಉದ್ದೇಶವುಳ್ಳವನಾಗಿ ಕೂಡಲೆ ಎದ್ದು ಹೊರಗೆ ಬಂದನು.

ಹೊರಗೆ ಬಂದು ನೋಡಿದರೆ ಪುರುಷೋತ್ತಮನು ತಿಳಿಸಿದಂತೆ ಹೊಸಬನೇ ಆಗಿದ್ದನು.

ವಿಸ್ಮಿತನಾದ ರಾಮನಾಥನು ಆತನನ್ನು ಪುರುಷೋತ್ತಮನಿದ್ದ ಕಿರುಮನೆಗೆ ಕರೆದುಕೊಂಡು ಹೋದನು.

ಬಾಲಕೃಷ್ಣನು ತನ್ನ ಪದ್ಧತಿಗನುಸಾರವಾಗಿ ಪುರುಷೋತ್ತಮನಿಗೆ ವಂದನೆ ಯನ್ನು ಮಾಡಿ ಅಲ್ಲಿಯೇ ಇದ್ದ ಚಿಕ್ಕ ಸ್ಟೂಲಿನ ಮೇಲೆ ಕುಳಿತನು.

ಪುರುಷೋತ್ತಮನು ಆತನ ಮುಖವನ್ನು ನೋಡಿ—

"ನೀವು ಡಾಕ್ಟರ್ ವೃತ್ತಿಯಲ್ಲಿರುವಿರಾ ?" ಎಂದು ಕೇಳಿದನು.

ಬಾಲಕೃಷ್ಣನು ಸೋಜಿಗನಾಗಿ—

"ನೀವು ಹೇಳುವುದು, ಸಹಜ. ಆದರೇ! ನನ್ನನ್ನು ನೀವು ಮೊದಲು ಎಲ್ಲಿಯಾದರೂ ನೋಡಿದ್ದಿರಾ ?" ಎಂದು ಕೇಳಿದನು.

"ಇಲ್ಲಾ! ಇದೇ ಮೊದಲು ನೋಡುತ್ತಿರುವುದು."

"ಹಾಗಾದರೇ! ನನ್ನ ವೃತ್ತಿಯನ್ನು ಹೇಗೆ ತಿಳಿದಿರಿ ?"

"ನಿಮ್ಮ ವೇಷಭೂಷಣಗಳನ್ನು ನೋಡಿ ಆ ವೃತ್ತಿಯಲ್ಲಿ ಇರಬೇಕೆಂದು ಊಹಿಸಿದೆನು."

"ಬೇರೆ ಯಾರೂ ಈ ರೀತಿ ಉಡುಪುಗಳನ್ನು ಧರಿಸುವುದಿಲ್ಲವೇ ?"

"ಅನೇಕರು ಧರಿಸುವರಾದರೂ ಅವರ ರೀತಿ, ನೀತಿಗಳು ಬೇರೊಂದು ವಿಧವಾಗಿರುತ್ತದೆ. ನೀವು ಡಾಕ್ಟರಾಗಿದ್ದರೂ ಈಗ ಆ ವೃತ್ತಿಯಲ್ಲಿಲ್ಲವೆಂತಲೂ,

ನಿಮ್ಮ ಪತ್ನಿಯು ನಿಮ್ಮ ವಿಷಯದಲ್ಲಿ ಬೇಸರದಿಂದಿರುವರೆಂದೂ, ನಿಮ್ಮ ಸೇವಕನೂ ಸಹ ಸೋಮಾರಿಯೆಂದೂ ಹೇಳಬೇಕಾಗಿದೆ."

"ಪತ್ತೇದಾರರೇ ! ನಿಮ್ಮ ಮಾತುಗಳು ಒಂದಕ್ಕಿಂತಲೂ ಒಂದು ಅತಿಶಯ ವಾಗಿದೆ. ನೀವು ಈಗ ತಿಳಿಸಿದ ವಿಷಯವೆಲ್ಲವೂ ನಿಜವೆಂದು ಒಪ್ಪಿಕೊಳ್ಳುವೆನು. ಆದರೇ ! ಈ ವಿಷಯವೆಲ್ಲಾ ನನ್ನ ಹಣೆಯಲ್ಲಿ ಬರೆದಿರುವುದೇ ?"

"ಹಣೆಯಮೇಲೆ ಬರೆದುದನ್ನು ನೋಡಿ ಹೇಳಿದರೆ ಸೋಜಿಗವೆನಿಸಿಕೊಳ್ಳು ವುದೇ ? ಮೇಲಾಗಿ ಯಾರ ಹಣೆಯ ಮೇಲಾದರೂ ಹಾಗೆ ಬರೆದಿರುವುದನ್ನು ನೀವು ನೋಡಿರುವಿರಾ ?"

"ಹಾಗಾದರೇ ! ನನ್ನನ್ನು ನೋಡಿ ನನ್ನ ಮನೆಗೆ ಸಂಬಂಧಿಸಿದ ವಿಷಯ ವನ್ನೆಲ್ಲಾ ಹೇಗೆ ತಿಳಿದು ಹೇಳಿದಿರಿ ?"

"ಈ ಕಿರುಮನೆಗೆ ನಿಮ್ಮಂತಹ ಡಾಕ್ಟರ್‌ಗಳು ಪ್ರವೇಶಿಸಿದರೆ ಏನಾದ ರೊಂದು ಬಗೆಯ ಔಷಧದ ವಾಸನೆಯಿರುತ್ತದೆ. ಆ ವಾಸನೆಯಾವುದೂ ನಿಮ್ಮಲ್ಲಿ ಕಂಡುಬರಲಿಲ್ಲ. ಈ ವೇಳೆಯಲ್ಲಿ ನಿಮ್ಮಂತಹ ವೈದ್ಯರು ತಮ್ಮ ಮನೆಯಿಂದ ಬರುವುದಿಲ್ಲ. ತಮ್ಮ ಷಾಪಿನಿಂದಲೋ, ಅಥವಾ ಯಾವುದಾದರೂ ರೋಗವುಳ್ಳವರ ಮನೆಗೆ ಹೋಗಿಯೋ ಬರುವರು. ಆಗ ಅವರ ಮೈಯ್ಯಲ್ಲಿ ಔಷಧದ ವಾಸನೆಯಿರುವುದನ್ನು ನೋಡಿರುವೆನು. ನೀವು ಧರಿಸಿರುವ ಈ ಕೋಟಿನ ಮೇಲೆ ವಿಪರೀತ ದೂಳಿದೆ. ಡ್ಯೂಟಿಯ ಮೇಲಿರುವ ವೈದ್ಯರಾರೂ ಇಂತಹ ಕೋಟನ್ನು ಹಾಕಿಕೊಳ್ಳುವುದಿಲ್ಲ. ಆ ಕಾರಣದಿಂದ ನೀವು ವೈದ್ಯಕೀಯ ವೃತ್ತಿ ಯನ್ನು ಬಿಟ್ಟಿರುವಿರೆಂದು ಊಹಿಸಿಕೊಂಡೆನು. ಈ ಕೋಟಿನ ಮೇಲೆ ಇಷ್ಟು ಧೂಳಿದ್ದರೂ ಇದನ್ನು ಸ್ವಚ್ಛ ಮಾಡದೆ ಇರುವುದನ್ನು ನೋಡಿ ನಿಮ್ಮ ಪತ್ನಿಯು ನಿಮ್ಮ ವಿಷಯದಲ್ಲಿ ಬೇಸರ ಹೊಂದಿರುವರೆಂದೂ ಊಹಿಸಿಕೊಂಡೆನು. ನೆನ್ನೆಯ ದಿನ ಬೆಳಿಗ್ಗೆ ಮಳೆ ಬಂದುದು ನಿಮಗೆ ತಿಳಿದೇಇದೆ. ನೀವು ಮಳೆಯಲ್ಲಿ ಓಡಾಡಿರು ವಿರಿ. ಈಗ ಕಾಲಿನಲ್ಲಿ ಧರಿಸಿರುವ ಭೂಡ್ಸನ್ನೇ ಆಗಲೂ ಹಾಕಿಕೊಂಡಿದ್ದಿರಿ. ಆಗ ಮಳೆಯಲ್ಲಿ ನೆನೆದು ಈ ಭೂಡ್ಸು ಕೆಸರಾಗಿದೆ. ಒಂದು ಘಂಟೆ ಮಾತ್ರ ಮಳೆ ಬಂದು ಮತ್ತೆ ಬಿಸಿಲು ಬಿದ್ದಿತು. ಮತ್ತೆ ಮಳೆಯೇ ಇಲ್ಲ. ಆದರೂ ಈ ಭೂಡ್ಸನ್ನು ಕ್ಲೀನ್ ಮಾಡದೆ ಇರುವುದನ್ನು ನೋಡಿ ನಿಮ್ಮ ಸೇವಕನೂ ಸೋಮಾರಿ ಯಾಗಿರುವನೆಂದು ಹೇಳಬೇಕಾಯಿತು. ನನ್ನ ಊಹೆಯು ನಿಜವಷ್ಟೇ ?"

"ನೂರಕ್ಕೆ ನೂರು ನಿಜ."

ಬಾಲಕೃಷ್ಣನ ಮನದಲ್ಲಿ ಭೀತಿಯುತ್ಪನ್ನವಾಯಿತು. 'ನನ್ನನ್ನು ನೋಡಿಯೇ ಇಷ್ಟು ವಿಷಯಗಳನ್ನು ಹೇಳಿದವರು, ನಾನು ಬಂದ ಕಾರಣವನ್ನು ಹೇಳಿದರೆ, ಇನ್ನೇನು ಹೇಳುವರೋ, ಏನೋ' ಎಂದು ಯೋಚಿಸಿ ಭಯಚಕಿತನಾದನು.

ತಾನು ಏಕಾದರೂ ಇಲ್ಲಿಗೆ ಬಂದೆನೋ ಎನ್ನಿಸಿತು.

ಪುರುಷೋತ್ತಮನು ಪುನಃ—

"ಈಚೆಗೆ ನೀವು ವಿಷೇಷ ವ್ಯಸನದಲ್ಲಿ ಮುಳುಗಿರುವಂತೆ ತೋರುತ್ತದೆ." ಎಂದು ಹೇಳಿದನು.

"ಅದನ್ನು ಹೇಗೆ ಹೇಳುವಿರಿ ?"

"ನೀವು ಶ್ರೀಮಂತರೆಂದು ನಿಮ್ಮ ಮುಖ, ಮತ್ತು ವೇಷಭೂಷಣಗಳು ಸೂಚಿಸುತ್ತವೆಯಾದರೂ ನಿಮ್ಮ ಕಣ್ಣು ಕೆಂಪಾಗಿರುವುದು. ಅದನ್ನು ನೋಡಿ ರಾತ್ರಿಯೆಲ್ಲಾ ನಿದ್ದೆಯಿಲ್ಲದೆ ಯೋಚಿಸುತ್ತಲೇ ಇರುವಿರೆಂದು ತಿಳಿದೆನಲ್ಲದೆ ಹಗಲು ವೇಳೆಯಲ್ಲಿಯೂ ಸಹ ಅದೇ ಯೋಚನೆಯಲ್ಲಿ ಮುಳುಗಿರುವಿರೆಂದು ಹೇಳುವೆನು. ತಿಗಣೆಗಳ ಕಾಟದಿಂದ ನಿದ್ದೆ ಬರುವುದಿಲ್ಲವೆಂದು ಹೇಳಬಹುದು. ಆದರೇ! ನಿಮ್ಮಂತಹವರ ಬಂಗಲೆಗಳಲ್ಲಿ ತಿಗಣೆಗಳಿರುವುದೇ ಇಲ್ಲ. ಮೇಲಾಗಿ ನೀವು ಕೆದರಿದ ತಲೆಯುಳ್ಳವರಾಗಿರುವಿರಿ. ಬಹುಶಃ ತಲೆಯು ಎಣ್ಣೆ, ಬಾಚಣಿಗೆಯನ್ನು ನೋಡಿ ಏಳೆಂಟು ದಿನಗಳಾಗಿರಬಹುದು. ಈ ನಿಮ್ಮ ಸ್ಥಿತಿಯನ್ನು ನೋಡಿ ಏನೋ ಒಂದು ವಿಧವಾದ ಗುಪ್ತಚಿಂತೆಯು ಆವರಿಸಿಕೊಂಡಿದೆಯೆಂದು ನಿರ್ಧರ ವಾಗಿ ಹೇಳಬಹುದಾಗಿದೆ."

"ಪತ್ತೇದಾರರೇ! ನಿಮ್ಮ ಅಮೋಘ ನೈಪುಣ್ಯತೆಯನ್ನು ಎಷ್ಟು ಹೊಗಳಿ ದರೂ ಅಲ್ಪವೇ. ನಾನು ತಲೆಯನ್ನು ಬಾಚಿ ಏಳೆಂಟು ದಿನಗಳಾಗಿರುವುದು ಸಹಜ. ಅದನ್ನು ಹೇಗೆ ಊಹಿಸಿದಿರಿ ?"

"ನೀವು ವಾಸನೆ ಎಣ್ಣೆಯನ್ನು ಉಪಯೋಗಿಸುವಿರೆಂದು ನಿಮ್ಮ ತಲೆಗೂದ ಲನ್ನು ನೋಡಿಯೇ ತಿಳಿದೆನು. ಸಾಮಾನ್ಯವಾಗಿ ವಾಸನಾತೈಲವು ಮೂರು ನಾಲ್ಕು ದಿನಗಳವರೆವಿಗೆ ತನ್ನ ಸುವಾಸನೆಯನ್ನೀಯುತ್ತದೆ. ಅನಂತರ ವಾಸನೆಯಿರುವುದಿಲ್ಲ. ನಿಮ್ಮಂತಹ ಶ್ರೀಮಂತರು ಅತ್ಯುತ್ತಮವಾದ ಸುವಾಸನೆಯ ತೈಲವನ್ನು ಉಪ ಯೋಗಿಸುವರು. ಅದರ ವಾಸನೆಯು ಆರೇಳು ದಿನಗಳವರೆವಿಗೆ ಇರುತ್ತದೆ.

ನಿಮ್ಮ ತಲೆಗೂದಲಿನಿಂದ ಎಣ್ಣೆ ವಾಸನೆಯು ಬಾರದೆ ಇದ್ದುದರಿಂದ ಆ ರೀತಿ ಭಾವಿಸಿಕೊಂಡೆನು."

"ನಿಮ್ಮ ಭಾವನೆಯಲ್ಲಿ ಎಳ್ಳುಕಾಳಿನಷ್ಟೂ ತಪ್ಪಿಲ್ಲ, ಅವೆಲ್ಲವೂ ನಿಜ."

"ನನ್ನಲ್ಲಿಗೆ ನೀವು ಬಂದ ಉದ್ದೇಶವೇನು ?"

"ನಾನೊಂದು ದೊಡ್ಡ ಪೇಚಾಟದಲ್ಲಿ ಸಿಕ್ಕಿರುವೆನು."

"ಆ ವಿಷಯವನ್ನು ನಿಮ್ಮ ಮುಖವೇ ಸೂಚಿಸುತ್ತದೆ. ಏನು ವಿಷಯ ವೆಂಬುದನ್ನು ಹೇಳಿ."

ಬಾಲಕೃಷ್ಣನಿಗೆ ಹೇಳಲು ಬಾಯಿ ಬರಲಿಲ್ಲ.

ಪುರುಷೋತ್ತಮನು ಗಾಂಭೀರ್ಯದಿಂದ—

"ನೀವು ವಿಷಯವನ್ನು ತಿಳಿಸಲು ಅನುಮಾನ ಪಡುತ್ತಿರುವಿರಿ. ನೀವು ಯಾವುದಕ್ಕೂ ಸಂದೇಹಗೊಳ್ಳಬೇಕಾದ ಕಾರಣವಿಲ್ಲ. ನೀವು ಹೇಳದೆ ಹಿಂದೆ, ಮುಂದೆ ನೋಡುವುದರ ಬಗ್ಗೆ ಹೇಳಬೇಕೆಂದರೆ, ನೀವು ಕುರಿತು ಬಂದಿರುವ ಕಾರ್ಯದಲ್ಲಿ ನಿಮ್ಮದೂ ಒಂದು ತಪ್ಪು ಕೆಲಸವಿದೆಯೆಂದು ಭಾವನೆಯಾಗುತ್ತದೆ." ಎಂದು ಹೇಳಿದನು.

ಈ ಸಮಯದಲ್ಲಿ ಕಂಗೆಟ್ಟರೆ ಕಾರ್ಯವು ಕೆಡುವುದೆಂಬ ಭಾವನೆಯು ಬಾಲಕೃಷ್ಣನ ಮನಕ್ಕೆ ಹೊಳೆಯಿತು.

"ಪತ್ತೇದಾರರೇ ! ನನ್ನಲ್ಲಿ ಯಾವ ತಪ್ಪೂ ಇಲ್ಲ."

—ಎಂದು ಬಾಲಕೃಷ್ಣನು ನುಡಿದನು.

"ಹಾಗಿದ್ದಮೇಲೇ ಸಂಕೋಚಪಡುವಿರೇಕೆ ? ನೀವು ಏನು ಪೇಚಾಟದಲ್ಲಿ ಸಿಕ್ಕಿಕೊಂಡಿರುವಿರಿ ? ನಿಮ್ಮನ್ನು ಅದರಲ್ಲಿ ಸಿಕ್ಕಿಸಿದವರಾರು ? ಎಂಬುದನ್ನು ವಿಶದವಾಗಿ ಹೇಳಿ ?"

"ಅದನ್ನು ಹೇಳಬೇಕೆಂದೇ ನಿಮ್ಮಲ್ಲಿಗೆ ಬಂದಿರುವಾಗ ಇನ್ನು ಹೇಳದೆ ಇರುತ್ತೇನೆಯೇ ?"

"ಹಾಗಿದ್ದಮೇಲೆ ತಡವೇಕೆ ? ಇನ್ನು ಈ ಕಿರುಮನೆಯಲ್ಲಿ ಕುಳಿತು ಕೊಳ್ಳುವುದು ಬೇಡ ಹೊರಗಡೆಯ ಹಾಲಿಗೆ ಹೋಗೋಣ. ನಡೆಯಿರಿ."

"ಹೌದು ! ಬನ್ನಿ. ಇಲ್ಲಿ ಸೆಕೆಯಾಗುತ್ತದೆ."

ರಾಮನಾಥನು ಮೌನವಾಗಿಯೇ ಕುಳಿತುಕೊಂಡು ಪುರುಷೋತ್ತಮನ ಮಾತುಗಳನ್ನು ಆಶಕ್ತಿಯಿಂದ ಕೇಳುತ್ತಿದ್ದನು.

ಯಾವ ವಿಧದಲ್ಲಿ ಹೇಳಿದರೂ ತನಗೆ ಗ್ರಹಚಾರವು ಕಾದು ಕುಳಿತಿರುವು ದೆಂದೇ ಬಾಲಕೃಷ್ಣನ ಆತ್ಮಕ್ಕೆ ಮನವರಿಕೆಯಾಯಿತು. ಏನು ವಿಷಯವಾಗಿ ಯೋಚಿಸಬೇಕೆಂದರೂ ಕಾಲಾವಕಾಶವಿಲ್ಲದಂತಾಯಿತು. ಒಟ್ಟಿನಲ್ಲಿ ತಾನು ಇಲ್ಲಿಗೆ ಬಂದದ್ದೆ ತಪ್ಪಾಯಿತೆಂದು ತನ್ನನ್ನು ತಾನೇ ನಿಂದಿಸಿಕೊಂಡನು.

ಬಾಲಕೃಷ್ಣನ ವಿಷಯವಾಗಿ ಪುರುಷೋತ್ತಮನಿಗೆ ಏನೋ ಒಂದು ವಿಧದಲ್ಲಿ ಸಂದೇಹವುಂಟಾದರೂ ಅದನ್ನು ಆ ವೇಳೆಯಲ್ಲಿ ತೋರ್ಪಡಿಸಿಕೊಳ್ಳದೆ ಏನೂ ಅರಿಯದವನಂತೆಯೇ ವರ್ತಿಸಿದನು.

ಹೊರಗಡೆಯ ಹಾಲಿಗೆ ಬರಲು ಪುರುಷೋತ್ತಮನು ಎದ್ದು ನಿಂತನು. ಅವನು ಏಳುತ್ತಲೇ ರಾಮನಾಥ, ಬಾಲಕೃಷ್ಣರಿಬ್ಬರೂ ಎದ್ದರು.

# ೧೫

ಮೂವರೂ ನಡುಮನೆಯ ಹಾಲಿನಲ್ಲಿದ್ದ ಸೋಫಾಗಳ ಮೇಲೆ ಬಂದು ಕುಳಿತುಕೊಂಡರು.

ಬಳಿಕ ಪುರುಷೋತ್ತಮನು ವಿಷಯವೇನೆಂದು ಕೇಳಲು ಬಾಲಕೃಷ್ಣನು ತನ್ನ ಜೇಬಿನಲ್ಲಿದ್ದ ಕಾಗದವನ್ನು ತೆಗೆದು ಪುರುಷೋತ್ತಮನ ಕೈಗಿತ್ತನು.

ಆ ಕಾಗದವು ಮುಸುಕಿನ ವ್ಯಕ್ತಿಯಿಂದ ಬಂದ ಕೊನೆಯ ಕಾಗದವಾಗಿತ್ತು.

ಪುರುಷೋತ್ತಮನು ಆ ಕಾಗದವನ್ನು ಓದಿನೋಡಿ ವಿಸ್ಮಿತನಾದನು. ಆತನೊಬ್ಬ ಗುರುತುಕಂಡ ಕಳ್ಳನಿರಬಹುದೆಂದುಕೊಂಡನು.

ಕಾಗದವನ್ನು ರಾಮನಾಥನ ಕೈಗಿತ್ತು—

“ಇದಕ್ಕೆ ಹಿಂದೆ ಬಂದಿರುವ ಕಾಗದವನ್ನು ಕೊಡಿ.” ಎಂದು ಬಾಲಕೃಷ್ಣನನ್ನು ಕೇಳಿದನು.

ಸೋಜಿಗದಿಂದಕೂಡಿದ ಬಾಲಕೃಷ್ಣನು “ಹಿಂದೆ ಕಾಗದ ಬಂದಿದೆಯೆಂದು ಹೇಗೆ ಹೇಳುವಿರಿ ?” ಎಂದು ಕೇಳಿದನು

“ಈ ಕಾಗದದ ಕೊನೆಯಲ್ಲಿ ‘ನಿಯಮಗಳು ಹಿಂದಿನಂತೆ’ ಎಂದು ಬರೆದಿದೆ. ಹೀಗೆ ಬರೆದಿರಬೇಕಾದರೆ ಹಿಂದೆಯೂ ಕಾಗದಗಳು ಬಂದಿರುವುದೆಂಬ ಅಭಿಪ್ರಾಯವನ್ನು ಸೂಚಿಸುತ್ತದೆ.”

ಬಾಲಕೃಷ್ಣನು ಪುರುಷೋತ್ತಮನ ಪ್ರತಿಯೊಂದು ಮಾತಿಗೂ ತಲೆದೂಗುತ್ತಿದ್ದನು.

ಇನ್ನು ತನ್ನ ಆಟವೇನೂ ಇವರ ಬಳಿಯಲ್ಲಿ ನಡೆಯಲಾರದೆಂದು ಆತನ ಮನಕ್ಕೆ ಭೋದೆಯಾಯಿತು.

ಬಳಿಕ ತಾನು ರಚಿಸಿದ್ದ ಕೃತಕ ಪತ್ರವನ್ನು ತೆಗೆದು ಪುರುಷೋತ್ತಮನ ಕೈಗೆ ಕೊಟ್ಟನು.

ಕಾಗದ ಕೊಡುವ ವೇಳೆಯಲ್ಲಿ, ಚಿಕ್ಕದೇವರಾಜ ಒಡೆಯರವರಿಗೆ ಅರ್ಚಕನು ದೇವರ ಪ್ರಸಾದವೆಂದು ವಿಷಕೊಡುವ ವೇಳೆಯಲ್ಲಿ ಆತನ ಕೈಗಳು ನಡುಗಿದಂತೆ, ಈ ವೇಳೆಯಲ್ಲಿ ಬಾಲಕೃಷ್ಣನ ಕೈಗಳು ನಡುಗುತ್ತಿದ್ದುವು.

ಸೂಕ್ಷ್ಮಗ್ರಾಹಿಯಾದ ಪುರುಷೋತ್ತಮನು ಅದನ್ನು ಗ್ರಹಿಸಿ ಮತ್ತೆ ಕಾಗದವನ್ನು ತೆಗೆದುಕೊಂಡು ನೋಡಲು ಅದರಲ್ಲಿ ಈ ರೀತಿ ಬರೆದಿತ್ತು.

'ಬಾಲಕೃಷ್ಣಾ ! ನೀನು ಈ ನಗರದ ಶ್ರೀಮಂತರಲ್ಲಿ ಒಬ್ಬನಾಗಿರುವೆ. ನಿನ್ನ ಕಣ್ಣೆದುರಿನಲ್ಲಿ ಸಾವಿರಾರು ಜನ ದೀನ, ದರಿದ್ರರು ಕಷ್ಟಪಡುತ್ತಿರುವುದನ್ನು ನೋಡಿರುವೆಯಾದರೂ ಅವರಿಗೆ ಯಾವ ವಿಧವಾದ ಸಹಾಯವನ್ನೂ ನೀನು ಮಾಡುತ್ತಿಲ್ಲ. ಆದ್ದರಿಂದ ನಿನ್ನ ಹಣವನ್ನು ಅವರೆಲ್ಲರಿಗೂ ಹಂಚಬೇಕೆಂದು ನಾನು ತೀರ್ಮಾನಮಾಡಿಕೊಂಡಿರುವೆನು. ಮುಂದೆ ಯಾವ ವೇಳೆಯಲ್ಲಿ ಹಣ ಬೇಕು, ಎಷ್ಟು ಬೇಕೆಂಬುದನ್ನು ತಿಳಿಸುವೆನು. ಆಗ ನೀನು ರೂಪಾಯಿಗಳನ್ನು ತೆಗೆದುಕೊಂಡು ಮಧ್ಯ ರಾತ್ರಿ ಹನ್ನೆರಡು ಘಂಟೆಯ ವೇಳೆಯಲ್ಲಿ, ಕಾರಿನಲ್ಲಿ ನೀನೊಬ್ಬನೇ ಹೊರಟು ಜೋಗೀ ಕಣಿವೆಯ ಸಮೀಪದಲ್ಲಿರುವ ಐದನೆಯ ಮೈಲಿಕಲ್ಲಿನ ಬಳಿಯಲ್ಲಿ ಕಾರನ್ನು ನಿಲ್ಲಿಸಿ, ಬಳಿಕ ರೂಪಾಯಿಗಳನ್ನು ಹೊರಗಡೆಯ ಜೇಬಿನಲ್ಲಿಟ್ಟುಕೊಂಡು, ಎರಡು ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ರಸ್ತೆಯ ಎಡಭಾಗದಲ್ಲಿರುವ ಕಾಳಿಕಾ ದೇವಾಲಯದ ಕಡೆ ಬರಬೇಕು. ಹಾಗೆ ಬರುವಾಗ ಕೆಂಪು ದೀಪವು ಕಾಣಿಸಿಕೊಳ್ಳುವುದು. ನೀನು ಆಗ ನಿಂತಲ್ಲಿಯೇ ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ನಿಲ್ಲಬೇಕು. ನಾನು ದೀಪವನ್ನು ಆರಿಸಿ ನಿನ್ನ ಸಮೀಪಕ್ಕೆ ಬಂದು ಕತ್ತಲಿನಲ್ಲಿಯೇ ನಿನ್ನ ಜೇಬಿನಲ್ಲಿರುವ ಹಣವನ್ನು ತೆಗೆದುಕೊಳ್ಳುವೆನು. ಆಗ ನೀನು ಚಲಿಸದೇ ಹಾಗೇ ನಿಂತಿರಬೇಕು. ಮಿಸುಕಾಡಿದರೆ ನನ್ನ ಪಿಸ್ತೂಲಿಗೆ ಬಲಿಯಾಗುವೆ. ಎಚ್ಚರಿಕೆ.'

'ನಾನು ಹಣ ತೆಗೆದುಕೊಂಡು ಹಿಂದಿರುಗಿ ಕೆಂಪು ದೀಪವು ತೋರಿಸಿದಲ್ಲಿಗೆ ಹೋಗಿ ಹಸುರು ದೀಪವನ್ನು ತೋರಿಸುವೆನು. ಆಗ ನೀನು ಹಾಗೇ ಕಾರಿನ ಬಳಿಗೆ ಹಿಂದಿರುಗಬೇಕು.'

'ನೀನು ಪಿಸ್ತೂಲು, ಆಯುಧ, ಮುಂತಾದ ಅಪಾಯಕರವಾದ ವಸ್ತುಗಳನ್ನು ತರಬಾರದು. ಮತ್ತು ನಿನ್ನ ಜೊತೆಯಲ್ಲಿ ಬೇರೆ ಯಾರನ್ನೂ ಕರೆದುಕೊಂಡು ಬರಬಾರದು. ಇದಕ್ಕೆ ವ್ಯತಿರಿಕ್ತವಾಗಿ ನಡೆದರೆ ನಿನ್ನ ಆಯುಸ್ಸು ಅಂದಿಗೆ ಮುಗಿದು ಹೋಯಿತೆಂದು ತಿಳಿದುಕೊ. ಈ ವಿಷಯವನ್ನು ಬೇರೆ ಯಾರಲ್ಲಿಯೂ ತಿಳಿಸಬಾರದು. ನೀನು ಹಣ ತಂದುಕೊಡದೆ ಹೋದರೆ ನಿನ್ನ ಮರ್ಯಾದೆ ಮತ್ತು ಮಾನಗೌರವಗಳು ಮತ್ತು ಮುಂದಿನ ಅವಸ್ಥೆಯೇನಾಗುವುದೆಂದು ಈಗ ಹೇಳಿ ಫಲವಿಲ್ಲ.'

ಇತಿ ನಿನ್ನ

**'ಚಿರಪರಿಚಿತ.'**

ಕಾಗದವನ್ನು ಓದಿ ಪುರುಷೋತ್ತಮನು ಸೋಜಿಗಗೊಂಡನು. ಈ ಕಾಗದವನ್ನು ಬರೆದಾತನು ಈತನಿಗೆ ಪರಿಚಿತನೆಂದೂ, ಮತ್ತು ದೊಡ್ಡ ಮನುಷ್ಯರ ಜೊತೆಯಲ್ಲಿಯೇ ಓಡಾಡಿಕೊಂಡಿರುವನೆಂದೂ, ಹಣವನ್ನು ತಾನೇ ಅಪಹರಿಸಲು ಈ ರೀತಿ ಬರೆದಿರುವನೆಂದೂ, ಆತನು ಏನೋ ದುರುದ್ದೇಶವಿಟ್ಟುಕೊಂಡಿರುವನೆಂದೂ ಊಹಿಸಿಕೊಂಡನು.

ತನ್ನ ಮನೋಭಿಪ್ರಾಯದ ಊಹೆಯನ್ನು ಆಗ ಬಾಯಿಬಿಟ್ಟು ಹೇಳಲಿಲ್ಲ.

ಬಾಲಕೃಷ್ಣನು ಪುರುಷೋತ್ತಮನ ಮುಖವನ್ನೇ ನೋಡುತ್ತಿದ್ದನು. ಆತನು ಏನು ಹೇಳುವನೆಂಬುದನ್ನು ಕೇಳಲು ಕುತೂಹಲವುಳ್ಳವನಾಗಿದ್ದನು.

ಕಾಗದವನ್ನು ಓದಿದ ಪುರುಷೋತ್ತಮನು ಆ ಕಾಗದವನ್ನು ರಾಮನಾಥನ ಕೈಗೆ ಕೊಟ್ಟನು.

ಪುರುಷೋತ್ತಮನ ಮನದಲ್ಲಿ ಹತ್ತಾರು ಬಗೆಯ ಯೋಚನೆಗಳುದ್ಭವಿಸಿ, ಒಂದೊಂದು ಯೋಚನೆಯೂ ಅನೇಕವಾಗಿ ಕವಲೊಡೆದು ಊಹಾಪ್ರಪಂಚದ ಕಡೆಗೋಡಿತು.

ಬಳಿಕ ಬಾಲಕೃಷ್ಣನನ್ನು ಕುರಿತು—

"ಈ ಎರಡು ಕಾಗದಗಳ ವಿನಃ ಬೇರೆ ಕಾಗದಗಳು ಬಂದಿವೆಯೇ?" ಎಂದು ಕೇಳಿದನು.

ಬಾಲಕೃಷ್ಣನು ಉಗುಳು ನುಂಗುತ್ತಾ—

"ಇಲ್ಲಾ ! ಇವೆರಡೇ ಕಾಗದಗಳು." ಎಂದು ಹೇಳಿದನು.

"ನೀವು ಈ ನಗರ ನಿವಾಸಿಗಳೇ ?"

"ಅಲ್ಲಾ ! ರಾಜನಗರವು ನನ್ನ ಸ್ವಂತ ನಗರ."

"ಈ ನಗರಕ್ಕೆ ಏಕೆ ಬಂದಿರಿ ?"

"ನನ್ನ ಅತ್ತೇ, ಮಾವಂದಿರು ಈ ನಗರದಲ್ಲಿರುವುದರಿಂದ ಅವರು ನನ್ನನ್ನು ಇಲ್ಲಿಯೇ ತಮ್ಮ ಕಣ್ಣೆದುರಿಗೆ ಇರುವಂತೆ ಹೇಳಿದುದರಿಂದ ಇಲ್ಲಿಗೆ ಬಂದು ನೆಲೆಸಿದೆನು."

"ಹಾಗೆ ಹೇಳುವ ಉದ್ದೇಶವೇನು ?"

"ಅವರಿಗೆ ಇರುವವಳು ಒಬ್ಬಳೇ ಮಗಳಾದ್ದರಿಂದ ಅಳಿಯು, ಮಗಳಿಬ್ಬರೂ ತಮ್ಮ ಎದುರಿಗೇ ಇರಲೆಂಬ ಅಭಿಪ್ರಾಯದಿಂದ ಹಾಗೇ ಹೇಳಿದರು."

"ಇಲ್ಲಿಗೆ ಬಂದು ಎಷ್ಟು ದಿನಗಳಾಯಿತು ?"

"ಕೇವಲ ಕೆಲವು ತಿಂಗಳಾಯಿತು. ಅಷ್ಟೇ."

"ನಿಮ್ಮ ಅತ್ತೇಮಾವಂದಿರಾರು ?"

"ನಮ್ಮ ಮಾವನವರು ದೇವರಾಜಯ್ಯ."

"ಅವರಿರುವುದೆಲ್ಲಿ ?"

"ಧರ್ಮರತ್ನಾಕರ ಧರ್ಮಪ್ಪನವರ ಬೀದಿಯಲ್ಲಿ."

"ಅವರೇನು ಕೆಲಸ ಮಾಡಿಕೊಂಡಿರುವರು."

"ಜವಾಹಿರಿ ಅಂಗಡಿಯಿಟ್ಟುಕೊಂಡಿರುವರು."

"ಎಲ್ಲಿ."

"ಲೋಕಸೇವಾನಿರತ ಲೋಕಪ್ಪನವರ ಬೀದಿಯಲ್ಲಿ."

"ಈ ನಗರದಲ್ಲಿ ಬೇರೆ ನಿಮಗೆ ಬಂಧುಗಳಾರಿರುವರು ?"

ತನ್ನ ತಂಗಿ ಭಾವಮೈದುನರಿರುವ ವಿಷಯವನ್ನು ಬಾಲಕೃಷ್ಣನು ಹೇಳಿದನಲ್ಲದೆ, ಜಗನ್ನಾಥನ ವೃತ್ತಿಯನ್ನೂ ಹೇಳಿದನು.

"ಅವರು ಮೊದಲಿನಿಂದಲೂ ಇಲ್ಲಿಯೇ ಇದ್ದವರೇ ?"

"ಇಲ್ಲಾ ! ರಾಜನಗರದಲ್ಲಿಯೇ ಇದ್ದರು. ನಾನು ಇಲ್ಲಿಗೆ ಬರುವಾಗ ಅವರನ್ನೂ ನಮ್ಮ ಜೊತೆಯಲ್ಲಿಯೇ ಕರೆದುಕೊಂಡು ಬಂದೆವು."

"ಏಕೆ ?"

"ನನಗೆ ಇರುವವಳು ಒಬ್ಬಳೇ ತಂಗಿಯಾದ್ದರಿಂದ ಅವಳೂ ನನ್ನ ಕಣ್ಣೆದುರಿನಲ್ಲಿಯೇ ಇರಲೆಂಬ ಅಭಿಪ್ರಾಯದಿಂದ."

"ಬೇರೆ ಇನ್ನ್ಯಾರಿರುವರು ?"

"ಯಾರೂ ಇಲ್ಲ."

"ರಾಜನಗರದಲ್ಲಿ ಬಂಧುಗಳಿದ್ದರೇ ?"

"ಇದ್ದರು."

"ನಿಮಗೆ ಆಗದವರಾರಾದರೂ ಅವರಲ್ಲಿರುವರೇ ?"

"ಅಂತಹ ದ್ವೇಷಿಗಳಾರೂ ಇಲ್ಲ."

"ಸ್ನೇಹಿತರಲ್ಲಿ ಯಾರಾದರೂ ನಿಮ್ಮೊಡನೆ ಮನಸ್ತಾಪ ಕಟ್ಟಿಕೊಂಡಿರುವರೇ ?"

"ಇಲ್ಲ."

"ಈ ನಗರದಲ್ಲಿ ಯಾರಾದರೂ ನಿಮಗೆ ಆಗದವರಿರುವರೇ ?"

"ಅಂತಹವರು ಯಾರೂ ಇಲ್ಲ."

"ನಿಮ್ಮ ಮಾವಂದಿರೊಡನೆಯೇ ಆಗಲಿ, ನಿಮ್ಮ ತಂಗಿಭಾವನ್ಮೈದುನನೊಡನೆಯೇ ಆಗಲಿ ನೀವೇನಾದರೂ ಮನಸ್ತಾಪವನ್ನು ಕಟ್ಟಿಕೊಂಡಿರುವಿರಾ ?"

"ಏನೂ ಇಲ್ಲ ?"

"ಒಂದು ಸಾರಿಯಾದರೂ ಮನಸ್ತಾಪವುಂಟಾಗಿಲ್ಲವೇ ?"

"ಅತ್ತೇಮಾವಂದಿರೊಡನೆ ಆಗಿಲ್ಲ. ತಂಗಿ–ಭಾವನ್ಮೈದುನನೊಡನೆ ಆಗಿದೆ."

"ಎಂದಿನಿಂದ ?"

"ಕೆಲವು ದಿನಗಳಿಂದ."

"ಈ ಕಾಗದಗಳು ಬರುವುದಕ್ಕೆ ಮೊದಲೋ ಅಥವಾ ಬಂದನಂತರವೋ ?"

"ಅದಕ್ಕೆ ಮೊದಲು."

"ಏಕೆ ?"

"ಯಾವುದೋ ಮಾತನಾಡುತ್ತಿರುವಾಗ, ಮಾತಿಗೆ ಮಾತು ಬಂದು ಅದೇ ಮನಸ್ತಾಪಕ್ಕೆ ಕಾರಣವಾಯಿತು."

"ಅಷ್ಟು ಮಾತ್ರವೇ ?"

"ಹೌದು."

"ಈಗ ನೀವು ಏನು ಮಾಡಬೇಕೆಂದಿರುವಿರಿ ?"

"ನನಗೇನೂ ತೋಚದು. ಅದಕ್ಕಾಗಿಯೇ ನಿಮ್ಮ ಬಳಿಗೆ ಬಂದಿರುವೆನು."

"ನನ್ನಲ್ಲಿಗೆ ಬರುವ ಈ ವಿಷಯವನ್ನು ಬೇರೆ ಯಾರೊಡನೆಯಾದರೂ ತಿಳಿಸಿರುವಿರಾ ?"

"ಇಲ್ಲ."

"ನೀವು ಈ ದಿನ ರಾತ್ರಿ ಹಣ ತೆಗೆದುಕೊಂಡು ಕಾರಿನಲ್ಲಿ ಇಲ್ಲಿಗೆ ಬನ್ನಿ. ನಾವೂ ನಿಮ್ಮ ಜೊತೆಯಲ್ಲಿ ಬರುವೆವು."

"ನನ್ನ ಜೊತೆಯಲ್ಲಿ ಬರುವಿರಾ "

"ಹೌದು ! ಬರುವೆವು."

"ಹಣ ತೆಗೆದುಕೊಂಡು ಬರಬೇಕೇ ?"

"ಹೌದು."

"ಹಾಗೇ ಆಗಲಿ."

"ನಿಮಗೆ ಈ ಕಾಗದವನ್ನು ನೋಡಿ ಯಾರ ಮೇಲಾದರೂ ಸಂದೇಹ ವುಂಟಾಗಿರುವುದೇ ?"

"ಇಲ್ಲಾ ಯಾರ ಮೇಲೂ ಸಂದೇಹವುಂಟಾಗಿಲ್ಲ."

"ಸರಿ ! ನೀವು ಈ ದಿನ ರಾತ್ರಿ ಮರೆಯದೆ ಬನ್ನಿ. ಆದರೇ ! ಈ ವಿಷಯ ವನ್ನು ಯಾರಲ್ಲಿಯೂ ತಿಳಿಸಬೇಡಿ."

"ಇಲ್ಲಾ ! ತಿಳಿಸುವುದಿಲ್ಲ."

"ಇನ್ನೂ ಒಂದು ವಿಷಯ."

"ಏನು ಹೇಳಿ ?"

"ಈ ರಾತ್ರಿಯೊಳಗೆ ನಿಮ್ಮ ಬಂಗಲೆಯ ಮುಂದೆ ಯಾರಾದರೂ ಓಡಾಡು ತ್ತಿದ್ದು, ನಿಮಗೆ ಅವರ ಮೇಲೆ ಸಂದೇಹವುಂಟಾದರೆ ಕೂಡಲೇ ನನಗೆ ಹೇಳಿ

ಕಳುಹಿಸಿ. ಹಾಗೆ ತಿಳಿಸುವಾಗ ಅಲ್ಲಿದ್ದವರಿಗೆ ಸಂದೇಹಕ್ಕೆ ಆಸ್ಪದವಾಗಬಾರದು. ಒಂದು ವೇಳೆ ತಿಳಿಸಲು ಸಾಧ್ಯವಿಲ್ಲದೆ ಹೋದರೆ ಅವರಾರೆಂಬುದನ್ನು ಚೆನ್ನಾಗಿ ನೋಡಿ ಗುರುತಿಟ್ಟುಕೊಳ್ಳಿ."

"ಹಾಗೇ ಆಗಲಿ."

ಪುರುಷೋತ್ತಮನು ಆತನಿಗೆ ಹೋಗಲು ಅನುಮತ್ತಿಯಿತ್ತನು.

ಬಾಲಕೃಷ್ಣನು ಅಲ್ಲಿಂದ ಹಿಂದಿರುಗಿ ಹೊರಟನು.

ಅವನ ಮನದಲ್ಲಿ ಭಯವೆಂಬ ಭೂತವು ಬೇರೂರಿಕೊಂಡಿತ್ತು. 'ಪುರುಷೋತ್ತಮನಲ್ಲಿಗೆ ತಾನು ಹೋಗಬಾರದಿತ್ತು. ಆತನ ದೆಶೆಯಿಂದ ಮುಂದೆ ನನ್ನ ತಪ್ಪು ಬಯಲಾಗದೆ ಇರುವುದಿಲ್ಲ. ಈಗ ಬಿಡುವ ಹಾಗೂ ಇಲ್ಲ. ಕಟ್ಟಿಕೊಳ್ಳುವ ಹಾಗೂ ಇಲ್ಲ. ಧರ್ಮ ಸಂಕಟವುಂಟಾಗಿದೆ. ಈ ದಿನ ರಾತ್ರಿ ನನ್ನ ಸಂಗಡ ಬಂದಾಗ ಲೋಕನಾಥನಂತೆ ಅವನೂ ಕೊಲೆಯಾದರೆ ಸಾಕು. ನಾನು ಉಳಿದುಕೊಂಡಂತಾಗುತ್ತದೆ. ತಾನೊಂದು ಬಗೆದರೆ ದೈವವೊಂದು ಬಗೆಯಿತೆಂಬಂತೆ ನಾನೊಂದು ವಿಧವಾಗಿ ಯೋಚಿಸಿದ್ದಕ್ಕೆ ಅದೇ ಬೇರೊಂದು ವಿಧವಾಗಿ ಪರಿಣಮಿಸುವಂತೆ ಕಾಣುತ್ತದೆ. ಆದುದಾಗಲಿ. ದೇವರಿದ್ದಾನೆ.' ಎಂದು ಯೋಚಿಸಿಕೊಳ್ಳುತ್ತಾ ತನ್ನ ಬಂಗಲೆಯನ್ನು ತಲುಪಿದನು.

ಪುರುಷೋತ್ತಮನಲ್ಲಿಗೆ ಹೋದುದರಿಂದ ಆತನ ಮನಸ್ಸಿಗೆ ಕೊಂಚವೂ ಸಮಾಧಾನವಿಲ್ಲವಾಯಿತು.

ಕಾಗದಗಳು ಪುರುಷೋತ್ತಮನಲ್ಲಿಯೇ ಉಳಿದುವು.

೧೬

ಬಾಲಕೃಷ್ಣನು ಹೊರಟುಹೋದನಂತರ ಹತ್ತು ನಿಮಿಷಕಾಲ ಪತ್ತೇದಾರ ರನ್ನು ಮೌನವೆಂಬ ವ್ರತವು ಆವರಿಸಿಕೊಂಡಿತ್ತು.

ಬಳಿಕ ರಾಮನಾಥನು ಮೌನವನ್ನು ಮುರಿದು—

"ಮಿತ್ರಾ ! ಈತನ ಬಗ್ಗೆ ನಿನ್ನ ಅಭಿಪ್ರಾಯವೇನು ?" ಎಂದು ಕೇಳಿದನು.

ಪುರುಷೋತ್ತಮನು ಗಾಂಭೀರ್ಯದಿಂದ—

"ಮೊದಲನೆಯದಾಗಿ ಈತನಲ್ಲಿಯೇ ಏನೋ ವಿಧವಾದ ತಪ್ಪಿರುವಂತೆ ಕಾಣುತ್ತೆ." ಎಂದು ಹೇಳಿದನು.

ವಿಸ್ಮಿತನಾದ ರಾಮನಾಥನು—

"ಅದು ಹೇಗೆ ?" ಎಂದು ಕೇಳಿದನು.

"ಈತನು ಮಾತನಾಡುವಾಗ ಒಂದೆರಡುಸಾರಿ ನಡುನಡುವೆ ತೊದಲಿದನು. ಮತ್ತು ಮುಖವು ವಿವರ್ಣವಾಯಿತು. ಆಗಲೇ ಈತನು ಏನೋ ಒಂದು ವಿಷಯವನ್ನು ನಮ್ಮ ಲ್ಲಿ ಮರೆಮಾಚುತ್ತಿರುವನೆಂದು ತಿಳಿದೆನು."

"ಏನು ತಪ್ಪಿರಬಹುದೆಂದು ನಿನ್ನ ಊಹೆ ?"

"ನನ್ನ ಊಹೆಗೆ ಯಾವ ವಿಷಯವೂ ಬಗೆಹರಿಯಲಿಲ್ಲ. ಏನು ತಪ್ಪಿರ ಬಹುದೆಂದು ಈ ಕಾಗದ ಬರೆದವನಿಗೆ ಮಾತ್ರ ತಿಳಿದಿದೆ. ಇಲ್ಲದೆಹೋಗಿದ್ದರೆ ಅವನು ಈ ರೀತಿ ಹೆದರಿಸಿ ಕಾಗದ ಬರೆಯುತ್ತಿರಲಿಲ್ಲ. ಈ ನಗರದಲ್ಲಿ ಇವನಿ ಗಿಂತಲೂ ಭಾರಿಯಾದ ಶ್ರೀಮಂತರಿಲ್ಲವೇ ? ಅವರೆಲ್ಲರನ್ನೂ ಬಿಟ್ಟು ಇವನಿಗೇ ಬರೆಯಬೇಕೆಂಬುದರ ಉದ್ದೇಶವೇನು ? ಇದರಲ್ಲಿ ಏನೋ ರಹಸ್ಯವಿದೆ."

"ಏನು ರಹಸ್ಯ ?"

"ಈತನು ಏನೋ ತಪ್ಪನ್ನು ಮಾಡಿರಬಹುದು. ಆ ತಪ್ಪನ್ನು ಈ ಕಾಗದ ಬರೆದವನು ನೋಡಿರಬಹುದು. ಅವನು ತನ್ನನ್ನು ನೋಡಿರುವನೆಂಬುದು ಈತನಿಗೆ ಗೊತ್ತಿಲ್ಲದೇ ಇರಬಹುದು ಆ ಕಾರಣದಿಂದ ಈತನನ್ನು ಹೆದರಿಸಿ, ಬೆದರಿಸಿ ಹಣ ಕಸಿಯಲು ಈ ಉಪಾಯವನ್ನು ಅವನು ಮಾಡಿರಬಹುದು."

"ಆತನು ಯಾರಿರಬಹುದು ?"

"ಈತನ ಸಮೀಪದ ಬಂಧುವೆಂದು ಮಾತ್ರ ಹೇಳಬಲ್ಲೆನು."

"ಸಮೀಪ ಬಂಧುವೇ ?"

"ಹೌದು ! ನನ್ನ ಊಹೆಗೆ ಹಾಗೆಯೇ ತೋರುತ್ತದೆ. ಮೇಲಾಗಿ ಈ ಎರಡು ಕಾಗದಗಳನ್ನು ಒಬ್ಬನೇ ಬರೆದುದಲ್ಲ. ಇದರಲ್ಲಿಯೂ ಒಂದು ಕುಯುಕ್ತಿಯು ಇರುವಂತೆ ಕಾಣುತ್ತೆ.

"ಅಕ್ಷರಗಳನ್ನು ನೋಡಿದರೆ ಒಂದೇರೀತಿ ಕಾಣುತ್ತಿದೆಯಲ್ಲ ?"

"ನೋಡಿದರೆ ಹಾಗೆಯೇ ತೋರುತ್ತದೆ. ಸೂಕ್ಷ್ಮವಾಗಿ ನೋಡಿದರೆ ವ್ಯತ್ಯಾಸವು ಕಂಡುಬರುತ್ತದೆ."

"ಹಾಗಾದರೆ ಈತನಲ್ಲಿ ಹಣವನ್ನು ಕಸಿಯಲು ಇಬ್ಬರು ಸಂಚು ಮಾಡಿ ಕೊಂಡಿರುವರೇ ?"

"ಆ ವಿಷಯವಾಗಿ ಈಗಲೇ ಏನನ್ನೂ ನಿರ್ಧರವಾಗಿ ಹೇಳಲು ಸಾಧ್ಯವಿಲ್ಲ. ಆದರೇ ! ಈ ಮೊದಲನೆಯ ಕಾಗದವನ್ನು ಆತನು ಬರೆದುದಲ್ಲವೆಂದು ಹೇಳ ಬಲ್ಲೆನು."

"ಮತ್ತೆ ಯಾರು ಬರೆದವರೆಂದು ನಿನ್ನ ಊಹೆ ?"

"ಬಾಲಕೃಷ್ಣನೇ ಬರೆದಿರಬಹುದು."

"ಬಾಲಕೃಷ್ಣನೇ ?"

"ಹೌದು. ಅದೇ ನನ್ನ ಊಹೆ."

"ಅದನ್ನು ಹೇಗೆ ಹೇಳುವೆ ?"

"ಈ ಎರಡನೆಯ ಕಾಗದವನ್ನು ಆತನೇ ಬರೆದಿರುವನೆಂಬುದರಲ್ಲಿ ಸಂದೇಹ ವಿಲ್ಲ. ಆದರೇ ! ಮೊದಲಿನ ಕಾಗದದಲ್ಲಿ ಆತನು ಬಾಲಕೃಷ್ಣನ ಅನೇಕ ರಹಸ್ಯ

ವಿಷಯಗಳನ್ನು ಬರೆದಿರುವನು. ಅದನ್ನು ಮುಚ್ಚಿಟ್ಟುಕೊಂಡು ಈತನು ತಾನೇ ಸ್ವತಃ ಈ ರೀತಿ ಬರೆದು ತಂದಿರುವನೆಂದು ಅನುಮಾನವಿಲ್ಲದೆ ಹೇಳಬಲ್ಲೆನು."

"ನಿನ್ನ ಊಹಾಪ್ರಪಂಚವು ವಿಶಾಲವಾಗುತ್ತಿದೆ. ನೀನು ಊಹಿಸಿ ದಂತೆಯೆಂದು ತೀರ್ಮಾನಿಸಿರುವೆಯಾ ?"

"ನನ್ನ ಊಹೆಗೆ ಹಾಗೇ ತೋರುತ್ತದೆ. ಒಂದುವೇಳೆ ನಡೆದಿದ್ದರೂ ನಡೆದಿರಬಹುದು."

"ಹಾಗಿದ್ದಮೇಲೆ ಈ ರಾತ್ರಿ ಆತನನ್ನು ಹಿಡಿಯಬಹುದಲ್ಲ ?"

ಪುರುಷೋತ್ತಮನು ನಸುನಕ್ಕು—

"ರಾಮನಾಥ ! ನಾವು ಭಾವಿಸಿದಷ್ಟು ಸುಲಭವಾಗಿ ಕಳ್ಳನನ್ನು ಹಿಡಿಯಲು ಸಾಧ್ಯವಿಲ್ಲ." ಎಂದು ಹೇಳಿದನು.

"ಏಕೆ ಸಾಧ್ಯವಾಗುವುದಿಲ್ಲ ? ಆತನು ರಾತ್ರಿ ಬರುವುದಿಲ್ಲವೇ ?"

"ಇಲ್ಲಾ ! ಬರುವುದಿಲ್ಲ."

"ಆದೇಕೆ ಬರುವುದಿಲ್ಲ ?"

"ಆತನು ನಾವು ಊಹಿಸಿದಷ್ಟು ದಡ್ಡನಲ್ಲ. ಬಾಲಕೃಷ್ಣನಿಗೆ ಕಾಗದವನ್ನು ಬರೆದು ಅವನು ಕಣ್ಣು ಮುಚ್ಚಿಕೊಂಡು ಎಲ್ಲಿಯೋ ಒಂದುಕಡೆ ಕುಳಿತು ಕೊಂಡಿಲ್ಲ."

"ಮತ್ತೇನು ಮಾಡುತ್ತಿರುವನೆಂದು ನಿನ್ನ ಭಾವನೆ ?"

"ಬಾಲಕೃಷ್ಣನ ಚಲನವಲನಗಳಮೇಲೆ ಅವನು ಸಂಪೂರ್ಣವಾಗಿ ನಿಗಾ ಇಟ್ಟಿರುವನೆಂದು ನನ್ನ ಭಾವನೆ."

"ಹಾಗಿದ್ದಮೇಲೆ ಬಾಲಕೃಷ್ಣನು ನಮ್ಮಲ್ಲಿಗೆ ಬಂದಿದ್ದನ್ನು ಅವನು ನೋಡಿರುವನಲ್ಲವೇ ?"

"ನೋಡಿರುವನೆಂದೇ ನನ್ನ ಭಾವನೆ."

"ಹಾಗಾದರೇ ! ರೂಪಾಯಿಗಳನ್ನು ತೆಗೆದುಕೊಂಡು ಬರುವಂತೆ ಬಾಲ ಕೃಷ್ಣನಿಗೆ ಏಕೆ ಹೇಳಿದೆ ?"

"ಬಾಲಕೃಷ್ಣನ ಮೇಲೆಯೂ ನನಗೆ ಸಂದೇಹವುಂಟಾಗಿದೆ. ಅದನ್ನು ವಿಶದಪಡಿಸಿದರೆ ಈತನೇ ಫರಾರಿಯಾಗಬಹುದು. ತಪ್ಪಿದರೆ ಮರ್ಯಾದೆಗೆ ಅಂಜಿ ಆತ್ಮಹತ್ಯೆ ಮಾಡಿಕೊಂಡರೂ ಮಾಡಿಕೊಳ್ಳಬಹದು. ಎಂದು ಯೋಚಿಸಿ

ಯಾವ ವಿಷಯವನ್ನೂ ಹೆಚ್ಚು ಪ್ರಸ್ತಾಪ ಮಾಡದೆ ಏನೂ ತಿಳಿಯದವನಂತೆಯೇ ನಾನು ವರ್ತಿಸಿದೆನು."

"ಬಾಲಕೃಷ್ಣನು ತಪ್ಪು ಮಾಡಿದ್ದರೆ ನಮ್ಮ ಬಳಿಗೆ ಏಕೆ ಬರುತ್ತಿದ್ದನು?"

"ಆ ತಪ್ಪು ತಿಳಿಯಬಾರದೆಂದೇ ಈ ರೀತಿ ಕೃತಕ ಪತ್ರವನ್ನು ರಚಿಸಿ ತಂದು ತಾನು ಆ ಗುಪ್ತ ವ್ಯಕ್ತಿಯ ತೊಂದರೆಯಿಂದ ಪಾರಾಗಲು ಯೋಚಿಸಿ ಕೊಂಡು ನಮ್ಮ ಸಹಾಯವನ್ನು ಅಪೇಕ್ಷಿಸಿ ಬಂದಿರುವನು."

"ಹೀಗೆಂದು ನಿರ್ಧರವಾಗಿ ಹೇಳಬಲ್ಲೆಯಾ?"

"ನನ್ನ ಊಹೆಗೆ ಹಾಗೆ ಹೊಳೆದಿದೆ."

"ಆತನು ಜೋಗಿ ಕಣಿವೆಯ ಬಳಿಗೆ ಬರುವುದಿಲ್ಲವೆಂದು ನಿನಗೆ ಧೃಡವಾದ ಮೇಲೆ ನಾವೇಕೆ ಅಲ್ಲಿಗೆ ಹೋಗಬೇಕು?"

"ಬಾಲಕೃಷ್ಣನು ಯಾವರೀತಿ ವರ್ತಿಸುವನೆಂದು ನೋಡಿ ತಿಳಿಯ ಬೇಕಾಗಿದೆ."

"ಅದೇಕೆ?"

"ಅದರಿಂದ ನಮಗೆ ಉಪಯೋಗವಿದೆ."

"ನೀನು ಹೇಳುವುದೇ ನನಗೆ ಅರ್ಥವಾಗುತ್ತಿಲ್ಲ."

"ಈಗ ನನ್ನ ಮಾತಿನಲ್ಲಿ ಅರ್ಥವಾಗದೆ ಇದ್ದರೂ, ಮುಂದೆ ಕಾರ್ಯವನ್ನು ನೋಡಿದಮೇಲಾದರೂ ನಿನಗೆ ತಿಳಿಯದಿರುವುದಿಲ್ಲ."

"ಆತನು ಇಂದು ರಾತ್ರಿ ಬರುವುದಿಲ್ಲವೆಂದು ಹೇಳಿದೆ. ಮುಂದೆ ಆತ ನಾರೆಂದು ಹೇಗೆ ಪತ್ತೇಮಾಡಿ ಹಿಡಿಯುವೆ?"

"ಬಾಲಕೃಷ್ಣನ ಮೂಲಕವೇ ಹಿಡಿಯುವೆನು. ಆತನಿಲ್ಲದೆ ನಮ್ಮ ಕಾರ್ಯವು ನಡೆಯದು."

"ಈಗ ಬಾಲಕೃಷ್ಣನು ನಮ್ಮ ಬಳಿಗೆ ಬಂದುದನ್ನು ಆತನು ನೋಡಿರುವ ನೆಂದು ಹೇಳಿದೆ. ಆದ್ದರಿಂದ ಆತನು ಅಲ್ಲಿಗೆ ಬರಲಾರನು. ಸಹಜ. ಆದರೇ! ಬಾಲಕೃಷ್ಣನು ನಮ್ಮ ಬಳಿಗೆ ಬಂದುದರಿಂದ ಈತನಿಗೆ, ಆತನಿಂದ ತೊಂದರೆ ಯಾಗುವುದಿಲ್ಲವೇ?"

"ಒಂದುವೇಳೆ ಆದರೂ ಆಗಬಹುದು. ಆದರೇ! ತನ್ನನ್ನು ಕೊಲೆ ಮಾಡ ಲಾರನೆಂದು ಹೇಳಲು ಸಾಧ್ಯವಿದೆ."

"ನಿನ್ನ ಊಹಾ ಸಾಮರ್ಥ್ಯವನ್ನು ಎಷ್ಟು ಹೊಗಳಿದರೂ ಕಡಿಮೆಯೆ."

ಪುರುಷೋತ್ತಮನು ನಕ್ಕು ಸುಮ್ಮನಾದನು.

ಬಾಲಕೃಷ್ಣನ ವಿಚಾರವನ್ನು ತಿಳಿದುಕೊಳ್ಳುವ ನಿಮಿತ್ತ ಪುರುಷೋತ್ತಮನು ಕಾರಿನಲ್ಲಿ ರಾಮನಾಥನೊಡನೆ ಅವನು ತಿಳಿಸಿದ ಜೋಗಿ ಕಣಿವೆಗೆ ಹೊರಟನು.

ಹೋಗುವಾಗ ಹಿಂದೆ, ಮುಂದಿನ ಆಲೋಚನೆಯಿಲ್ಲದೆ ಹೋಗಲಿಲ್ಲ.

ಐದನೇ ಮೈಲಿಕಲ್ಲಿನ ಬಳಿಗೆ ಹೋಗಿ ಅಲ್ಲಿ ರಸ್ತೆಯ ಪಕ್ಕದಲ್ಲಿ ಕಾರನ್ನು ನಿಲ್ಲಿಸಿ ಆ ಪ್ರದೇಶವನ್ನೆಲ್ಲಾ ಸಂಚರಿಸಿ ನೋಡಿದನು.

ಕಾಳಿಕಾ ದೇವಾಲಯದ ಬಳಿಯಲ್ಲೆಲ್ಲಾ ಸುತ್ತಾಡಿ ನೋಡಿದನು.

ನೆಲದಮೇಲೆ ಹೆಜ್ಜೆಯ ಗುರುತುಗಳಿರಬಹುದೇ? ಎಂದು ಯೋಚಿಸಿ ತನಗೆ ಅನುಮಾನ ಕಂಡುಬಂದ ಕಡೆಗಳಲ್ಲೆಲ್ಲಾ ಪರಿಶೀಲಿಸಿ ನೋಡಿದನು.

ಪುರುಷೋತ್ತಮನ ಕಾರ್ಯಕಲಾಪಗಳ ಮರ್ಮವನ್ನು ರಾಮನಾಥನಿಂದ ಅರಿಯಲಾಗಲಿಲ್ಲ.

ಒಂದು ಘಂಟೆಯವರೆವಿಗೂ ಅಲ್ಲಿನ ಪರಿಶೀಲನೆಯನ್ನು ನಡೆಸಿ ಬಳಿಕ ರಾಮನಾಥನೊಡನೆ ಕಾರಿನಲ್ಲಿ ಹಿಂದಿರುಗಿ ಹೊರಟನು.

## ೧೭

ರಾಮನಾಥನ ಮನದಲ್ಲಿ ನಾನಾ ವಿಧವಾದ ಯೋಚನೆಗಳುದ್ಭವಿಸಿದರೂ ಯಾವ ಯೋಚನೆಯೂ ಬಗೆ ಹರಿಯಲಿಲ್ಲ.

ಕಾರನ್ನು ಗ್ಯಾರೇಜಿನಲ್ಲಿ ಬಿಟ್ಟು ಮನೆಯೊಳಗೆ ಹೋದನಂತರ ರಾಮನಾಥನು ಮೌನವನ್ನು ಮುರಿದು—

"ಮಿತ್ರಾ ! ಅಲ್ಲಿಗೆ ಹೋಗಿ ಬಂದುದರಿಂದ ಏನು ವಿಷಯವನ್ನು ತ್ರಿಳಿದಂತಾಯಿತು ?" ಎಂದು ಕೇಳಿದನು.

ಪುರುಷೋತ್ತಮನು ಮಂದಹಾಸದಿಂದ—

"ನನ್ನ ಮನಸ್ಸಿನ ಅನೇಕ ಸಂಶಯಗಳು ನಿವೃತ್ತಿಯಾದುವು." ಎಂದು ಹೇಳಿದನು.

"ಅದು ಹೇಗೆ ?"

"ಅದರ ವಿವರಣೆಯನ್ನೆಲ್ಲಾ ನಾಳೆಯ ದಿನ ಹೇಳುವೆನು."

ರಾಮನಾಥನು ಮಾತನಾಡದೆ ಸುಮ್ಮನಾದನು.

ಪುರುಷೋತ್ತಮನ ಪ್ರತಿಯೊಂದು ಮಾತೂ ಅರ್ಥಗರ್ಭಿತವಾಗಿ ಅವನ ಕುತೂಹಲವನ್ನು ಕೆರಳಿಸಿದ್ದರಿಂದ ಆ ವಿಷಯವನ್ನರಿಯುವ ಅತ್ಯಾಸೆಯುಳ್ಳವನಾಗಿದ್ದನು.

ಇಬ್ಬರೂ ಹಾಗೇ ನಗರದ ಸಂಚಾರಕ್ಕೆ ಹೊರಟರು.

ರಾಮನಾಥನು ಎಂದಿಗೆ ರಾತ್ರಿಯಾಗುವುದೆಂದು ಎದುರು ನೋಡುತ್ತಿದ್ದನು.

ಪುರುಷೋತ್ತಮನಿಂದ ಬೀಳ್ಕೊಂಡ ಬಾಲಕೃಷ್ಣನು ರಾತ್ರಿಯಾಗುವವರೆವಿಗೂ ಹಾಗೂ, ಹೀಗೂ ಕಾಲವನ್ನು ಕಳೆದು ರಾತ್ರಿಯಾಗುತ್ತಲೇ ಹತ್ತು ಸಾವಿರ

ರೂಪಾಯಿಗಳವರೆವಿಗೂ ನೂರು ರೂಪಾಯಿಗಳ ನೋಟುಗಳನ್ನೇ ತೆಗೆದುಕೊಂಡು ಕಾರಿನಲ್ಲಿ ಪುರುಷೋತ್ತಮನ ಮನೆಗೆ ಹೊರಟು ಬಂದನು.

ಪತ್ತೇದಾರರು ಸಿದ್ಧರಾಗಿಯೇ ಇದ್ದರು.

ಪುರುಷೋತ್ತಮನು ಬಾಲಕೃಷ್ಣನಿಗೆ—

"ನಿಮ್ಮಲ್ಲಿ ಪಿಸ್ತೂಲು ಇರುವುದೇ ?" ಎಂದು ಪ್ರಶ್ನಿಸಿದನು.

"ಇಲ್ಲ."

—ಎಂದು ಬಾಲಕೃಷ್ಣನು ಉತ್ತರವಿತ್ತನು.

ಪತ್ತೇದಾರರಿಬ್ಬರೂ ಕಾರಿನಲ್ಲಿ ಕುಳಿತರು.

ಬಾಲಕೃಷ್ಣನೇ ಡ್ರೈವಿಂಗ್ ಮಾಡಿಕೊಂಡು ಹೊರಟನು.

ಮುಂದೆ ಏನು ಅಪಾಯ ಸಂಭವಿಸಿದರೂ ಅದರಿಂದ ಪಾರಾಗಲು ಪುರುಷೋತ್ತಮನು ಸಿದ್ಧನಾಗಿಯೇ ಇದ್ದನು.

ಕಾರು ಕಾಲು ಘಂಟೆಯೊಳಗಾಗಿ ಜೋಗಿ ಕಣಿವೆಯ ಸಮೀಪಕ್ಕೆ ಬಂದಿತು.

ಬಾಲಕೃಷ್ಣನು ಕಾರನ್ನು ಹಿಂದಿನಂತೆಯೇ ಮರದ ಕೆಳಗೆ ನಿಲ್ಲಿಸಿದನು.

ಪುರುಷೋತ್ತಮನು ಬಾಲಕೃಷ್ಣನ ವಿಷಯದಲ್ಲಿ ಸಂಶಯಗ್ರಸ್ತನಾದನು. ಅವನ ಮನದಲ್ಲಿ ಹತ್ತಾರು ಬಗೆಯ ಯೋಚನೆಗಳುದ್ಭವಿಸಿದರೂ ಅವನು ಅದನ್ನು ತೋರ್ಪಡಿಸಿಕೊಳ್ಳಲಿಲ್ಲ.

ಚಂದ್ರನು ಕೊಂಚಮಾತ್ರ ಕಾಣಿಸಿಕೊಂಡಿದ್ದುದರಿಂದ ಅವನ ಪೂರ್ಣ ಪ್ರಕಾಶವು ಭೂಮಿಯ ಮೇಲೆ ಹರಡಿರಲಿಲ್ಲ.

ಕತ್ತಲು ಎಲ್ಲಾ ಕಡೆಗಳಲ್ಲಿಯೂ ಆವರಿಸಿಕೊಂಡಿದ್ದಿತು.

ಬಾಲಕೃಷ್ಣನು ಕಾರನ್ನು ನಿಲ್ಲಿಸಿದ ಬಳಿಕ ಕಾರಿನಿಂದ ಕೆಳಗೆ ಇಳಿದನು.

ಪತ್ತೇದಾರರೂ ಕೆಳಗಿಳಿದರು.

ಬಾಲಕೃಷ್ಣನ ವಿಷಯದಲ್ಲಿ ಪುರುಷೋತ್ತಮನು ಜಾಗರೂಕನಾಗಿದ್ದು ಅವನ ಕೈಗಳನ್ನೇ ನೋಡುತ್ತಿದ್ದನು.

ಬಾಲಕೃಷ್ಣನು ಪುರುಷೋತ್ತಮನ ಮುಖವನ್ನು ನೋಡಲು ಆತನು—

"ಕಾಗದದಲ್ಲಿ ಬರೆದಂತೆ ಅನುಸರಿಸಿ." ಎಂದು ಹೇಳಿದನು.

ಬಾಲಕೃಷ್ಣನು ಎರಡು ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಕಾಳಿಕಾ ದೇವಾಲಯದ ಕಡೆಗೆ ಹೊರಟನು. ಅವನ ಮನದಲ್ಲಿ ಏನೋ ಒಂದು ವಿಧವಾದ ಭೀತಿಯು ಆವರಿಸಿಕೊಂಡಿತ್ತು.

ಬಾಲಕೃಷ್ಣನನ್ನು ನೋಡುವಂತೆ ರಾಮನಾಥನಿಗೆ ಹೇಳಿ, ತಾನು ತನ್ನಲ್ಲಿದ್ದ ಟಾರ್ಚ್ ಬೆಳಕಿನಿಂದ ಕಾರಿನ ಟೈರುಗಳನ್ನು ನೋಡಿದನು.

ಅವನ ಒಂದು ವಿಧವಾದ ಸಂಶಯವು ನಿವೃತ್ತಿಯಾಯಿತು.

ರಾಮನಾಥನು ಬಾಲಕೃಷ್ಣನ ಕಡೆಯೇ ನೋಡುತ್ತಿದ್ದನು.

ಚಂದ್ರನ ಮೊಬ್ಬು ಬೆಳಕಿನಲ್ಲಿ ಬಾಲಕೃಷ್ಣನು ಗೋಚರಿಸುತ್ತಿದ್ದನು.

ಸುಮಾರು ಹತ್ತು ಮಾರು ದೂರ ಹೋದನಂತರ ಬಾಲಕೃಷ್ಣನಿಗೆ ಕೆಂಪು ಲೈಟು ಗೋಚರಿಸಿತು.

ಆ ದೀಪವನ್ನು ನೋಡುತ್ತಲೇ ಹಾಗೇ ತಟಸ್ತನಾಗಿ ನಿಂತನು. ಅವನ ಮನಕ್ಕೆ ಆಗ ಹರ್ಷವುಂಟಾಯಿತು. 'ಮುಸುಕಿನ ವ್ಯಕ್ತಿಯು ಈಗ ಸಿಕ್ಕಿ ಬೀಳುವನು. ಇನ್ನು ಮುಂದೆ ದೊಡ್ಡ ಗಂಡಾಂತರವು ತಪ್ಪಿದಂತಾಗುವುದು. ಆತನು ಸೆರೆ ಸಿಕ್ಕಿದನಂತರ ಯಾವ ರೀತಿಯಿಂದಲಾದರೂ ಅವನನ್ನು ಕೊಂದು ಬಿಡುವೆನು.' ಎಂಬುದಾಗಿ ಯೋಚಿಸಿಕೊಳ್ಳುತ್ತಿದ್ದನು.

ಬಾಲಕೃಷ್ಣನು ನಿಂತುದನ್ನು ನೋಡಿ ರಾಮನಾಥನು ವಿಸ್ಮಿತನಾದನು. ಬಹುಶಃ ಕೆಂಪು ದೀಪವು ಕಂಡಿರಬಹುದೆಂದು ಭಾವಿಸಿ ತಲೆಯೆತ್ತಿ ನೋಡಲು ಅವನಿಗೆ ಆ ದೀಪವು ಕಾಣಿಸಲಿಲ್ಲ.

ಆತನಿಗೆ ಮರವೊಂದು ಅಡ್ಡಲಾಗಿತ್ತು.

ರಾಮನಾಥನು ಪುರುಷೋತ್ತಮನೊಡನೆ ವಿಷಯವನ್ನು ತಿಳಿಸಲು ಪುರುಷೋತ್ತಮನು ರಾಮನಾಥನಿಗೆ ಕಾರಿನ ಬಳಿಯಲ್ಲಿ ಎಚ್ಚರಿಕೆಯಿಂದ ಕಾದು ಕೊಂಡಿರುವಂತೆ ಹೇಳಿ ಪಿಸ್ತೂಲನ್ನು ಕೈಯಲ್ಲಿ ಹಿಡಿದುಕೊಂಡು ಹೆಜ್ಜೆಯ ಮೇಲೆ ಹೆಜ್ಜೆಯನ್ನಿಡುತ್ತಾ ಬಾಲಕೃಷ್ಣನ ಸಮೀಪಕ್ಕೆ ಹೋದನು.

ಅವನ ಸಮೀಪಕ್ಕೆ ಹೋದನಂತರ ಕೆಂಪು ಲೈಟು ಗೋಚರಿಸಿತು. ಅದಕ್ಕಾಗಿಯೇ ಈತನು ನಿಂತುಕೊಂಡನೆಂದು ಅರಿತು ತಾನು ಅಲ್ಲಿಯೇ ಮರದ ಮರೆಯಲ್ಲಿ ಅಡಗಿ ನಿಂತುಕೊಂಡನು.

ಐದು ನಿಮಿಷವಾಯಿತು. ಹತ್ತು ನಿಮಿಷವಾಯಿತು. ಕೆಂಪು ಲೈಟು ಆರಲಿಲ್ಲ. ಪ್ರಕಾಶಮಾನವಾಗಿ ಉರಿಯುತ್ತಲೇ ಇತ್ತು.

ಪುರುಷೋತ್ತಮನು ಸೋಜಿಗಗೊಂಡನು. ತಾವು ಬಂದಿರುವುದರಿಂದ ಆ ವ್ಯಕ್ತಿಯು ಹಾಗೇ ನಿಂತುಕೊಂಡಿರುವನೆಂದು ಭಾವಿಸಿಕೊಂಡನು.

ಬಾಲಕೃಷ್ಣನೂ ಸಹ ಆಶ್ಚರ್ಯಭರಿತನಾದನು. ಹಿಂದೆ ಯಾವ ಸಾರಿಯೂ ಅಷ್ಟು ಹೊತ್ತು ಹಾಗೆ ನಿಂತಿರಲಿಲ್ಲ. ಕೈಗಳು ಸೋತುಹೋದುವು. ಕೆಳಗೆ ಬಿಟ್ಟರೆ ಪಿಸ್ತೂಲಿಗೆ ಬಲಿಯಾಗುವೆನೆಂಬ ಭಯ. ಕೆಂಪು ಲೈಟು ಆರುವ ಸೂಚನೆಯೇ ಕಂಡು ಬರಲಿಲ್ಲ.

ಹತ್ತು ನಿಮಿಷ ಕಳೆದನಂತರ ಪುರುಷೋತ್ತಮನಿಗೆ ಆ ದೀಪದ ವಿಷಯ ವಾಗಿ ಏನೋ ಒಂದು ವಿಧವಾದ ಸಂದೇಹವುಂಟಾಯಿತು.

ಬಾಲಕೃಷ್ಣನಿಗೆ ಧೈರ್ಯದಿಂದ ನಿಂತುಕೊಂಡಿರುವಂತೆ ಹೇಳಿ ಪಿಸ್ತೂಲನ್ನು ಮೇಲಕ್ಕೆ ಹಾರಿಸಿದನು.

ನಿಶ್ಶಬ್ದತೆಯು ಅಡಗಿದ್ದುದರಿಂದ ಪಿಸ್ತೂಲಿನ ಶಬ್ದಕ್ಕೆ ಆ ಕಾಡಿನಲ್ಲಿ ಪ್ರತಿ ಧ್ವನಿಯುಂಟಾಯಿತು.

ಕೆಂಪು ದೀಪವು ಚಲಿಸಲಿಲ್ಲ. ಆರಲೂ ಇಲ್ಲ.

ತನ್ನ ಜೊತೆಯಲ್ಲಿ ಪತ್ತೇದಾರರು ಬಂದಿರುವುದರಿಂದ ಮುಸುಕಿನ ವ್ಯಕ್ತಿಯು ಅಲ್ಲಿಯೇ ನಿಂತುಗೊಂಡಿರುವನೆಂದು ಬಾಲಕೃಷ್ಣನು ಭಾವಿಸಿಕೊಂಡು ಕೈಗಳು ಸೋತು ಹೋದುದರಿಂದ ತನ್ನ ತಲೆಯ ಮೇಲೆ ಇಟ್ಟುಕೊಂಡನು.

ಬಾಲಕೃಷ್ಣನಿಗೆ ಹಾಗೇ ನಿಂತುಕೊಂಡಿರುವಂತೆ ಹೇಳಿ ಪುರುಷೋತ್ತಮನು ಇನ್ನೊಂದು ಮಾರ್ಗವನ್ನು ಹಿಡಿದು ಬಳಸಿಕೊಂಡು ದೇವಾಲಯದ ಬಳಿಗೆ ಹೊರಟನು.

ಪಿಸ್ತೂಲು ಅವನ ಆತ್ಮರಕ್ಷಣೆಗೆ ಸಿದ್ಧವಾಗಿತ್ತು.

ಹಾಗೇ ಸುತ್ತು ಹಾಕಿಕೊಂಡು ಹಿಂದೆ ಮುಂದೆ ನೋಡಿಕೊಳ್ಳುತ್ತಾ ದೇವಾಲಯದ ಬಳಿಗೆ ಹೋಗಿ. ಕೆಂಪು ದೀಪವು ಇದ್ದಲ್ಲಿಗೆ ಹೋದನು.

ಅಲ್ಲಿಗೆ ಹೋಗಿ ನೋಡುತ್ತಲೇ ಆ ವ್ಯಕ್ತಿಯ ಜಾಣ್ಮೆಗೆ ಮೆಚ್ಚಿ ಬೆರಗಾದ ನಲ್ಲದೆ, ನಿಜವಾಗಿಯೂ ಆತನು ಪ್ರಚಂಡ ವ್ಯಕ್ತಿಯೆಂಬುದರಲ್ಲಿ ಸಂದೇಹವಿಲ್ಲ. ಎಂದುಕೊಂಡನು.

ಕೆಂಪು ದೀಪವಿದ್ದಲ್ಲಿ ಮನುಷ್ಯರಾರೂ ಇರಲಿಲ್ಲ ಆ ದೀಪವನ್ನು ಅಲ್ಲಿದ್ದ ಮರದ ಒಂದು ರೆಂಬೆಗೆ ಕಟ್ಟಿತ್ತು.

ಇಲ್ಲಿ ಯಾರಾದರೂ ಕಾಯುತ್ತಿರಬಹುದೇ ? ಎಂದು ಭಾವಿಸಿ ತನ್ನಲ್ಲಿದ್ದ ಟಾರ್ಚ್ ಬೆಳಕಿನಿಂದ ಸುತ್ತ ಮುತ್ತಲೂ ನೋಡಿದನು. ಯಾರೂ ಕಾಣಿಸಲಿಲ್ಲ.

ದೇವಾಲಯದ ಅಕ್ಕ ಪಕ್ಕಗಳಲ್ಲಿ, ಮರಗಳ ಮೇಲೆಲ್ಲಾ ತನ್ನ ಟಾರ್ಚಿನ ಸಹಾಯದಿಂದ ನೋಡಿದನು. ಯಾರೂ ಕಾಣಿಸಲಿಲ್ಲ. 'ಆತನು ಇಲ್ಲಿಲ್ಲ. ಈ ಹಿಂದೆಯೇ ಇಲ್ಲಿಗೆ ಬಂದು ಈ ದೀಪವನ್ನು ಕಟ್ಟಿ ಹೋಗಿರಬಹುದು. ಬಾಲಕೃಷ್ಣನು ನಮ್ಮ ಮನೆಗೆ ಬಂದುದನ್ನು ಅವನು ನೋಡಿರುವನು. ಆ ಕಾರಣ ನಮ್ಮನ್ನು ಮೋಸಗೊಳಿಸಲು ಈ ಉಪಾಯ ಮಾಡಿರುವನು.' ಎಂದು ಪುರುಷೋತ್ತಮನು ಭಾವಿಸಿಕೊಂಡನು.

ಇನ್ನು ಇಲ್ಲಿರುವುದು ಅನಾವಶ್ಯಕವೆಂದರಿತು ಆ ಕೆಂಪು ದೀಪವನ್ನು ಆರಿಸಿ ಅದನ್ನು ಬಿಚ್ಚಿ ತೆಗೆದುಕೊಂಡು ಬಂದ ಮಾರ್ಗದಲ್ಲಿಯೇ ಹಿಂದಿರುಗಿದನು.

ಕೆಂಪು ದೀಪದ ಬಳಿಯಲ್ಲಿ ಟಾರ್ಚ್ ಲೈಟು ಕಾಣಿಸಿದುದನ್ನು ನೋಡಿ ಬಾಲಕೃಷ್ಣನು 'ಮುಸುಕಿನ ವ್ಯಕ್ತಿಯು ಅಲ್ಲಿಯೇ ಓಡಾಡುತ್ತಿರುವನು. ಜೊತೆಯಲ್ಲಿ ಇನ್ನೊಬ್ಬನೂ ಇರುವನು' ಎಂದು ತಿಳಿದುಕೊಂಡನಲ್ಲದೆ ಪುರುಷೋತ್ತಮನೇ ಅಲ್ಲಿಗೆ ಹೋಗಿರುವನೆಂದು ತಿಳಿಯಲಿಲ್ಲ.

ಕೆಂಪು ದೀಪವು ಆರಿದನಂತರ ಮುಸುಕಿನ ವ್ಯಕ್ತಿಯು ತನ್ನ ಬಳಿಗೆ ಬರುವನೆಂದು ತಿಳಿದು ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ನಿಂತನು.

ಪುರುಷೋತ್ತಮನು ಕಾರಿನ ಬಳಿಗೆ ಬಂದನು.

ರಾಮನಾಥನು ಅಲ್ಲಿ ಎಚ್ಚರವಾಗಿಯೇ ಕಾಯುತ್ತಿದ್ದನು.

ಪುರುಷೋತ್ತಮನು ಬಾಲಕೃಷ್ಣನಿಗೆ ಹಿಂದಿರುಗಿ ಬರುವಂತೆ ಹೇಳಲು ಆತನು ಉತ್ಸಾಹದಿಂದ ಹಿಂದಿರುಗಿದನು.

ಕಾರಿನ ಬಳಿಗೆ ಬಂದು ಏನು ವಿಷಯವೆಂದು ಕೇಳಲು ಪುರುಷೋತ್ತಮನು ಹಸನ್ಮುಖನಾಗಿ—

"ಈಗ ನಗರಕ್ಕೆ ಹಿಂದಿರುಗೋಣ. ಅಲ್ಲಿಗೆ ಹೋದನಂತರ ವಿಷಯವನ್ನು ಹೇಳುವೆನು." ಎಂದು ಹೇಳಿದನು.

ಬಾಲಕೃಷ್ಣನು ತಲೆಯಾಡಿಸಿ ಕಾರಿನಲ್ಲಿ ಕುಳಿತುಕೊಳ್ಳುತ್ತಲೇ ಪತ್ತೇದಾರರೂ ಕುಳಿತರು.

ಕಾರನ್ನು ಮೂವತ್ತು ಮೈಲಿಗಳ ವೇಗದಲ್ಲಿ ಓಡಿಸುತ್ತಾ ಬಹು ಬೇಗನೆ ನಗರದ ಸಮೀಪಕ್ಕೆ ಬಂದನು.

ನಗರದಲ್ಲಿ ಜನಸಂಚಾರವಿಲ್ಲದೆ ಹಾಳುಬಿದ್ದ ಊರಿನಂತಿತ್ತು.

ಬಾಲಕೃಷ್ಣನು ಕಾರನ್ನು ಪುರುಷೋತ್ತಮನ ಮನೆಯ ಮುಂದೆ ನಿಲ್ಲಿಸಿದನು.

ಮೂವರೂ ಒಳಗೆ ಹೋದರು.

ಬಳಿಕ ಪುರುಷೋತ್ತಮನು—

"ಕೆಂಪು ದೀಪವು ಇದ್ದಲ್ಲಿ ಮನುಷ್ಯರಾರೂ ಇರಲಿಲ್ಲ." ಎಂದು ಹೇಳಿದನು.

ವಿಸ್ಮಿತನಾದ ಬಾಲಕೃಷ್ಣನು—

"ಹಾಗಾದರೇ ! ಅದನ್ನು ಅಲ್ಲಿಟ್ಟವರಾರು ?" ಎಂದು ಕೇಳಿದನು.

"ನಿಮಗೆ ಕಾಗದ ಬರೆದವನೇ ಬಹುಶಃ ರಾತ್ರಿ ನಿಯಮಿತವೇಳೆಯೊಳಗೇ ಅಲ್ಲಿಗೆ ಹೋಗಿ ಈ ದೀಪವನ್ನು ಅಲ್ಲಿದ್ದ ಮರಕ್ಕೆ ಕಟ್ಟಿರುವನು."

—ಎಂದು ಹೇಳಿ ಪುರುಷೋತ್ತಮನು ದೀಪವನ್ನು ತಂದ ವಿಧಾನವನ್ನು ಹೇಳಿದನು.

ಬಾಲಕೃಷ್ಣನು ಅತ್ಯಂತ ಸೋಜಿಗದಿಂದ ಪುರುಷೋತ್ತಮನ ಚಾತುರ್ಯತೆಗೆ ಬೆರಗಾದನು.

"ಆತನು ಬರಲಿಲ್ಲವೇಕೆ ?"

"ನೀವು ನಮ್ಮಲ್ಲಿಗೆ ಬಂದುದರಿಂದ."

"ಹಾಗಾದರೇ ! ಆತನು ನನ್ನನ್ನೇ ಹಿಂಬಾಲಿಸಿ ನನ್ನ ಚಲನವಲನಗಳನ್ನು ಅರಿಯುತ್ತಿರುವನೇ ?"

"ಹೌದು ! ನೀವು ನಮ್ಮಲ್ಲಿಗೆ ಬಂದ ಪ್ರಯುಕ್ತ ಆತನು ತಾನು ಸಿಕ್ಕಿಕೊಳ್ಳುವೆನೆಂದು ಭಾವಿಸಿ ಅಲ್ಲಿಗೆ ಬಾರದಿರುವನು. ನಮ್ಮನ್ನು ಭ್ರಾಂತಿಗೊಳಿಸಲು ಅಲ್ಲಿಗೆ ಹೋಗಿ ದೀಪವನ್ನು ಕಟ್ಟಿರುವನು."

"ಮುಂದೆ ಏನು ಮಾಡುವಿರಿ ?"

"ನಿಮಗೆ ಯಾವ ಸಮಯದಲ್ಲಿಯೇ ಆಗಲಿ ಈ ರೀತಿ ಕಾಗದ ಬಂದರೆ ನಮ್ಮಲ್ಲಿಗೆ ಬರಬೇಡಿ ನೀವು ಆತನು ತಿಳಿಸಿದ ವೇಳೆಗೆ ಒಂಟಿಯಾಗಿಯೇ ಅಲ್ಲಿಗೆ

ಹೋಗಿ ಹಣವನ್ನು ಕೊಟ್ಟು ಬನ್ನಿ. ಆತನಾರೆಂಬುದನ್ನು ಪತ್ತೇಮಾಡಿ ಹಿಡಿಯುವ ಭಾರವು ನಮಗಿರಲಿ. ನೀವೇನೂ ಯೋಚಿಸಬೇಡಿ."

"ಹಾಗಾದರೇ! ಅವನು ತಿಳಿಸಿದಂತೆ ಹಣಕೊಟ್ಟು ಕಳೆದುಕೊಳ್ಳಲೇ ?"

"ನಿಮ್ಮ ಹಣವು ಎಲ್ಲಿಗೂ ಹೋಗುವುದಿಲ್ಲ. ಆತನು ಮುಂದೆ ನಿಮಗೆ ಕಾಗದ ಬರೆಯದೆ ಇರುವುದಿಲ್ಲ. ನೀವು ನಮ್ಮಲ್ಲಿಗೆ ಬಂದು ಯಾವ ವಿಷಯವನ್ನೂ ತಿಳಿಸಬೇಡಿ. ನಿಮ್ಮ ಹಣವು ಆತನಲ್ಲಿದ್ದರೆ ಖಂಡಿತವಾಗಿಯೂ ಅದು ನಿಮ್ಮನ್ನೇ ಸೇರುವುದು."

"ಆಗಲಿ ! ತಿಳಿಸುವುದಿಲ್ಲ."

"ಯಾವ ಕಾರಣಕ್ಕೂ ಇಲ್ಲಿಗೆ ಬರಬೇಡಿ."

"ಇಲ್ಲಾ ! ಬರುವುದಿಲ್ಲ."

ಪುರುಷೋತ್ತಮನು ಆತನಿಗೆ ಹೋಗಲು ಅನುಮತಿಯಿತ್ತನು.

ಬಾಲಕೃಷ್ಣನು ಹಿಂದಿರುಗಿದನು.

ಆತನು ಹೋದನಂತರ ರಾಮನಾಥನು—

"ಮಿತ್ರಾ ! ವಿವರಣೆಯನ್ನು ನಾಳೆಯ ದಿನ ಹೇಳುವೆನೆಂದೆಯಲ್ಲ. ಅದೇನು ವಿಷಯ ಹೇಳು ?" ಎಂದು ಕೇಳಿದನು.

"ಈಗಲೇ ಹೇಳಬೇಕೇ ?"

"ಅದನ್ನು ಕೇಳಿ ತಿಳಿದುಕೊಳ್ಳಬೇಕೆಂಬ ಕುತೂಹಲವುಂಟಾಗಿರುವುದು. ಸದಾ ನಿನ್ನ ಜೊತೆಯಲ್ಲಿಯೇ ಇದ್ದರೂ ನಿನ್ನ ಕಾರ್ಯಕಲಾಪಗಳನ್ನು ಅರಿಯದವನಾಗಿರುವೆನು., ಹೇಳು ?"

"ಬಾಲಕೃಷ್ಣನು ಈ ದಿನವೇ ಹೊಸದಾಗಿ ಅಲ್ಲಿಗೆ ಹೋದವನಲ್ಲ. ಹಿಂದೆಯೂ ಅನೇಕ ಸಲ ಹೋಗಿರುವನು."

ವಿಸ್ಮಿತನಾದ ರಾಮನಾಥನು—

"ಹಾಗೆ ಹೇಳಲು ನಿನಗೆ ದೊರೆತ ಆಧಾರವೇನು ?" ಎಂದು ಕೇಳಿದನು.

"ಬಾಲಕೃಷ್ಣನು ಬೆಳಿಗ್ಗೆ ನಮ್ಮಲ್ಲಿಗೆ ಬಂದು ಹೋದನಂತರ ನಾವು ಜೋಗಿ ಕಣಿವೆಯ ಬಳಿಗೆ ಹೋದುದು ಸರಿಯಷ್ಟೇ. ಆಗ ನಾನು ಆ ಪ್ರದೇಶವೆಲ್ಲವನ್ನೂ ಪರಿಶೀಲಿಸಿದುದನ್ನು ನೀನು ನೋಡಿರುವೆ. ಆ ಪ್ರದೇಶವು ಜಂಗಾಡಾಗಿರುವುದರಿಂದಲೂ, ಕಾಳಿಕಾ ದೇವಾಲಯವು ಹಾಳು ಬಿದ್ದಿರುವುದರಿಂದಲೂ

ಅಲ್ಲಿ ಯಾರೂ ವಿಶೇಷವಾಗಿ ಓಡಾಡುತ್ತಿಲ್ಲ. ಸಮೀಪದಲ್ಲಿ ಹಳ್ಳಿಗಳೂ ಇಲ್ಲ. ಆ ಪ್ರದೇಶವನ್ನು ನಾನು ಪರಿಶೀಲಿಸಿದಾಗ ನಾಲ್ಕಾರು ಕಡೆ ನೆಲದ ಮೇಲೆ ಭೂಡ್ಸಿನ ಗುರುತುಗಳು ಕಂಡುವು. ಬಾಲಕೃಷ್ಣನು ಆ ದಿನ ನಮ್ಮಲ್ಲಿಗೆ ಬಂದಾಗ ಆತನು ಧರಿಸಿದ್ದ ಭೂಡ್ಸನ್ನು ನೋಡಲು ನನಗೆ ಅನುಮಾನವಾಯಿತು. ಹಿಂದೆಯೂ ಈತನು ಅಲ್ಲಿಗೆ ಹೋಗಿ ಹಣ ಕೊಟ್ಟು ಬಂದಿರುವನೆಂದು ತಿಳಿದೆನು. ಈಗ ಆತನು ಕಾರನ್ನು ಬಿಟ್ಟು ಕಾಡಿನೊಳಗೆ ನಡೆದು ಹೋದಾಗ ನೆಲದ ಮೇಲೆ ಬಿದ್ದ ಭೂಡ್ಸಿನ ಗುರುತುಗಳನ್ನು ನೋಡಲು ನಾನು ನೋಡಿದುದಕ್ಕೂ, ಈ ಗುರುತಿಗೂ ವ್ಯತ್ಯಾಸವೇ ಕಂಡು ಬರಲಿಲ್ಲ."

"ಸರಿ ! ಆ ಮೇಲೆ ?"

"ಕಾಳಿಕಾ ದೇವಾಲಯದಿಂದಲೂ ನಡೆದು ಬಂದ ಮತ್ತು ಹಿಂದಿರುಗಿದ ಗುರುತುಗಳು ಅಲ್ಲಲ್ಲಿ ಕಂಡು ಬಂದಿತು. ಕಾಗದ ಬರೆದವನು ಇಲ್ಲಿಗೆ ಬಂದು ಒಂದೆರಡು ಸಾರಿಯಾದರೂ ಹಣ ತೆಗೆದುಕೊಂಡು ಹೋಗಿರಬೇಕೆಂದು ತಿಳಿದೆನು."

"ನೀನು ಊಹಿಸಿದಂತೆ ನಡೆದಿರಬಹುದೇ ?"

"ನಡೆದಿದೆಯೆಂದೇ ನನ್ನ ಭಾವನೆ. ಇನ್ನೊಂದು ಮುಖ್ಯವಾದ ವಿಷಯವೇನೆಂದರೆ:– ಬಾಲಕೃಷ್ಣನು ಈಗ ಕಾರನ್ನು ನಿಲ್ಲಿಸಿದ್ದ ಜಾಗದಲ್ಲಿ ಟೈರಿನ ಗುರುತುಗಳನ್ನು ನಾನು ಈ ಮಧ್ಯಾಹ್ನ ನೋಡಿದ್ದೆನು. ಮಳೆ ಬಂದು ನೆಲವು ನೆನೆದಿದ್ದ ಪ್ರಯುಕ್ತ ಟೈರಿನ ಗುರುತುಗಳು ಸ್ಪಷ್ಟವಾಗಿ ಕಂಡುವು. ಕಾರನ್ನು ಪಕ್ಕದಲ್ಲಿ, ಮರದ ಕೆಳಗೆ ನಿಲ್ಲಿಸಿದುದರಿಂದಲೂ, ಇತರ ವಾಹನಗಳು ಅದರ ಮೇಲೆ ಹೋಗದೆ ಇದ್ದುದರಿಂದಲೂ. ಟೈರಿನ ಗುರುತುಗಳು ಅಳಿಸಿರಲಿಲ್ಲ. ಆ ಟೈರಿನ ಗುರುತುಗಳು 'ಡನ್‌ಲಪ್' ಟೈರಿನ ಗುರುತುಗಳಾಗಿದ್ದುವು. ಕ್ಯಾಮರಾ ಇಲ್ಲದೆ ಇದ್ದುದರಿಂದ ಫೋಟೋವನ್ನು ಆಗ ತೆಗೆದುಕೊಳ್ಳಲಿಲ್ಲ. ಈಗ ಅದೇ ಸ್ಥಳದಲ್ಲಿ ಬಾಲಕೃಷ್ಣನು ಕಾರನ್ನು ನಿಲ್ಲಿಸಿದ್ದನು. ಅದನ್ನು ನೋಡಿ ನನ್ನ ಆ ಸಂದೇಹವು ಬಲವಾಯಿತು. ಆತನು ಕಾರನ್ನು ಬಿಟ್ಟು ಕಾಡಿನೊಳಗೆ ಹೋದನಂತರ ಟಾರ್ಚ್ ಬೆಳಕಿನಿಂದ ಟೈರುಗಳನ್ನು ನೋಡಲು ಅವು ಡನ್‌ಲಪ್ ಟೈರುಗಳೇ ಆಗಿದ್ದುವು. ನನ್ನ ಸಂದೇಹವು ಸ್ವಲ್ಪವಾಗಿ ನಿವೃತ್ತಿಯಾಯಿತು. ಈ ವಿಷಯವನ್ನೇ ನಾಳೆ ತಿಳಿಸುವೆನೆಂದು ಹೇಳಿದ್ದು."

"ನಿನ್ನ ಕಾರ್ಯಾಚರಣೆಯು ಹೊಗಳಲರ್ಹವಾಗಿದೆ. ನನ್ನ ಸಂದೇಹವೂ ನಿವೃತ್ತಿಯಾಯಿತು. ಆದರೇ! ಒಂದು ವಿಷಯ ?"

"ಏನು, ಒಂದು ವಿಷಯ ?"

"ಇನ್ನು ಮುಂದೆ ಬಾಲಕೃಷ್ಣನಿಗೆ ನಮ್ಮಲ್ಲಿಗೆ ಬರಬೇಡವೆಂದು ಏಕೆ ಹೇಳಿದೆ ?"

"ಆತನು ನಮ್ಮಲ್ಲಿಗೆ ಬಂದು ಹೋಗುತ್ತಲ್ಲಿದ್ದರೆ ಕಳ್ಳನು ಸಿಗಲಾರನು. ಆದ್ದರಿಂದ ಹಾಗೆ ಹೇಳಿದೆ."

"ಆತನು ಬಾರದೆ ಇದ್ದರೆ ಅವನ ವಿಷಯವನ್ನು ತಿಳಿಯುವುದಾದರೂ ಹೇಗೆ ?"

"ಅದಕ್ಕೆ ಬೇರೊಂದು ದಾರಿಯಿದೆ."

"ಏನು ಬೇರೆ ಉಪಾಯ ?"

"ನೀನು ದೇವರಾಜಯ್ಯ, ಜಗನ್ನಾಥ, ಇವರ ಚಲನವಲನಗಳನ್ನು ಅರಿಯುವುದರಲ್ಲಿ ನಿರತನಾಗು, ನಾನು ಬಾಲಕೃಷ್ಣನನ್ನು ಹಿಂಬಾಲಿಸಿ ಅವನು ಯಾರೊಡನೆ ಸಂಪರ್ಕವಿಟ್ಟುಕೊಂಡಿರುವನು ? ಅವನ ಬಂಗಲೆಗೆ ಬಂದು ಹೋಗುವವರಾರೆಂಬುದನ್ನು ನೋಡುವೆನು."

"ಅದರಿಂದ ಏನು ಪ್ರಯೋಜನವಿದೆ ?"

"ಮುಂದೆ ಬಾಲಕೃಷ್ಣನಿಗೆ ಕಾಗದವು ಬಾರದೆ ಇರುವುದಿಲ್ಲ. ಆತನು ನಮಗೆ ವರ್ತಮಾನವನ್ನು ಕೊಡದೆ ಹಣ ತೆಗೆದುಕೊಂಡು ಹೋಗುವನು. ಆಗ ಆತನಿಗರಿವಾಗದಂತೆ ನಾವು ಆತನನ್ನು ಹಿಂಬಾಲಿಸಿ ಆ ವ್ಯಕ್ತಿಯಾರೆಂಬುದನ್ನು ನೋಡುವೆನು. ಸಾಧ್ಯವಾದರೆ ಹಿಡಿದೂ ಬಿಡುವೆನು."

"ಈ ನಿನ್ನ ಯುಕ್ತಿಯು ಸರಿಯಾಗಿದೆ. ಆದರೇ! ನಾನು ಇಬ್ಬರನ್ನು ಕಾಯಲು ಸಾಧ್ಯವೇ ?"

ಪುರುಷೋತ್ತಮನು ಕೆಲವು ನಿಮಿಷ ಯೋಚಿಸಿ—

"ನೀನು ದೇವರಾಜನನ್ನು ಕಾಯುವುದು ಬೇಡ. ಜಗನ್ನಾಥನನ್ನು ಹಿಂಬಾಲಿಸಿ ಅವನ ನಡವಳಿಕೆಗಳನ್ನು ಗಮನಿಸು." ಎಂದು ಹೇಳಿದನು.

"ಹಾಗೇ ಆಗಲಿ. ಅವನ ಮೇಲೆ ನಿನಗೆ ಸಂದೇಹವಿರುವುದೇ ?"

"ಬೇರೆ ಯಾರೂ ಬಾಲಕೃಷ್ಣನಿಗೆ ಹತ್ತಿರದ ಸಂಬಂಧೀಕರಿಲ್ಲ. ಆದ್ದರಿಂದ ಅವನ ಮೇಲೆ ಸಂದೇಹವುಂಟಾಗಿದೆ. ಅದನ್ನು ನಿವಾರಿಸಿಕೊಳ್ಳುವುದು ಉತ್ತಮ ವಲ್ಲವೇ ? ಹೇಳು."

"ಅದು ನ್ಯಾಯವೇ. ಆದರೇ! ಬಾಲಕೃಷ್ಣನನ್ನು ಹಿಂಬಾಲಿಸುತ್ತಿದ್ದರೆ ಅಪರಾಧಿಯಾರೆಂದು ಮುಂದೆ ತಿಳಿದೇ ತಿಳಿಯುತ್ತದೆ. ಹಾಗಿರುವಾಗ ಜಗನ್ನಾಥ ನನ್ನು ಏಕೆ ಹಿಂಬಾಲಿಸಬೇಕು ?"

"ಈಗ ಬಾಲಕೃಷ್ಣನು ನಮ್ಮಲ್ಲಿಗೆ ಬಂದಿರುವುದರಿಂದ ಆತನು ಸದ್ಯದಲ್ಲಿಯೇ ಕಾಗದ ಬರೆದು ಹಣ ತರಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಆದ್ದರಿಂದ ಅದಕ್ಕೆ ಮೊದಲೇ ಒಂದು ವೇಳೆ ಸಿಕ್ಕಿದರೂ ಸಿಗಬಹುದೆಂಬ ಅಭಿಪ್ರಾಯದ ಮೇಲೆ ಹಾಗೆ ಹೇಳಿದೆ."

"ನಿನ್ನ ದೂರಾಲೋಚನೆಯು ಸರಿಯಾಗಿದೆ. ನಿನ್ನ ಇಷ್ಟದಂತೆಯೇ ಆಗಲಿ."

"ಇನ್ನು ಈ ರಾತ್ರಿಯಲ್ಲಿ ಮಾತನಾಡುತ್ತಾ ಕುಳಿತುಕೊಳ್ಳುವುದು ಬೇಡ. ನಿನ್ನ ಮನಸ್ಸಿನಲ್ಲಿದ್ದ ಸಂಶಯವು ದೂರಾದ ಮೇಲೆ ನನಗೂ ನೆಮ್ಮದಿಯಾಯಿತು. ನಾಳೆಯಿಂದಲೇ ನಮ್ಮ ಕಾರ್ಯಾರಂಭಕ್ಕೆ ತೊಡಗೋಣ."

"ಹಾಗೇ ಮಾಡೋಣ. ನಿನ್ನ ಮಾತಿಗೆ ಎದುರುಂಟೇ ? ಹೇಳು."

ಪುರುಷೋತ್ತಮನು ರಾತ್ರಿ ಬಹಳ ವೇಳೆಯಾದ್ದರಿಂದ ರಾಮನಾಥನನ್ನು ತನ್ನ ಮನೆಯಲ್ಲಿಯೇ ಮಲಗಿಕೊಳ್ಳುವಂತೆ ಹೇಳಿದನು ಪತ್ತೇದಾರರಿಬ್ಬರೂ ತಮ್ಮ ತಮ್ಮ ಹಾಸಿಗೆಗಳ ಮೇಲೆ ಮಲಗಿಕೊಂಡು ನಿದ್ರಾದೇವಿಯನ್ನು ಆಲಂಗಿಸಿ ಕೊಂಡರು.

## ೧೮

ಪುರುಷೋತ್ತಮನ ಸಲಹೆಯಂತೆ ಅವರಿಬ್ಬರು ತಮ್ಮತಮ್ಮ ಕಾರ್ಯಗಳಲ್ಲಿ ನಿರತರಾದರು.

ಎರಡು ದಿನಗಳುರುಳಿದುವು.

ಜನಗನ್ನಾಥನು ದಿನಕ್ಕೆ ಎರಡು ಸಾರಿಯಾದರೂ ಬೀರ್‌ಷಾಪಿಗೆ ಹೋಗದೆ ಇರುತ್ತಿರಲಿಲ್ಲ.

ಅವನ ವರ್ತನೆಯನ್ನು ನೋಡಿದ ರಾಮನಾಥನು ಎರಡು ದಿನಗಳಲ್ಲಿಯೇ ಬೇಸರದಿಂದ ಜುಗುಪ್ಸೆಗೊಂಡನು.

ಬೆಳಿಗ್ಗೆ ಜಗನ್ನಾಥನು ಮನೆಯಿಂದ ಹೊರಡುವ ಮೊದಲೇ ಅವನ ಮನೆಯ ಬಳಿಗೆ ಬಂದು ಅವನು ಮನೆಬಿಟ್ಟು ಹೊರಟಲಾಗಾಯ್ತು ರಾತ್ರಿ ಮನೆಗೆ ಬಂದು ಸೇರುವವರೆವಿಗೂ ಜಗನ್ನಾಥನ ಹಿಂದೆಯೇ ಇರುತ್ತಿದ್ದನು.

ಮೂರನೆಯ ದಿನ ಜಗನ್ನಾಥನು ಟಪಾಲು ಕಛೇರಿಗೆ ಹೋಗಿ ನಾಲ್ಕು ಕವರುಗಳನ್ನು ತೆಗೆದುಕೊಂಡು ಬಂದನು.

ರಾಮನಾಥನಿಗೆ ಸೋಜಿಗವಾಯಿತು.

ಜಗನ್ನಾಥನು ತನ್ನ ಪ್ರೆಸ್ಸಿಗೆ ಹೋಗಿ ಆಫೀಸ್ ರೂಮಿನಲ್ಲಿ ಕುಳಿತುಕೊಂಡು ಕಾಗದಗಳನ್ನು ಬರೆದನು.

ಗಿರಾಕಿಗಳು ಒಬ್ಬಿಬ್ಬರು ಪ್ರೆಸ್ಸಿನೊಳಗೆ ಹೋಗಿ ಬಂದರು.

ರಾಮನಾಥನೂ ಸಹ ಅವರಂತೆಯೇ ಒಳಗೆ ಹೋಗಿ ಜಗನ್ನಾಥನು ಕಾಗದ ಬರೆಯುತ್ತಿರುವುದನ್ನು ನೋಡಿ ಹಿಂದಿರುಗಿದನು.

ಜಗನ್ನಾಥನು ಅರ್ಧಘಂಟೆಯನಂತರ ಹೊರಗೆ ಬಂದನು.

ರಾಮನಾಥನು ಅವನನ್ನು ಹಿಂಬಾಲಿಸಿದನು.

ಜಗನ್ನಾಥನು ಟಪಾಲು ಕಛೇರಿಗೆ ಹೋಗಿ ಕವರುಗಳನ್ನು ಹಾಕಿ ತನ್ನ ಮನೆಗೆ ಹಿಂದಿರುಗಿದನು.

ರಾಮನಾಥನ ಸಂದೇಹವು ಬಲವಾಯಿತು.

'ಬಾಲಕೃಷ್ಣನಿಗೆ ಕಾಗದ ಬರೆಯುತ್ತಿದ್ದವನು ಈತನೇ ಎಂಬುದರಲ್ಲಿ ಸಂದೇಹವಿಲ್ಲ.' ಎಂದು ಭಾವಿಸಿಕೊಂಡನು.

ರಾತ್ರಿಯಾಗುವವರೆವಿಗೂ ಅವನ ಹಿಂದೆಯೇ ಇದ್ದು ಆತನು ತನ್ನ ಮನೆಗೆ ಹೋದನಂತರ ಪುರುಷೋತ್ತಮನಲ್ಲಿಗೆ ಬಂದನು.

ಪುರುಷೋತ್ತಮನು ಆಗ ತಾನೆ ಬಂದಿದ್ದನು.

ರಾಮನಾಥನು ಆತನೊಡನೆ ಜಗನ್ನಾಥನ ವಿಷಯವನ್ನು ಹೇಳಿದನು.

ಪುರುಷೋತ್ತಮನು ಸಹಜವಾಗಿಯೇ—

"ಹಾಗೊಂದುವೇಳೆ ಬಾಲಕೃಷ್ಣನಿಗೇ ಬರೆದಿದ್ದರೆ ನಾಳೆಯ ದಿನ ತಿಳಿಯುತ್ತದೆ." ಎಂದು ಹೇಳಿದನು.

"ನೀನು ಈಗ ಹೋಗುವುದಿಲ್ಲವೇ ?"

"ಎಲ್ಲಿಗೆ ?"

"ಬಾಲಕೃಷ್ಣನನ್ನು ಹಿಂಬಾಲಿಸಲು ?"

"ಈ ರಾತ್ರಿಯಲ್ಲಿ ಏನು ಕೆಲಸವಿದೆ ?"

"ಹಣ ತೆಗೆದುಕೊಂಡು ಹೋಗಿ ಕೊಡುವುದು ರಾತ್ರಿಯಲ್ಲಲ್ಲದೆ ಹಗಲು ವೇಳೆಯಲ್ಲೆಂದು ತೀರ್ಮಾನಿಸಿಕೊಂಡೆಯಾ."

"ಕಾಗದ ಬಂದ ಮೇಲಲ್ಲವೇ ? ಆತನು ಹಣ ತೆಗೆದುಕೊಂಡು ಹೋಗುವುದು ?"

"ಅದು ನಿಜ, ಆದರೇ ! ಈ ದಿನ ಕಾಗದ ಬಂದಿಲ್ಲವೆಂದು ಹೇಗೆ ಹೇಳುವೆ ?"

"ಟಪಾಲಿನವನು ಬಂದು ಹೋಗುವುದನ್ನು ಪರೀಕ್ಷಿಸುತ್ತಿರುವುದರಿಂದ ನನಗೆ ತಿಳಿಯುವುದಿಲ್ಲವೇ ? ನಾನು ಬಾಲಕೃಷ್ಣನನ್ನು ಹಿಂಬಾಲಿಸಿರುವಾಗ ಟಪಾಲಿನವನು ಆತನಿಗೆ ಎಲ್ಲಿ ಕಾಗದವನ್ನಿತ್ತರೂ ಸರಿ ! ನನಗೆ ತಿಳಿಯದಿರುವುದಿಲ್ಲ."

"ಸರಿ ! ಸರಿ !! ತಿಳಿಯಿತು. ಆತನಿಗೆ ಈವರೆವಿಗೆ ಒಂದು ಕಾಗದವೂ ಬಂದಿಲ್ಲವೇ ?"

"ಇಲ್ಲಾ ! ಒಂದು ವೇಳೆ ಬಂದರೂ ಆತನೇ ಬರೆದುದೆಂದು ಹೇಳಲು ಸಾಧ್ಯವಿಲ್ಲ. ಆದರೇ ! ಆ ದಿನ ರಾತ್ರಿಯೆಲ್ಲಾ ನಾವು ಆತನ ಬಂಗಲೆಯ ಬಳಿಯಲ್ಲಿ ಕಾಯಬೇಕಾಗುತ್ತದೆ."

"ಹೌದು."

ರಾಮನಾಥನಿಗೆ ಎಂದಿನಂತೆಯೇ ಜಗನ್ನಾಥನನ್ನು ಕಾಯುತ್ತಿರಬೇಕೆಂದು ಪುರುಷೋತ್ತಮನು ಹೇಳಲು ಆತನು ಆಗಲೆಂದು ತಲೆಯಾಡಿಸಿ ಹಿಂದಿರುಗಿದನು.

ಮಾರನೆಯ ದಿನ ಎಂದಿನಂತೆ ಪುರುಷೋತ್ತಮನು ಬಾಲಕೃಷ್ಣನ ಬಂಗಲೆಯ ಬಳಿಯಲ್ಲಿ ವೇಷಾಂತರದಿಂದ ಕಾಯುತ್ತಿದ್ದನು.

ದಿನಕ್ಕೊಂದು ನಮೂನೆಯ ವೇಷವನ್ನು ಧರಿಸಿಕೊಳ್ಳುತ್ತಲಿದ್ದುದರಿಂದ ಆತನನ್ನು ಅಲ್ಲಿದ್ದವರಾರೂ ಗುರುತಿಸಲಾಗಲಿಲ್ಲ.

ಸೇವಕನು ತನ್ನ ಕಾರ್ಯದಲ್ಲಿಯೇ ನಿರತನಾಗಿದ್ದನು. ಹೊರಗಡೆಯ ಸಾಮಾನು ಬೇಕಾಗಿದ್ದರೆ ಆತನೇ ತಂದು ಕೊಡುತ್ತಿದ್ದನು.

ಒಂದೊಂದು ಸಾರಿ ಅಡಿಗೆಯ ರಂಗಮ್ಮನು ಹೊರಗೆ ಬರುತ್ತಿದ್ದಳು. ಆಕೆಯ ವೇಷ ಭೂಷಣವನ್ನು ನೋಡಿ ಸೇವಕಳೆಂದು ಸಂದೇಹವಿಲ್ಲದೆ ಹೇಳಬಹುದಿತ್ತು.

ರಾಜೇಶ್ವರಿಯು ಬಂಗಲೆಯಿಂದ ಹೊರಗಡೆಯೇ ಬರುತ್ತಿರಲಿಲ್ಲ. ಪುರುಷೋತ್ತಮನು ಆಕೆಯನ್ನು ನೋಡುವುದೇ ಅಸಾಧ್ಯವಾಗಿತ್ತು.

ಅದರಂತೆಯೇ ರಾಮನಾಥನು ಸರಸ್ವತಿಯನ್ನು ನೋಡಲು ಶ್ರಮವಹಿಸಬೇಕಾಗಿರಲಿಲ್ಲ.

ದಿನಕ್ಕೆ ನಾಲ್ಕಾರು ಸಾರಿಯಾದರೂ ಆಕೆಯು ಮನೆಯಿಂದ ಹೊರಗೆ ಬಾರದಿರುತ್ತಿರಲಿಲ್ಲ.

ಮನೆಗೆಲಸಕ್ಕೆ ಒಬ್ಬ ಮುದುಕಿಯನ್ನು ಮಾತ್ರ ಇಟ್ಟುಕೊಂಡಿದ್ದಳು. ಆ ಮುದುಕಿಯು ಬೆಳಿಗ್ಗೆ ಮತ್ತು ಸಾಯಂಕಾಲ ಇಲ್ಲಿಗೆ ಬಂದು ಅವಳು ಹೇಳುವ ಕೆಲಸವನ್ನು ಮಾಡಿ ಹಿಂದಿರುಗುತ್ತಿದ್ದಳು.

ಸರಸ್ವತಿಗೆ ಗೆಳತಿಯರೂ ವಿಶೇಷವಾಗಿದ್ದರು. ಅವರು ಆಗಾಗ್ಗೆ ಅವಳ ಮನೆಗೆ ಬಂದು ಹೋಗುತ್ತಿದ್ದರು. ಸರಸ್ವತಿಯೂ ಸಹ ಅವರ ಮನೆಗೆ ಹೋಗಿ ಬರುತ್ತಿದ್ದಳು.

ಆದರೇ! ರಾಜೇಶ್ವರಿಯು ಯಾರ ಮನೆಗೂ ಹೋಗುತ್ತಿರಲಿಲ್ಲ. ಆಕೆ ಯನ್ನು ನೋಡಲು ಪಕ್ಕದ ಮನೆ ಶ್ರೀಕಂಠರಾಯನ ಪತ್ನಿಯಾದ ನರ್ಮದೆಯು ದಿನಕ್ಕೆ ಎರಡು ಸಾರಿಯಾದರೂ ಬಂದು ಹೋಗುತ್ತಿದ್ದಳು.

ಶ್ರೀಕಂಠರಾಯನು ತಾಲ್ಲೂಕ್ ಆಫೀಸಿನಲ್ಲಿ ಕ್ಲಾರ್ಕ್ ಆಗಿದ್ದನು. ನರ್ಮ ದೆಯು ಪತಿಯನ್ನು ತನ್ನ ಕೈ ಗೊಂಬೆಯನ್ನಾಗಿ ಮಾಡಿಕೊಂಡಿದ್ದಳು. ಆಕೆಗೆ ಶ್ರೀಕಂಠರಾಯನು ಒಂದು ದಿನವೂ ಎದುರು ವಾದಿಸಿರಲಿಲ್ಲ. ಒಂದು ವೇಳೆ ವಾದಿಸಿದರೆ ಬದುಕುವ ಹಾಗೆಯೂ ಇರಲಿಲ್ಲ.

ತಿಂಗಳ ಸಂಬಳ ಬರುವ ದಿನ ಆ ವೇಳೆಗೆ ಸರಿಯಾಗಿ ನರ್ಮದೆಯು ಆಫೀಸಿನ ಬಳಿಯಲ್ಲಿ ಹಾಜರಾಗಿರುತ್ತಿದ್ದಳು.

ಸಂಬಳ ತೆಗೆದುಕೊಂಡು ಹೊರಗೆ ಬಂದ ಶ್ರೀಕಂಠರಾಯನು ಅಲ್ಲಿಯೇ ತನ್ನ ಪತ್ನಿಯ ಕೈಗೆ ಸಂಬಳದ ಹಣವನ್ನೆಲ್ಲಾ ಕೊಟ್ಟು ಸಪ್ಪೆಮೋರೆಯಿಂದ ಆಕೆಯ ಹಿಂದೆ ಹೋಗುತ್ತಿದ್ದನು.

ಅವನ ಸ್ನೇಹಿತರೆಲ್ಲರೂ ವಿನೋದವಾಗಿ ಮಾತನಾಡುತ್ತಾ ಒಬ್ಬರ ಹೆಗಲ ಮೇಲೊಬ್ಬರು ಕೈಹಾಕಿಕೊಂಡು ಹೋಟೆಲಿಗೆ ಹೋಗುವುದನ್ನು ನೋಡಿ ಶ್ರೀಕಂಠ ರಾಯನ ಹೊಟ್ಟೆಯೆಲ್ಲಾ ಉರಿದು ಹೋಗುತ್ತಿತ್ತು. ತನ್ನ ಸಂಕಟವನ್ನು ತಾನೇ ನುಂಗಿಕೊಳ್ಳುತ್ತಿದ್ದನು.

ತನಗೆ ಸಿಗರೇಟು, ಬೆಂಕಿಪಟ್ಟಣ ಬೇಕಾದರೂ ಸಹ ಪತ್ನಿಯ ಬಳಿಯಲ್ಲಿ ಹಲ್ಲು ಗಿಂಜಬೇಕಿತ್ತು.

ನಾಟಕ, ಸಿನಿಮಾಗಳಿಗೆ ಹೋಗಬೇಕೆಂದು ತನ್ನ ಪತ್ನಿಯ ಬಳಿಯಲ್ಲಿ ಹಣ ಕೇಳಿದರೆ ನರ್ಮದೆಯು ಪತಿಯು ಕೈಗೆ ಹಣ ಕೊಡದೆ ತಾನೂ ಆತನ ಜೊತೆಯಲ್ಲಿ ಸಿನಿಮಾ, ನಾಟಕಗಳಿಗೆ ಹೋಗಿ ಬರುತ್ತಿದ್ದಳು.

ಪುರುಷೋತ್ತಮನು ನರ್ಮದೆಯು ಬಂದು ಹೋಗುವುದನ್ನು ನೋಡುತ್ತಿದ್ದ ನಾದರೂ ಆಕೆಯುಮೇಲೆ ಸಂದೇಹ ಪಡಲು ಅವಕಾಶವಾಗಲಿಲ್ಲ.

ನಾಲ್ಕನೆಯ ದಿನ ಪುರುಷೋತ್ತಮನು ಎಂದಿನಂತೆ ಬಾಲಕೃಷ್ಣನ ಬಂಗಲೆಯಬಳಿ ಕಾಯುತ್ತಿರಲು ಟಪಾಲಿನವನು ಆತನ ಬಂಗಲೆಯೊಳಗೆ ಪ್ರವೇಶಿಸಿ ಬಾಲಕೃಷ್ಣನಿಗೆ ಕಾಗದವನ್ನಿತ್ತು ಹಿಂದಿರುಗಿದನು.

ಟಪಾಲಿನವನನ್ನು ನೋಡುತ್ತಲೇ ಪುರುಷೋತ್ತಮನಿಗೆ ಸಂದೇಹವುಂಟಾಗಿ, ಹಿಂದಿನ ದಿನ ರಾಮನಾಥನು ಜಗನ್ನಾಥನ ವಿಷಯದಲ್ಲಿ ಹೇಳಿದ್ದು ನೆನಪಿಗೆ ಬಂದಿತು.

ಈ ದಿನ ರಾತ್ರಿಯೆಲ್ಲಾ ತಾನು ಅವನನ್ನು ಕಾಯಬೇಕಾಗುವುದೆಂದು ಭಾವಿಸಿಕೊಂಡನು.

ಮೊದಲೇ ಸಿದ್ಧನಾಗಿದ್ದುದರಿಂದ ತನ್ನ ಮನೆಗೆ ಹೋಗಬೇಕಾದ ಸ್ಥಿತಿಯೇನೂ ಇರಲಿಲ್ಲ.

ಈ ದಿನ ಆತನಾರೆಂಬುದು ತಿಳಿಯುತ್ತದೆಂಬ ಭಾವನೆಯು ಪುರುಷೋತ್ತಮನ ಮನದಲ್ಲಿತ್ತು.

ಇತ್ತ ಬಾಲಕೃಷ್ಣನು ಕವರನ್ನು ನೋಡುತ್ತಲೇ ದಿಗ್ಭ್ರಾಂತನಾದನು. ಮತ್ತೆ ಗ್ರಹಚಾರವು ವಕ್ರಿಸಿತೆಂದುಕೊಂಡನು.

ಕವರನ್ನು ಹರಿದು ಒಳಗಡೆಯ ಕಾಗದವನ್ನು ತೆಗೆದು ನೋಡಲು ಅದರಲ್ಲಿ ಈ ರೀತಿ ಬರೆದಿತ್ತು.

'ಬಾಲಕೃಷ್ಣಾ! ಪತ್ತೇದಾರ ಪುರುಷೋತ್ತಮನಲ್ಲಿಗೆ ಹೋದರೆ ನನ್ನನ್ನು ಸುಲಭವಾಗಿ ಹಿಡಿಯಬಹುದೆಂದು ಭಾವಿಸಿಕೊಂಡಿದ್ದೆಯಲ್ಲವೇ? ಅಂತಹ ನೂರು ಜನ ಪತ್ತೇದಾದರರು ಬಂದರೂ ನನ್ನನ್ನು ಹಿಡಿಯಲಾರರು. ನಿನ್ನ ಮೇಲ್ಮೆಯನ್ನು ಬಯಸಿ ನಾನು ಹಣವನ್ನು ಮಾತ್ರ ಕೇಳಿದ್ದಕ್ಕೆ ನೀನು ಪುರುಷೋತ್ತಮನಲ್ಲಿಗೆ ಹೋಗಿದ್ದೆ. ಆ ವಿಷಯವನ್ನು ನಾನು ತಿಳಿಯಲಾರೆನೆಂದು ಭಾವಿಸಿದ್ದೆಯಲ್ಲವೇ? ಅವರನ್ನು ಯಾವರೀತಿ ಮೋಸಗೊಳಿಸಿರುವೆನೆಂದು ನೋಡಿದೆಯಾ? ನಾನು ನಿನ್ನ ಅಪರಾಧದ ಘಟನೆಯನ್ನು ಅವರಲ್ಲಿ ತಿಳುಹಿಸಿದರೆ ನೀನು ಶ್ರೀ ಕೃಷ್ಣ ಜನ್ಮಸ್ಥಾನವನ್ನು ಸೇರುವೆ. ಆದರೇ! ನನ್ನ ಕಾರ್ಯಸಾಧನೆಯಾಗುವವರೆವಿಗೂ ಅದನ್ನು ತಿಳಿಸುವುದಿಲ್ಲ. ಈಗ ನೀನು ಪತ್ತೇದಾರರಲ್ಲಿ ತಿಳಿಸಿದ ತಪ್ಪಿಗಾಗಿ ಐದುಸಾವಿರ ರೂಪಾಯಿಗಳನ್ನು ಹೆಚ್ಚಿಗೆ ಕೊಡಬೇಕು. ಹದಿನೈದುಸಾವಿರ ರೂಪಾಯಿಗಳು

ಯಾವಾಗ ಬೇಕೆಂಬುದನ್ನೂ, ಮತ್ತು ಆಗ ನಡೆದುಕೊಳ್ಳಬೇಕಾದ ಕಾನೂನು, ಕರ್ತ್ಯಳಿಗಳನ್ನೂ ಮುಂದಿನ ಕಾಗದದಲ್ಲಿ ತಿಳುಹಿಸುವೆನು. ನೀನು ಈ ಕಾಗದವನ್ನು ಪುರುಷೋತ್ತಮನಲ್ಲಿಗೆ ತೆಗೆದುಕೊಂಡು ಹೋಗಿ ಕೊಟ್ಟೆ ಯಾದರೆ ನಿನಗೇ ತೊಂದರೆಯಲ್ಲದೆ ನನಗಲ್ಲ. ತಿಳಿದಿರು.'

'ಎಚ್ಚರಿಕೆ! ಎಚ್ಚರಿಕೆ!! ಎಚ್ಚರಿಕೆ!!!'

ಇತಿ ನಿನ್ನ
**'ಚಿರಪರಿಚಿತ.'**

ಕಾಗದವನ್ನು ಓದಿದ ಬಾಲಕೃಷ್ಣನು ಬೆದರಿ ಬೆಂಡಿನಂತಾದನು. ಪುರುಷೋತ್ತಮನಿಂದ ಮುಸುಕಿನ ವ್ಯಕ್ತಿಯನ್ನು ಹಿಡಿಯಲು ಸಾಧ್ಯವಾಗುವುದೋ, ಇಲ್ಲವೋ ಎಂಬ ಸಂದೇಹವು ಉಂಟಾಯಿತು.

ಮುಂದೆ ಕಾಗದ ಬಂದರೆ ತನಗೆ ತಿಳಿಸದೆ ಹಣ ತೆಗೆದುಕೊಂಡು ಹೋಗಿ ಕೊಟ್ಟು ಬರುವಂತೆ ಪುರುಷೋತ್ತಮನು ಹೇಳಿದ್ದುದರಿಂದ ಅವನಲ್ಲಿಗೆ ಹೋಗಿ ಈ ವಿಷಯವನ್ನು ತಿಳಿಸಬೇಕಾದ ಪ್ರಮೇಯವಿಲ್ಲವೆಂದು ಅವನು ತೀರ್ಮಾನಿಸಿಕೊಂಡನು.

ಮುಂದಿನ ಕಾಗದವು ಬರುವುದರೊಳಗಾಗಿಯೇ ಪುರುಷೋತ್ತಮನನ್ನು ಯಾವರೀತಿಯಿಂದಲಾದರೂ ಸಂಧಿಸಿ ಆತನೊಡನೆ ಈ ವಿಷಯವನ್ನು ತಿಳಿಸದೆ ಬಿಡಬಾರದೆಂದುಕೊಂಡನು.

ಆ ದಿನವೆಲ್ಲಾ ಬಂಗಲೆಯಿಂದ ಹೊರಗೆ ಕಾಲಿಡಲಿಲ್ಲ.

ಪುರುಷೋತ್ತಮನು ಜಾಗರೂಕನಾಗಿ ಹೊರಗೆ ಕಾಯುತ್ತಲೇ ಇದ್ದನು.

ಹಗಲು ಕಳೆಯಿತು.

ಚಂದ್ರನು ಆಕಾಶದಲ್ಲಿ ಥಳಥಳಾಯಮಾನನಾಗಿ ಕಂಗೊಳಿಸಿದನು.

ರಾತ್ರಿಯೆಲ್ಲಾ ನಿದ್ದೆಗೆಡಬೇಕಾಗುವುದೆಂದು ಪುರುಷೋತ್ತಮನು ಭಾವಿಸಿಕೊಂಡನಲ್ಲದೆ ಈ ದಿನ ಕಾಗದ ಬರೆದವನನ್ನು ಹಿಡಿಯಬಹುದೆಂದುಕೊಂಡನು.

ಬಾಲಕೃಷ್ಣನು ಕಾರಿನಲ್ಲಿ ಹೊರಟ ಕೂಡಲೇ ತನ್ನ ಮನೆಗೆ ಹೋಗಿ ತನ್ನ ಕಾರಿನಲ್ಲಿ ಆತನನ್ನು ಹಿಂಬಾಲಿಸಬೇಕೆಂದು ತಿಳಿದಿದ್ದನು.

ಆದರೇ ! ಪುರುಷೋತ್ತಮನು ಊಹಿಸಿಕೊಂಡಂತೆ ನಡೆಯಲಿಲ್ಲ. ರಾತ್ರಿಯೆಲ್ಲಾ ನಿದ್ದೆಗೆಟ್ಟು ವೃಥಾ ಕಾಯಬೇಕಾಯಿತಲ್ಲದೆ ಅದರಿಂದ ಯಾವ ಪ್ರಯೋಜನವೂ ಕಾಣಲಿಲ್ಲ.

ರಾತ್ರಿಯೆಲ್ಲಾ ನಿದ್ದೆಗೆಟ್ಟು ಕಾದುದರಿಂದ ಪುರುಷೋತ್ತಮನ ಕಣ್ಣುಗಳು ಕೆಂಪುವರ್ಣವನ್ನು ತಾಳಿದ್ದುವು.

ಯಾರೋ ಬಾಲಕೃಷ್ಣನ ನೆಂಟರು ಬರೆದ ಕಾಗದವಿರಬೇಕೆಂದು ಪುರುಷೋತ್ತಮನು ಊಹೆ ಮಾಡಿಕೊಂಡನು.

ಟಪಾಲಿನ ಎರಡನೆ ಡೆಲಿವರಿಯಾಗುವವರೆವಿಗೂ ಅಲ್ಲಿಯೇ ಇದ್ದು ಅನಂತರ ತನ್ನ ಮನೆಗೆ ಹಿಂದಿರುಗಬೇಕೆಂದು ನಿರ್ಧರಿಸಿಕೊಂಡು ಅಲ್ಲಿಯೇ ಕಾಯುತ್ತಾ ಕುಳಿತನು.

ಟಪಾಲಿನವರು ಬಂದು ಹೊರಟು ಹೋದರು.

ಬಾಲಕೃಷ್ಣನ ಬಂಗಲೆಯೊಳಗೆ ಅವರಾರೂ ಪ್ರವೇಶಿಸಲಿಲ್ಲ.

ಈ ದಿನ ಬಾಲಕೃಷ್ಣನಿಗೆ ಯಾವ ಕಾಗದವೂ ಬಂದಿಲ್ಲವೆಂದು ಪುರುಷೋತ್ತಮನು ತಿಳಿದು ತನ್ನ ಮನೆಗೆ ಹಿಂದಿರುಗಲನುವಾದನು.

ಮಾರ್ಗದಲ್ಲಿ ನಾನಾವಿಧವಾದ ಯೋಚನೆಗಳುದ್ಭವಿಸಿದರೂ ಯಾವುದನ್ನೂ ತಲೆಗೆ ಹಚ್ಚಿಕೊಳ್ಳಲಿಲ್ಲ.

ರಾತ್ರಿಯೆಲ್ಲಾ ನಿದ್ದೆಗೆಟ್ಟುದುದರಿಂದಲೂ, ಬೆಳಗ್ಗೆಯಿಂದ ಆಹಾರವಿಲ್ಲದೆ ಇದ್ದುದರಿಂದಲೂ ಪುರುಷೋತ್ತಮನು ವಿಶೇಷವಾಗಿ ಬಳಲಿ ಹೋಗಿದ್ದುದರಿಂದ ಎಂದಿಗೆ ತನ್ನ ಮನೆಯನ್ನು ಸೇರುವೆನು ಎಂದು ತವಕ ಪಡುತ್ತಿದ್ದನು.

## ೧೯

ಪುರುಷೋತ್ತಮನು ತನ್ನ ಮನೆಗೆ ಬರುತ್ತಲೇ ಆತನ ಪತ್ನಿಯು ಕವರನ್ನು ಆತನ ಕೈಗೆ ಕೊಟ್ಟು ಹಿಂದಿನ ದಿನ ಬಂದಿತೆಂದು ಹೇಳಿದಳು.

ಪುರುಷೋತ್ತಮನಿಗೆ ಊಟ, ಉಪಚಾರಗಳೇನೂ ಬೇಕಿರಲಿಲ್ಲ. ಮೊದಲು ನಿದ್ದೆಯು ಬೇಕಿತ್ತು.

ಆತನ ಪತ್ನಿಯು ಕವರನ್ನು ಕೈಗೆ ಕೊಡುತ್ತಲೇ ಟಪಾಲು ಮುದ್ರೆಯನ್ನು ನೋಡಿದನು ಅದು ಕಾಂಚೀನಗರದಿಂದಲೇ ಬಂದುದಾಗಿತ್ತು.

ಅದನ್ನು ನೋಡುತ್ತಲೇ ಅವನ ನಿದ್ದೆ, ಆಯಾಸವೆಲ್ಲಾ ಆ ಒಂದು ಕ್ಷಣ ದಲ್ಲಿ ಮಾಯವಾಯಿತು.

ಜಗನ್ನಾಥನು ನಗರದ ಯಾವ ಬಡಾವಣೆಯಲ್ಲಿ ಕವರನ್ನು ಹಾಕಿದ್ದನೋ, ಆ ಬಡಾವಣೆಯ ಟಪಾಲ್ ಕಛೇರಿಯ ಸೀಲು ಬಿದ್ದಿತ್ತು.

'ಜಗನ್ನಾಥನೇ ಕಾಗದ ಬರೆದಿರಬಹುದೇ ?........ಇದ್ದರೂ ಇರಬಹುದು. ಬಾಲಕೃಷ್ಣನು ದೊಡ್ಡ ಅಪರಾಧವನ್ನು ಮಾಡಿರುವನು. ಆ ವಿಷಯವು ಸರ್ಕಾರದವರಿಗೆ ತಿಳಿದಿರಲಾರದು. ಜಗನ್ನಾಥನಿಗೆ ತಿಳಿದಿರಬಹುದು. ತಾನು ಬಾಲಕೃಷ್ಣನ ಭಾವಮೈದುನನಾದುದರಿಂದ ಬಹಿರಂಗವಾಗಿ ಮಾತನಾಡಲು ಅವಕಾಶವಿಲ್ಲದೆ ಈ ರೀತಿ ಹಣ ಕಸಿಯಲು ಏರ್ಪಾಡು ಮಾಡಿಕೊಂಡಿರುವನು. ನೆನ್ನೆಯ ದಿನ ಬಾಲಕೃಷ್ಣನಿಗೆ ಬಂದ ಕಾಗದವೂ ಈತನೇ ಬರೆದುದಿರಬಹುದು. ಮುಂದೆ ಹಣ ಬೇಕೆನ್ನುವ ಬಗ್ಗೆ ಎಚ್ಚರಿಕೆ ಕೊಟ್ಟಿರಬಹುದು. ಈಗ ಈ ಕಾಗದದಲ್ಲಿ ಏನು ವಿಷಯವನ್ನು ಬರೆದಿದೆಯೋ ನೋಡುವೆನು' ಎಂದು

ಯೋಚಿಸಿ ಕವರನ್ನು ಹರಿದು ಒಳಗಡೆಯಿದ್ದ ಕಾಗದವನ್ನು ತೆಗೆದು ನೋಡಲು ಅದರಲ್ಲಿ ಈ ರೀತಿ ಬರೆದಿತ್ತು.

'ಪುರುಷೋತ್ತಮ ! ನೀನು ಪ್ರಖ್ಯಾತ ಪತ್ತೇದಾರನಾಗಿರಬಹುದು. ನೂರಾರು ಜನ ದರೋಡೆಕೋರರು, ಕಳ್ಳ, ಕೊಲೆಗಾರರನ್ನು ಸೆರೆ ಹಿಡಿದು ಕೀರ್ತಿ ಗಳಿಸಿರಬಹುದು. ಗಳಿಸಿಯೂ ಇರುವೆ. ಮೇಲಾಗಿ ಒಂದು ಕೊಲೆ ಮೊಕದ್ದಮೆಯಲ್ಲಿ * ಇಂಗ್ಲೇಂಡಿಗೂ ಹೋಗಿ ಬಂದಿರುವೆ. ಆದರೇ ! ನೀನು ನನ್ನನ್ನು ಹಿಡಿಯುವ ಸಾಹಸಕ್ಕೆ ಕೈ ಹಾಕಬೇಡ. ಈಗ ಪ್ರಯತ್ನಿಸಿ ದುದೇ ಸಾಕು. ಮುಂದಿನ ಕಾರ್ಯಕ್ಕೆ ಹೋಗದೆ ಇಲ್ಲಿಗೇ ನಿನ್ನ ಕಾರ್ಯ ಕಲಾಪಗಳನ್ನು ಸಾಕುಮಾಡು. ಒಂದು ವೇಳೆ ಹಾಗೂ ಮುಂದುವರಿದೆ ಯಾದರೆ ನಿನಗೆ ಪ್ರಾಣಾಪಾಯವು ಖಂಡಿತಾ. ತಿಳಿದಿರು. ನೀನು ಯುಕ್ತಿ, ಚತುರತೆಗಳಲ್ಲಿ ಮೇಲಾದವನಾಗಿರಬಹುದು. ಆದರೇ ! ಅದಾವುದೂ ನನ್ನ ಬಳಿಯಲ್ಲಿ ನಡೆಯಲಾರದು. ನಿನ್ನನ್ನು ಯಾವ ರೀತಿ ಮೋಸ ಗೊಳಿಸಿದೆನೆಂದು ನೋಡಿಯೇ ಇರುವೆ. ಇನ್ನು ಮುಂದೆ ಆ ರೀತಿ ಮಾಡಲಾರೆ. ನನ್ನ ಪಿಸ್ತೂಲಿಗೇ ಬಲಿಕೊಡುವೆನು. ಆದ್ದರಿಂದ ಇನ್ನು ಮುಂದೆ ನನ್ನ ಸಹವಾಸದಿಂದ ದೂರಾ ಇರು.'

'ನಿನ್ನ ಮಿತ್ರನು ಮಹಾ ಬಲಶಾಲಿಯಾಗಿರಬಹುದು. ವೀರಾದಿ ವೀರ ರೊಡನೆ ಹೋರಾಡಿರಬಹುದು. ಆದರೇ ! ಅವನ ಆಟವೂ ನನ್ನ ಬಳಿ ಯಲ್ಲಿ ನಡೆಯಲಾರದು. ಇದನ್ನು ಆತನಿಗೆ ತಿಳುಹಿಸು. ನಿಮಗೆ ಜೀವದ ಮೇಲೆ ಆಸೆಯಿಲ್ಲದೆ ಇದ್ದರೆ ನಾನಾರು ? ಎಲ್ಲಿರುವೆನು ? ಏಕೆ ಡಾಕ್ಟರನಿಗೆ ಕಾಗದ ಬರೆದೆನು ? ಎಂಬುದನ್ನು ಪತ್ತೇಮಾಡಿ ಹಿಡಿಯಲು ಪ್ರಯತ್ನಿಸಿ. ಮೊದಲು ನಿನ್ನ ಗೆಳೆಯನನ್ನು ಕೊಂದು ಬಳಿಕ ನಿನಗೆ ಎಚ್ಚರಿಕೆ ಕೊಡು ವೆನು. ನೀನು ಅಲ್ಲಿಗೇ ತಟಸ್ಥನಾದರೆ ಉಳಿಯುವೆ. ಇಲ್ಲದೆ ಹೋದರೆ ನಿನಗೂ ಸಾವು ಖಂಡಿತಾ. ತಿಳಿದಿರು. ನಾನು ಹಾಸ್ಯಕ್ಕಾಗಿ ಬರೆದಿರುವೆ ನೆಂದು ಭಾವಿಸಬೇಡ. ನಾನು ಸದಾ ನಿನ್ನ ಕಾರ್ಯಕಲಾಪಗಳ ಮೇಲೆಯೇ ಕಣ್ಣಿಟ್ಟಿರುವೆನು. ಇನ್ನು ನಿನಗೆ ಹೆಚ್ಚು ಬರೆಯಬೇಕಾಗದ ಕಾರಣವಿಲ್ಲ.

ಇತಿ ನಿನ್ನ

? ? ? ?

---

* ಕಾಸಿಗಾಗಿ ಕೊಲೆಯೇ......?-ಪುರುಷೋತ್ತಮನ ಹತ್ತೊಂಭತ್ತನೆಯ ಸಾಹಸ.

ಕಾಗದವನ್ನು ಓದಿ ಪುರುಷೋತ್ತಮನು ನಸುನಕ್ಕನು. ಇಂತಹ ಬೆದರಿಕೆಯ ಪತ್ರಗಳು ಅವನಿಗೆ ನೂರಾರು ಬಂದಿದ್ದುವು. ಅಂತಹ ಕಾಗದಗಳನ್ನೆಲ್ಲಾ ಕಸದ ಬುಟ್ಟಿಗೆ ಹಾಕಿದ್ದನು.

ತನ್ನ ಸರಿಸಮಾನ, ಅದಕ್ಕಿಂತಲೂ ಹೆಚ್ಚಿನ ಯುಕ್ತಿ, ಚತುರತೆಯುಳ್ಳವರು ಚೋರ, ಕೊಲೆಗಾರರಾದರೆ ಪುರುಷೋತ್ತಮನು ಅಂತಹವರನ್ನು ಹಿಡಿಯಲು ಹರ್ಷ ಪಡುತ್ತಿದ್ದನಲ್ಲದೆ ಹಿಂಜರಿಯುತ್ತಿರಲಿಲ್ಲ.

ಜಗನ್ನಾಥನ ವಿಷಯದಲ್ಲಿಯೇ ಸಂದೇಹವುಂಟಾಗಿದ್ದರೂ, ಅವನೇ ಅಪರಾಧಿಯೆಂದು ತೀರ್ಮಾನಿಸಲು ಸಾಕಾದಷ್ಟು ಕಾರಣಗಳು ದೊರೆತಿರಲಿಲ್ಲ.

ಕಾಗದವನ್ನು ಓದಿ ಮುಗಿಸಿದನಂತರ ಅವನ ದೇಹಕ್ಕೆ ವಿಶ್ರಾಂತಿ ಬೇಕಾಯಿತು.

ಬಾಲಕೃಷ್ಣನನ್ನು ಕಂಡು ವಿಷಯವನ್ನು ತಿಳಿಯಬೇಕೆಂದು ಬಯಸಿ ಹಾಗೇ ಮಂಚದ ಮೇಲೆ ಮಲಗಿಕೊಂಡನು.

ಹಿಂದಿನ ದಿನ ನಿದ್ದೆಯಿಲ್ಲದ ಪ್ರಯುಕ್ತ, ಹಸಿವೆಯಿದ್ದರೂ ನಿದ್ದೆಯು ಬಂದಿತು.

ಎಚ್ಚರಿಕೆಯಾದಾಗ ಕಣ್ಣು ಬಿಟ್ಟು ನೋಡಲು ರಾತ್ರಿ ಒಂಭತ್ತು ಘಂಟೆಯಾಗಿತ್ತು.

ಎದ್ದು ಕುಳಿತುಕೊಳ್ಳುತ್ತಲೇ ಆತನ ಪತ್ನಿಯು ಕಾಫಿಯನ್ನು ತಂದಿತ್ತಳು.

ಕಾಫಿಯನ್ನು ಕುಡಿದು ಹಾಗೇ ಯೋಚನಾಕ್ರಾಂತನಾಗಿರಲು ರಾಮನಾಥನು ಆಗಮಿಸಿದನು.

ಪುರುಷೋತ್ತಮನು ಆತನೊಡನೆ, ಬಾಲಕೃಷ್ಣನ ಬಂಗಲೆಯೊಳಗೆ ಟಪಾಲಿನವನು ಹೋದಲಾಗಾಯ್ತು ಅದುವರೆವಿಗೆ ನಡೆದುದನ್ನೆಲ್ಲಾ ಹೇಳಲು ರಾಮನಾಥನು ವಿಸ್ಮಿತನಾದನು. ಕೋಪವೂ ಉಂಟಾಯಿತು.

ಐದು ನಿಮಿಷ ಮೌನವಾಗಿದ್ದು ಬಳಿಕ—

"ಮಿತ್ರಾ! ಜಗನ್ನಾಥನೇ ಅಪರಾಧಿ ಎಂಬುದರಲ್ಲಿ ಸಂದೇಹವಿಲ್ಲ." ಎಂದು ಹೇಳಿದನು.

"ನಾನೂ ಆ ವಿಷಯವಾಗಿಯೇ ಯೋಚಿಸುತ್ತಿರುವೆನು."

"ಯೋಚಿಸುವುದೇನಿದೆ? ಆತನು ಕವರು ತೆಗೆದುಕೊಂಡಿದುದನ್ನೂ, ಕಾಗದ ಬರೆದುದನ್ನೂ, ಟಪಾಲಿಗೆ ಹಾಕಿದುದನ್ನೂ ನಾನು ನೋಡಿರುವೆನು. ಹೀಗಿರುವಾಗ ಇನ್ನು ಯೋಚಿಸುವುದೇತಕ್ಕೆ?"

ಕೆಲಕಾಲ ಮೌನತಾಳಿ, ಪುರುಷೋತ್ತಮನು ಬಳಿಕ ಬಾಲಕೃಷ್ಣನಿಂದ ಪಡೆದಿದ್ದ ಎರಡು ಕಾಗದಗಳನ್ನು ಪೆಟ್ಟಿಗೆಯಿಂದ ತೆಗೆದು ಆ ಅಕ್ಷರಗಳನ್ನು ಹೋಲಿಸಿ ನೋಡಿದನು.

ಆ ಎರಡು ಕಾಗದಗಳ ಅಕ್ಷರಕ್ಕೂ, ಈ ಅಕ್ಷರಕ್ಕೂ ಅಜಗಜಾಂತರ ವ್ಯತ್ಯಾಸವಿತ್ತು.

ಆ ವ್ಯತ್ಯಾಸವನ್ನು ನೋಡಿ ಪತ್ತೇದಾರರಿಬ್ಬರೂ ಅತ್ಯಂತ ಸೋಜಿಗ ರಾಗಿ, ಬೆಪ್ಪು ಹಿಡಿದವರಂತೆ ಕುಳಿತುಕೊಂಡರು.

ಕೆಲವು ನಿಮಿಷಗಳು ಯಾರೊಬ್ಬರೂ ಮಾತನಾಡಲಿಲ್ಲ.

ಅನಂತರ ರಾಮನಾಥನು—

"ಮಿತ್ರಾ! ಈ ಮೂರು ಕಾಗದಗಳ ಅಕ್ಷರಗಳು ವ್ಯತ್ಯಾಸವಾಗಿರುವುದು ನಿಜ. ಆದರೇ! ಕಾಗದಗಳನ್ನು ಮೂರು ಜನರು ಬರೆದಿರಬಹುದು. ಕಳ್ಳನು ಒಬ್ಬನೇ ಇರಲಾರನು. ಹತ್ತಾರು ಜನರು ಸೇರಿಕೊಂಡಿರಬಹುದು. ಒಂದೊಂದು ಸಾರಿ ಒಬ್ಬೊಬ್ಬನು ಕಾಗದ ಬರೆಯಬಹುದು. ಅವರಿಗೆಲ್ಲಾ ಜಗನ್ನಾಥನು ಮುಖ್ಯಸ್ಥನಾಗಿರಬಹುದು." ಎಂದು ಹೇಳಿದನು.

ಪುರುಷೋತ್ತಮನು ನಕ್ಕು—

"ರಾಮನಾಥ! ಈ ಕಾರ್ಯಕ್ಕೆ ಹತ್ತಾರು ಜನರು ಸೇರಿಕೊಂಡಿಲ್ಲ. ಹಾಗೇನಾದರೂ ಸೇರಿಕೊಂಡಿದ್ದರೆ ಈ ವೇಳೆಗೆ ಒಬ್ಬಿಬ್ಬರು ನಮ್ಮ ಕೈಗೆ ಸಿಗುತ್ತಿದ್ದರು. ಈ ಕಾರ್ಯವು ಅತ್ಯಂತ ಗೂಡವಾದುದಾಗಿದೆ. ಒಬ್ಬನು, ತಪ್ಪಿದರೆ ಇಬ್ಬರ ಕೈವಾಡವಿರುವುದಲ್ಲದೆ ಹೆಚ್ಚು ಜನರು ಸೇರಿಲ್ಲವೆಂಮ ಹೇಳಬಲ್ಲೆನು. ಜಗನ್ನಾಥನ ಮೇಲೆ ಅಪರಾಧವನ್ನು ಹೊರಿಸಲು ಈ ವೇಳೆಯಲ್ಲಿ ಸಾಕಷ್ಟು ಆಧಾರಗಳು ದೊರಕಿಲ್ಲ." ಎಂದು ಹೇಳಿದನು.

"ಈಗ ದೊರಕಿರುವ ಆಧಾರವು ಸಾಲದೇ?"

"ಸಾಲದು."

"ಹೇಗೆ?"

"ನೀನು ಜಗನ್ನಾಥನು ಕಾಗದ ಬರೆಯುತ್ತಿದ್ದನ್ನು ನೋಡಿದೆ. ಆಗ ಆತನೊಡನೆ ಯಾವುದೊ ಕೆಲಸವನ್ನು ಆರ್ಡರ್ ಕೊಡುವವನಂತೆ ನಟಿಸಿ ಅವನೊಡನೆ ಮಾತನಾಡುತ್ತಾ ಅವನು ಅಲ್ಲಿಂದ ಕದಲುವಂತೆ ಯಾವುದಾದ ರೊಂದು ಯುಕ್ತಿಯನ್ನು ಕಲ್ಪಿಸಿ, ಆತನು ಅತ್ತ ಹೋಗುತ್ತಲೇ ಆ ಕವರು ಗಳಲ್ಲಿ ಏನಾದರೊಂದು ಗುರುತು ಮಾಡಬೇಕಿತ್ತು. ಆಗ ನಮ್ಮ ಸಂದೇಹವು ಸಂಪೂರ್ಣವಾಗಿ ನಿವಾರಣೆಯಾಗುತ್ತಿತ್ತು. ನೀನು ಒಳಗೆ ಹೋದವನು ಹಾಗೆ ಮಾಡಲಿಲ್ಲ."

"ಆತನು ಕಾಗದ ಬರೆಯುವುದು ರಹಸ್ಯವಾಗಿ. ನಾನು ಅಲ್ಲಿಗೆ ಹೋದರೆ ಎಲ್ಲವನ್ನೂ ತೆಗೆದು ಮೇಜಿನ ಒಳಗೆ ಇಟ್ಟುಕೊಳ್ಳುವುದಿಲ್ಲವೇ ?"

"ಕಾಗದವನ್ನು ಇಡುವನಲ್ಲದೆ ಕವರುಗಳನ್ನು ಏಕೆ ಇಡುವನು ? ಹಾಗೊಂದು ವೇಳೆ ರಹಸ್ಯವಾಗಿ ಬರೆಯುವುದಾದರೆ ಆ ಆಫೀಸಿನಲ್ಲಿ ಹಗಲು ವೇಳೆಯಲ್ಲಿಯೇ ಬರೆಯಲಾರನೆಂದು ನನ್ನ ಭಾವನೆ."

"ಹಾಗಾದರೇ ! ಆತನ ಮೇಲೆ ನಿನಗೆ ಸಂದೇಹವಿಲ್ಲವೇ ?"

"ಇಲ್ಲವೆಂದು ಹೇಗೆ ಹೇಳಲಿ ? ಈಗ ನೀನೊಂದು ಕೆಲಸ ಮಾಡು."

"ಏನು ?"

"ನಾಳೆಯ ದಿನ ವೇಷಾಂತರದಿಂದ ಅವನಲ್ಲಿಗೆ ಹೋಗಿ, ಯಾವುದಾದರೂ ಕೆಲಸವನ್ನು ಕೊಡುವವನಂತೆ ನಟಿಸಿ, ನಿನಗೆ ಆ ವೇಳೆಯಲ್ಲಿ ತೋಚಿದ ಯುಕ್ತಿ ಯಲ್ಲಿ ಏನಾದರೊಂದು ವಿಷಯವನ್ನು ನಾಲ್ಕಾರು ಪಂಗ್ತಿ ಬರೆಯಿಸು. ಆಗ ಆ ಅಕ್ಷರಗಳನ್ನು ನೋಡು. ತಿಳಿಯುತ್ತದೆ. ಸಾಧ್ಯವಾದರೆ ಅದನ್ನು ತೆಗೆದು ಕೊಂಡು ಬಾ. ಈ ಕಾರ್ಯವು ನಿನ್ನಿಂದಾಗುವುದೇ ?"

"ಆಗದೆ ಏನು ?"

"ನಾನು ಬಾಲಕೃಷ್ಣನನ್ನು ಸಂಧಿಸಿ ನೆನ್ನೆಯ ದಿನ ಬಂದ ಕಾಗದದ ವಿಷಯ ವಾಗಿ ಪ್ರಸ್ತಾಪ ಮಾಡುವೆನು. ಆತನೇ ಬರೆದುದಾಗಿದ್ದರೆ, ಏನೆಂದು ಬರೆದಿರುವ ನೆಂದು ನೋಡುವೆನು. ಆ ಕಾಗದದ ಅಕ್ಷರಗಳನ್ನೂ, ಈ ಕಾಗದದ ಅಕ್ಷರ ಗಳನ್ನೂ ಹೋಲಿಸಿ ನೋಡುವೆನು. ಆಗ ಏನು ರಹಸ್ಯವಿದ್ದರೂ ತಿಳಿಯುತ್ತದೆ."

"ಆತನು ಯಾರಿರಬಹುದು ?"

"ಬಾಲಕೃಷ್ಣನ ಸಮೀಪ ಬಂಧುವೆಂದೂ, ಸದಾ ದೊಡ್ಡ ಮನುಷ್ಯರ ಜೊತೆಯಲ್ಲಿಯೇ ಓಡಾಡಿಕೊಂಡಿರುವನೆಂದೂ ಹೇಳಬಲ್ಲೆನು."

"ಮಹಾ ಚತುರನಾಗಿರುವನಲ್ಲವೇ ?"

"ಸಂದೇಹವಿಲ್ಲ."

"ನಮಗೇ ಬೆದರಿಸಿರುವನಲ್ಲ. ನನ್ನ ಕೈಗೆ ಸಿಕ್ಕಿದರೆ ಅವನ ಸಾಮರ್ಥ್ಯ ವೆಷ್ಟಿದೆಯೆಂಬುದನ್ನು ನೋಡುವೆನು."

ಪುರುಷೋತ್ತಮನು ನಕ್ಕು—

"ಆ ಕಾಲವೂ ಬರುತ್ತದೆ. ಏಕೆ ಆತುರ ಪಡುವೆ. ಈಗ ಅವನೆಲ್ಲಿರು ವನೋ ಏನೋ ನೀನು ಇಲ್ಲಿ ಕುಳಿತುಕೊಂಡು ಸಿಟ್ಟು ಮಾಡಿದರೆ ಅವನ ಮೇಲೆ ತೀರಿಸಿಕೊಂಡಂತಾಗುವುದೇ ?" ಎಂದು ಹೇಳಿದನು.

"ಮುಂದೆ ಆತನನ್ನು ಹಿಡಿಯುವ ಬಗೆ ಹೇಗೆ ?"

"ಬಾಲಕೃಷ್ಣನನ್ನು ಕಂಡು ಮಾತನಾಡಿದನಂತರ ಮುಂದಿನ ಏರ್ಪಾಡಿನ ಬಗ್ಗೆ ಹೇಳುವೆನು. ಯಾರಾದರೂ ನೆಂಟರಿಷ್ಟರು ಬರೆದುದಾಗಿದ್ದರೆ ಈಗಿನ ಮಾರ್ಗವನ್ನೇ ಅನುಸರಿಸುವೆನು. ಆತನೇ ಬರೆದುದಾಗಿದ್ದರೆ ಏನು ಬರೆದಿರುವ ನೆಂಬುದನ್ನು ನೋಡಿ, ಮುಂದಿನ ಕಾರ್ಯದ ಬಗ್ಗೆ ಯೋಚಿಸಬೇಕಾಗುತ್ತದೆ."

"ಹೌದು ! ನನಗೆ ಮಾತ್ರ ಜಗನ್ನಾಥನ ಮೇಲೆಯೇ ಸಂದೇಹವಿದೆ. ಆತನೇ ಇರಬಹುದೆಂದು ನನ್ನ ಭಾವನೆ."

"ನಾಳೆಯ ದಿನ ಆತನನ್ನು ಪರಿಶೀಲಿಸಿದನಂತರ ಏನು ವಿಷಯವಿದ್ದರೂ ತಿಳಿಯುತ್ತದೆ. ಆತುರವೇಕೆ ಪಡುವೆ ?"

"ಹೌದು ! ನಿಜ."

ಮಾತಿನ ಆವೇಶದಲ್ಲಿದ್ದುದರಿಂದ ಪುರುಷೋತ್ತಮನಿಗೆ ಹಸಿವೆಯೆಂಬುದೇ ಕಾಣಲಿಲ್ಲ.

ರಾಮನಾಥನು ಪುರುಷೋತ್ತಮನಿಂದ ಬೀಳ್ಕೊಂಡು ಹಿಂದಿರುಗಿ ತನ್ನ ಮನೆಗೆ ಹೊರಟನು.

ಪುರುಷೋತ್ತಮನು ರಾಮನಾಥನನ್ನು ಕಳುಹಿಸಿದನಂತರ ತನ್ನ ಊಹಾ ಪ್ರಪಂಚದ ಕಡೆಗೆ ನಡೆದನು.

## ೨೦

ಮಾರನೆಯ ದಿನ ಪುರುಷೋತ್ತಮನು ಬಾಲಕೃಷ್ಣನ ಬಂಗಲೆಯ ಮುಂದೆ ವೇಷಾಂತರದಿಂದ ತಿರುಗಾಡುತ್ತಾ ಆತನು ಹೊರಗೆ ಬರುವುದನ್ನೇ ಕಾಯುತ್ತಿದ್ದನು.

ಯೋಚನೆಯಲ್ಲಿಯೇ ಮುಳುಗಿದ್ದ ಬಾಲಕೃಷ್ಣನಿಗೆ ಬಂಗಲೆಯಿಂದ ಹೊರಗೆ ಬರುವುದಕ್ಕೇ ಮನಸ್ಸಿರಲಿಲ್ಲ. ಮುಂದೆ ಕಾಗದ ಬಂದರೆ ತನಗೆ ತಿಳುಹಿಸದೆ ಹಣವನ್ನು ತೆಗೆದುಕೊಂಡು ಹೋಗಿ ಕೊಡಬೇಕೆಂದು ಪುರುಷೋತ್ತಮನು ತಿಳಿಹಿಸಿದ್ದುದರಿಂದ ಆತನಲ್ಲಿಗೆ ಹೋಗಲೂ ಮನಸ್ಸಾಗಲಿಲ್ಲ.

ಮುಂದೆ ಹದಿನೈದು ಸಾವಿರ ರೂಪಾಯಿಗಳನ್ನು ತಂದುಕೊಡಲು ಕಾಗದ ಬಂದೇ ಬರುವುದೆಂದು ತಿಳಿದಿದ್ದನು.

ಮಧ್ಯಾಹ್ನ ಹನ್ನೆರಡು ಘಂಟೆಯವರೆವಿಗೂ ಯೋಚನೆಯಲ್ಲಿಯೇ ಕಾಲವನ್ನು ಕಳೆದು ಬಳಿಕ ಊಟವನ್ನೂ ಸಹ ಮಾಡದೆ ಬಂಗಲೆಯಿಂದ ಹೊರಗೆ ಹೊರಟನು.

ಎಲ್ಲಿಗೆ ಹೋಗಬೇಕೆಂದು ಆತನಿಗೇ ತಿಳಿಯದು.

ಬಾಲಕೃಷ್ಣನು ಹೊರಗೆ ಬರುವುದನ್ನೇ ಕಾಯುತ್ತಿದ್ದ ಪುರುಷೋತ್ತಮನು, ಆತನು ಹೊರಗೆ ಬಂದನಂತರ ಸುತ್ತಮುತ್ತಲೂ ನೋಡಲು ತನ್ನ ಸಂದೇಹಕ್ಕೆ ಆಸ್ಪದವಾದ ವ್ಯಕ್ತಿ ಯಾರೂ ಗೋಚರಕ್ಕೆ ಕಂಡು ಬರಲಿಲ್ಲ.

ಎಲ್ಲಿಗೆ ಹೋಗಬೇಕೆಂಬುದನ್ನರಿಯದ ಬಾಲಕೃಷ್ಣನು ಸುಮಾರು ತನ್ನ ಬಂಗಲೆಯಿಂದ ಮೂವತ್ತುಮಾರು ದೂರ ಹೋದನಂತರ ಅವನ ಹಿಂದೆಯೇ ಬರು

ತ್ತಿದ್ದ ಪುರುಷೋತ್ತಮನು ಹಿಂದೆ ಮುಂದೆ ನೋಡುತ್ತಾ ಅವನ ಸಮಾಪಕ್ಕೆ ಬಂದನು.

ಬಾಲಕೃಷ್ಣನೊಡನೆ ಮಾತನಾಡಬೇಕೆಂದು ಮನಸ್ಸಾಯಿತಾದರೂ, ಆತನು ಎಲ್ಲಿಗೆ ಹೋಗುತ್ತಿರುವನೆಂಬುದು ತಿಳಿಯದ ಪ್ರಯುಕ್ತ, ಅವನ ಕಾರ್ಯಕಲಾಪ ಗಳನ್ನರಿಯುವ ನಿಮಿತ್ತ ಆತನಿಗರಿಯದಂತೆಯೇ ಹಿಂಬಾಲಿಸಿದನು.

ತನ್ನನ್ನು ಪುರುಷೋತ್ತಮನು ಹಿಂಬಾಲಿಸುತ್ತಿರುವನೆಂದು ಬಾಲಕೃಷ್ಣನಿಗೆ ತಿಳಿಯದು. ಮೇಲಾಗಿ ಒಂದುವೇಳೆ ಪುರುಷೋತ್ತಮನನ್ನು ನೋಡಿದ್ದರೂ, ಆತನು ವೇಷಾಂತರದಲ್ಲಿದ್ದುದರಿಂದ ಗುರುತಿಸಲೂ ಆಗುತ್ತಿರಲಿಲ್ಲ.

ಬಾಲಕೃಷ್ಣನು ಅಲ್ಲಿ ಇಲ್ಲಿ ಸುತ್ತಾಡಿ ಕೊನೆಗೆ ನಗರದ ಉದ್ಯಾನವನದ ಬಳಿಗೆ ಹೋಗಿ ಅಲ್ಲಿದ್ದ ಕಲ್ಲುಬೆಂಚಿನಮೇಲೆ ಕುಳಿತನು.

ಪುರುಷೋತ್ತಮನು ಆತನಿಗೆ ಕೊಂಚ ದೂರದಲ್ಲಿದ್ದ ಇನ್ನೊಂದು ಬೆಂಚಿನ ಮೇಲೆ ಕುಳಿತನು.

ಬಾಲಕೃಷ್ಣನು ಹಿಂದಿನ ಘಟನೆಗಳನ್ನೆಲ್ಲಾ ನೆನಪಿಗೆ ತಂದುಕೊಂಡು ದೊಡ್ಡದಾಗಿ ಅಡಿಗಡಿಗೆ ನಿಟ್ಟುಸಿರು ಬಿಡುತ್ತಿದ್ದನು.

ಚಿಂತಾಕ್ರಾಂತನಾಗಿ ಕುಳಿತು ನಿಟ್ಟುಸಿರು ಬಿಡುತ್ತಿರುವುದನ್ನು ಪುರುಷೋತ್ತ ಮನು ನೋಡುತ್ತಲೇ ಇದ್ದನು.

'ತನ್ನ ಮನಸ್ಸಿಗೆ ಬೇಸರವಾದ್ದರಿಂದ ಈತನು ಇಲ್ಲಿಗೆ ಬಂದು ಕುಳಿತು ಕೊಂಡಿರುವನು. ನೆನ್ನೆಯದಿನ ಈತನಿಗೆ ಬಂದ ಕಾಗದವು ಯಾರದೆಂದು ತಿಳಿಯ ಬೇಕಾಗಿದೆ. ಬಹುಶಃ ಆತನೇ ನನಗೆ ಬರೆದಂತೆ ಈತನಿಗೂ ಎಚ್ಚರಿಸಿರಬಹುದೋ, ಏನೋ, ........ಇದ್ದರೂ ಇರಬಹುದು. ಈಗ ಈತನು ಇಲ್ಲಿಂದ ತನ್ನ ಮನೆಗೆ ಹೋಗಬಹುದು. ಅಲ್ಲಿಗೆ ಹೋದನಂತರ ಮತ್ತೆ ಇವನನ್ನು ಸಂಧಿಸುವುದು ಕಷ್ಟ. ಆದ್ದರಿಂದ ಈಗಲೇ ಈತನನ್ನು ಸಂಧಿಸಿ ನನ್ನ ಮನೆಗೆ ಕರೆದುಕೊಂಡು ಹೋಗ ಬೇಕು.'

ಎಂಬುದಾಗಿ ಯೋಚಿಸಿ ಪುರುಷೋತ್ತಮನು ಸುತ್ತಮುತ್ತಲೂ ನೋಡಲು, ಏಳೆಂಟು ಜನರು ಅಲ್ಲಲ್ಲಿಯೇ ಕುಳಿತಿರುವುದು ಗೋಚರಿಸಿತು.

ಮದ್ಯಾಹ್ನ ವೇಳೆಯಾದುದರಿಂದ ಹೆಚ್ಚು ಜನರಿರಲಿಲ್ಲ ಪುರುಷೋತ್ತಮನು ಅವರೆಲ್ಲರನ್ನೂ ನೋಡಿದನು. ಅವರು ತಮ್ಮ ತಮ್ಮ ಯೋಚನೆಯಲ್ಲಿ ಮಗ್ನ

ರಾಗಿದ್ದರಲ್ಲದೆ ಬಾಲಕೃಷ್ಣನ ಕಡೆ ಯಾರೂ ನೋಡುತ್ತಿರಲಿಲ್ಲ. ಅಲ್ಲಿ ಕುಳಿದ್ದವರ ಮುಖ ಪರಿಚಯ ಮಾಡಿಕೊಂಡನು.

ತರುವಾಯ ಜೇಬಿನಿಂದ ಒಂದು ಕಾಗದವನ್ನು ತೆಗೆದು ಅದರಲ್ಲಿ—

'ಈಗಲೇ ಪುರುಷೋತ್ತಮನ ಮನೆಗೆ ಹೋಗಿ ಆತನನ್ನು ಕಾಣಬೇಕು. ಉದಾಸೀನನಾಗಬಾರದು.

ಇತಿ ನಿನ್ನ
'ಶ್ರೇಯೋಭಿಲಾಷಿ'

—ಎಂದು ಬರೆದು ಆ ಕಾಗದವನ್ನು ಸುರುಳಿ ಮಾಡಿ ಅಲ್ಲಿಂದ ಎದ್ದು ಬಾಲಕೃಷ್ಣನು ಕುಳಿತಿದ್ದ ಮಂಚದ ಬಳಿಗೆ ಬಂದು ಆತನ ಪಕ್ಕದಲ್ಲಿ ಕುಳಿತನು.

ಯೋಚನೆಯಲ್ಲಿ ಮುಳುಗಿದ್ದ ಬಾಲಕೃಷ್ಣನು ತನ್ನ ದೇಹದಮೇಲೆ ಪ್ರಜ್ಞೆ ಇಲ್ಲದವನಂತೆ ಕುಳಿತಿದ್ದನು.

ಪುರುಷೋತ್ತಮನು ಸುತ್ತಮುತ್ತಲೂ ನೋಡಲು ಅಲ್ಲಿ ಕುಳಿತಿದ್ದವರಾರೂ ತಮ್ಮ ಕಡೆ ನೋಡುತ್ತಿರುವಂತೆ ಕಾಣಲಿಲ್ಲ.

ಬಾಲಕೃಷ್ಣನ ಗಮನವನ್ನು ತನ್ನ ಕಡೆಗೆ ಸೆಳೆಯಲು ಒಂದುಸಾರಿ ಜೋರಾಗಿ ಕೆಮ್ಮಿದನು.

ಯೋಚನೆಯಲ್ಲಿ ಮುಳುಗಿದ್ದ ಬಾಲಕೃಷ್ಣನಿಗೆ ಪುರುಷೋತ್ತಮನು ಕೆಮ್ಮಿದುದರಿಂದ ಅವನ ಯೋಚನೆಗೆ ಭಂಗವುಂಟಾಯಿತು.

ತನ್ನ ಪಕ್ಕದಲ್ಲಿ ಕುಳಿತು ಕೆಮ್ಮಿದವರಾರೆಂದು ಬಾಲಕೃಷ್ಣನು ಪುರುಷೋತ್ತಮನ ಕಡೆ ನೋಡುತ್ತಲೇ, ಪತ್ತೇದಾರನು ತಾನು ಬರೆದಿದ್ದ ಕಾಗದವನ್ನು ಆತನ ಮುಂದೆ ಎಸೆದನು.

ವಿಸ್ಮಿತನಾದ ಬಾಲಕೃಷ್ಣನು ಕೆಳಗೆ ಬಿದ್ದಿದ್ದ ಕಾಗದವನ್ನು ಕೈಗೆ ತೆಗೆದುಕೊಳ್ಳುತ್ತಲೇ, ತನ್ನ ಮುಖವನ್ನು ಆತನು ನೋಡಬಾರದೆನ್ನುವ ಅಭಿಪ್ರಾಯವಿದ್ದುದರಿಂದ ತಕ್ಷಣವೇ ಎದ್ದು ತನ್ನ ಮನೆಗೆ ಹೊರಗೆ ಹೊರಟನು.

ಸೋಜಿಗನಾದ ಬಾಲಕೃಷ್ಣನು ಕಾಗದವನ್ನು ಬಿಚ್ಚಿ ನೋಡಿ, ಅದರಲ್ಲಿ ಬರೆದುದನ್ನು ಓದಿ ನೋಡಿಕೊಂಡು, ತಲೆಯೆತ್ತಿ ನೋಡಲು ಕಾಗದವನ್ನು ಹಾಕಿದವನು ಕಾಣಲಿಲ್ಲ.

'ಈತನಾರೋ ಪುರುಷೋತ್ತಮನ ಕಡೆಯವನಿರಬಹುದು. ಆತನೇ ಈತನನ್ನು ಕಳುಹಿಸಿರಬಹುದು. ನಾನಿಲ್ಲಿರುವುದನ್ನು ಹೇಗೆ ಪತ್ತೆ ಮಾಡಿದನೋ ತಿಳಿಯದು. ನನ್ನೊಡನೆ ಮಾತನಾಡದೆ, ಈ ಕಾಗದವನ್ನು ನನ್ನಮುಂದೆ ಹಾಕಿ ಹೋಗಿರುವುದರಲ್ಲಿ ಏನೋ ವಿಶೇಷವಿದೆ. ಆಗಲೇ ಹೋಗಿ ಪತ್ತೇದಾರನನ್ನು ಕಾಣುವುದು ಉತ್ತಮ. ಮೇಲಾಗಿ ಮೊನ್ನೆಯದಿನ ಬಂದಿದ್ದ ಕಾಗದದ ವಿಷಯವನ್ನೂ ಹೇಳಬಹುದು.' ಎಂದು ಆಲೋಚಿಸಿ ಬಾಲಕೃಷ್ಣನು ಕೂಡಲೇ ಅಲ್ಲಿಂದ ಎದ್ದು ಪುರುಷೋತ್ತಮನ ಮನೆಗೆ ಹೊರಟನು.

ಪತ್ತೇದಾರನು ತನ್ನ ಮನೆಯನ್ನು ತಲುಪಿದನಂತರ ವೇಷವನ್ನು ಮಾರ್ಪಡಿಸಿಕೊಂಡು, ನಿಜ ವೇಷದಲ್ಲಿ ಮನೆಯ ಹೊರಭಾಗದಲ್ಲಿ ನಿಂತುಕೊಂಡು ಬಾಲಕೃಷ್ಣನು ಬರುವುದನ್ನೇ ಕಾಯುತ್ತಿದ್ದನು.

ನಿರೀಕ್ಷಿಸುತ್ತಿದ್ದ ಹಾಗೆಯೇ ಬಾಲಕೃಷ್ಣನು ದೂರದಲ್ಲಿ ಬರುತ್ತಿರುವುದನ್ನು ಕಂಡನು.

ಅವನನ್ನು ಹಿಂಭಾಲಿಸಿ ಯಾರಾದರೂ ಬರುತ್ತಿರಬಹುದೇ? ಎಂದು ಆಲೋಚಿಸಿ ಆತನ ಹಿಂದೆ ಬರುವವರನ್ನು ನೋಡಿದನು.

ಆತನ ಹಿಂದೆ ಬರುತ್ತಿರುವವರಾರೂ ಉದ್ಯಾನವನದಲ್ಲಿ ಕಂಡ ವ್ಯಕ್ತಿಗಳಾಗಿರಲಿಲ್ಲ.

ಬಾಲಕೃಷ್ಣನು ಆತನ ಹತ್ತಿರಕ್ಕೆ ಬರುತ್ತಲೇ, ಪುರುಷೋತ್ತಮನು ಡಾಕ್ಟರಿಗೆ ಒಳಗೆ ಹೋಗುವಂತೆ ಹೇಳಿ ತಾನು ಅಲ್ಲಿಯೇ ನಿಂತುಕೊಂಡನು.

ಹತ್ತು ನಿಮಿಷಕಾಲ ಅಲ್ಲಿಯೇ ನಿಂತುಕೊಂಡಿದ್ದರೂ ಸಂದೇಹಕ್ಕೆ ಆಸ್ಪದವಾಗುವಂತಹ ಸೂಚನೆಯೇನೂ ಕಾಣಲಿಲ್ಲ.

ಆ ಮನೆಯ ಸಮೀಪದಲ್ಲಿ ಯಾರೊಬ್ಬರೂ ನಿಂತು ಕಾಯುತ್ತಿರುವುದು ಗೋಚರಿಸಲಿಲ್ಲ.

ಡಾಕ್ಟರನ ಹಿಂದೆ ಯಾವ ವ್ಯಕ್ತಿಯೂ ಇಲ್ಲವೆಂದು ನಿರ್ಧರ ಪಡಿಸಿಕೊಂಡು ಒಳಗೆ ಹೋದನು.

ಬಾಲಕೃಷ್ಣನು ಯೋಚನಾಕ್ರಾಂತನಾಗಿ ಹಾಲಿನಲ್ಲಿದ್ದ ಸೋಫಾದ ಮೇಲೆ ಕುಳಿತಿದ್ದನು.

ಪುರುಷೋತ್ತಮನು ಆತನ ಎದುರಿಗಿದ್ದ ಸೋಫಾದ ಮೇಲೆ ಕುಳಿತು—

"ಮೊನ್ನೆಯ ದಿನ ನಿಮಗೆ ಕಾಗದ ಬಂದದ್ದು ಯಾವ ಊರಿನಿಂದ? ಬರೆದವರಾರು?" ಎಂದು ಕೇಳಿದನು.

ಬಾಲಕೃಷ್ಣನು ಸೋಜಿಗನಾದದು.

"ಕಾಗದ ಬಂದದ್ದು ನಿಮಗೆ ಹೇಗೆ ಗೊತ್ತು?"

—ಎಂದು ಪುರುಷೋತ್ತಮನ ಮುಖವನ್ನು ನೋಡುತ್ತಾ ಆಶ್ಚರ್ಯವನ್ನು ಸೂಚಿಸಿ ಕೇಳಿದನು.

"ಹೇಗಾದರೂ ತಿಳಿದಿರಲಿ. ಆ ವಿಷಯವೆಲ್ಲಾ ನಿಮಗೆ ಬೇಡಿ. ನಾನು ಕೇಳಿದುದಕ್ಕೆ ಜವಾಬು ಕೊಡಿ?"

"ಆತನೇ ಬರೆದುದು."

"ಹಣ ತಂದುಕೊಡಬೇಕೆಂದು ಬರೆದಿದ್ದನೇ?"

"ಇಲ್ಲ."

"ಮತ್ತೇನು ವಿಷಯವಿತ್ತು?"

ಕಾಗದದಲ್ಲಿ ಏನು ವಿಷಯ ಬರೆದಿತ್ತೆಂದು ಡಾಕ್ಟರನು ಹೇಳಲು ಪುರುಷೋತ್ತಮನು ಅತ್ಯಂತ ಆಶ್ಚರ್ಯಭರಿತನಾಗಿ ಕಳ್ಳನು ಸಾಮಾನ್ಯನಲ್ಲವೆಂದುಕೊಂಡನು.

ಪುರುಷೋತ್ತಮನು ಏನು ಸಮಾಧಾನ ಹೇಳುವನೆಂಬುದನ್ನು ಕೇಳುವ ಕುತೂಹಲದ ಚಿನ್ಹೆಯು ಬಾಲಕೃಷ್ಣನ ಮುಖದಲ್ಲಿ ಕಾಣುತ್ತಿತ್ತು.

"ಆ ಕಾಗದವು ಈಗ ನಿಮ್ಮ ಬಳಿಯಲ್ಲಿರುವುದೇ?"

—ಎಂದು ಪುರುಷೋತ್ತಮನು ಕೇಳಲು ಬಾಲಕೃಷ್ಣನು—

"ಇಲ್ಲಾ! ಇದ್ದಿದ್ದರೆ ಆಗಲೇ ಕೊಡುತ್ತಿದ್ದೆನು. ಮನೆಯಲ್ಲಿಯೇ ಪೆಟ್ಟಿಗೆಯಲ್ಲಿಟ್ಟಿರುವೆನು. ನಿಮ್ಮನ್ನು ಕಾಣಬೇಕೆಂಬ ಹಂಬಲವುಂಟಾಗಿತ್ತು. ನೀವು ಮೊದಲೇ ಎಚ್ಚರಿಕೆ ಕೊಟ್ಟ ಪ್ರಯುಕ್ತ ನಿಮ್ಮ ಬಳಿಗೆ ಬರಲು ಹಿಂಜರಿದೆನು. ಈಗ ಉದ್ಯಾನವನದ ಬಳಿಯಲ್ಲಿ ಕುಳಿತಿದ್ದಾಗ ಯಾರೋ ಏನೋ; ಬಹುಶಃ ನೀವೇ ಇರಬಹುದೋ ಏನೋ, ಕಾಗದವನ್ನು ನನ್ನ ಬಳಿಯಲ್ಲಿ ಎಸೆದು ಹಿಂದಿರುಗಿ ನೋಡದೆ ಹೊರಟು ಬಂದರು. ನಾನು ಕಾಗದವನ್ನು ಓದಿ ನೋಡಿ ಹಾಗೇ ಇಲ್ಲಿಗೆ ಬಂದೆನು. ಪತ್ತೇದಾರರೇ! ಅವರಾರು?" ಎಂದು ಕೇಳಿದನು.

ಪುರುಷೋತ್ತಮನು ನಕ್ಕು—

“ಅವರು ನನ್ನ ಸ್ನೇಹಿತರೇ. ಆ ವಿಷಯವಿರಲಿ, ಆ ಕಾಗದವನ್ನು ಭದ್ರ ವಾಗಿಟ್ಟಿರಿ.” ಎಂದು ಹೇಳಿದನು.

“ಬೇಕಾದರೇ ! ಈಗಲೇ ತಂದು ಕೊಡುವೆನು.”

“ಪುನಃ ನೀವು ಇಲ್ಲಿಗೆ ಬರಬೇಕಾದ ಪ್ರಮೇಯವೇ ಬೇಡ. ಎಲ್ಲವನ್ನೂ ನಾನು ನೋಡಿಕೊಳ್ಳುವೆನು. ನನ್ನನ್ನು ಯಾವ ಕಾರಣಕ್ಕಾಗಿಯೂ, ಯಾವ ವೇಳೆಯಲ್ಲಾದರೂ ಸರಿ ! ಸಂಧಿಸಲು ಪ್ರಯತ್ನ ಪಡಬೇಡಿ. ಆತನಾರೆಂಬುದನ್ನು ಪತ್ತೇಮಾಡಿ ಒಡಿಯುವ ಭಾರವು ನನಗಿರಲಿ. ನೀವು ಆ ಯೋಚನೆಯ ವಿಷಯವಾಗಿ ಕಳವಳಿಸಬೇಡಿ.”

ಬಾಲಕೃಷ್ಣನ ಮನಕ್ಕೆ ಧೈರ್ಯವುಂಟಾಯಿತು.

ಪುರುಷೋತ್ತಮನು ಆತನಿಗೆ ಹೋಗಲನುಮತಿಯೀಯಲು, ಡಾಕ್ಟರನು ಅಲ್ಲಿಂದ ಹೊರಟನು.

ಮಾರ್ಗದಲ್ಲಿ ಅವನ ತಲೆಯು ತುಂಬಾ ಯೋಚನೆಗಳು ಮುತ್ತಿಕೊಂಡುವು.

‘ಪುರುಷೋತ್ತಮನು ಆ ವ್ಯಕ್ತಿಯಾರೆಂಬುದನ್ನು ಪತ್ತೇಮಾಡಿ ಹಿಡಿದ ನಂತರ, ಆತನು ನನ್ನ ರಹಸ್ಯ ಮರ್ಮವನ್ನು ಹೇಳದೆ ಇರುವುದಿಲ್ಲ. ಆಗ ನನಗೂ ಸಹ ಶಿಕ್ಷೆಯು ತಪ್ಪಲಾರದು. ಪುರುಷೋತ್ತಮನು ನ್ಯಾಯವಾಧಿ ಯೆಂದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದಿದೆ. ಹೀಗಿರುವಾಗ ನನ್ನ ತಪ್ಪು ಬಯಲಾದರೆ ಆತನು ನನ್ನನ್ನು ಬಿಡುವನೇ ?........ಎಂದಿಗೂ ಬಿಡಲಾರನು. ನಾನು ಒಂದು ಕೊಲೆಯನ್ನು ಮಾಡಿ, ಇನ್ನೊಂದು ಕೊಲೆಗೆ ಕಾರಣನಾಗಿರುವೆನು. ಆದ್ದರಿಂದ ಆ ಅಪವಾದವು ನನ್ನ ಮೇಲೆ ಬಾರದಂತೆ ನೋಡಿಕೊಳ್ಳಬೇಕು. ಪುರುಷೋತ್ತಮನು ಆ ವ್ಯಕ್ತಿಯಾರೆಂಬುದನ್ನು ಪತ್ತೇಮಾಡಿ ಹಿಡಿಯುತ್ತಲೇ ಅವನು ತಕ್ಷಣವೇ ಈ ಲೋಕದಲ್ಲಿಲ್ಲದಂತೆ ಮಾಡಬೇಕು. ಹಾಗೆ ಮಾಡಿದರೆ ನಾನು ಮಾಡಿರುವ ಅಪರಾಧಗಳೆಲ್ಲವೂ ಮಾಯವಾಗುವುದಲ್ಲದೆ. ನನ್ನ ಗುಪ್ತ ವೈರಿಯೂ ನಾಶವಾಗುವನು. ಒಟ್ಟಿನಲ್ಲಿ ಪುರುಷೋತ್ತಮನಿಗೆ ನನ್ನ ವಿಷಯ ವಾವುದೂ ತಿಳಿಯದಂತೆ ಮಾಡಬೇಕು.’ ಎಂಬುದಾಗಿ ಯೋಚಿಸುತ್ತಾ ತನ್ನ ಬಂಗಲೆಯನ್ನು ತಲುಪಿದನು.

ಊಟದ ವೇಳೆಯು ಮೀರಿ ಹೋಗಿದ್ದುದರಿಂದ, ಊಟಮಾಡದೆ ತನ್ನ ರೂಮಿಗೆ ಹೋಗಿ ಮಂಚದ ಮೇಲೆ ಮಲಗಿಕೊಂಡನು.

ಆತನ ಪತ್ನಿಯಾದ ರಾಜೇಶ್ವರಿಯು ಹಲವು ಬಗೆಯಲ್ಲಿ ಒಡಂಬಡಿಸಿ ಊಟಕ್ಕೆ ಕರೆದರೂ ಆತನು ಒಪ್ಪಲಿಲ್ಲ.

ಬಾಲಕೃಷ್ಣನನ್ನು ಕಳುಹಿಸಿದನಂತರ ಪುರುಷೋತ್ತಮನು ಯೋಚನೆಯಲ್ಲಿ ಮುಳುಗಿ, ಅಪರಾಧಿಯಾರೆಂಬುದನ್ನು ಹೇಗೆ ಪತ್ತೇಮಾಡಿ ಹಿಡಿಯಬೇಕೆಂಬುದರ ಬಗ್ಗೆ ಆಲೋಚಿಸುತ್ತಿರಲು, ಜಗನ್ನಾಥನ ಚಲನವಲನಗಳನ್ನು ಅರಿಯುವುದರಲ್ಲಿ ನಿರತನಾಗಿದ್ದ ರಾಮನಾಥನು ಬಂದನು.

ಪುರುಷೋತ್ತಮನು ಆತನೊಡನೆ ವಿಷಯವನ್ನೆಲ್ಲಾ ಹೇಳಲು ರಾಮನಾಥನು ಕಳ್ಳನ ಚಮತ್ಕಾರಕ್ಕೆ ದಿಗ್ಭ್ರಮೆಗೊಂಡನಂತಾದನು.

"ಮಿತ್ರಾ ! ಆತನು ಸಾಮಾನ್ಯನಲ್ಲವೆಂದು ತೋರುತ್ತದೆ. ನಮಗೇ ಎಚ್ಚರಿಕೆ ಕೊಟ್ಟಿರುವನೆಂದ ಬಳಿಕ ಆತನು ಎಂತಹವನೆಂದು ನೀನೇ ಯೋಚಿಸಿ ನೋಡು ?"

ಪುರುಷೋತ್ತಮನು ನಕ್ಕು—

"ಆತನು ಎಂತಹ ಚತುರನಾಗಿದ್ದರೂ ಸರಿ ! ಅದಕ್ಕಾಗಿ ಕಳವಳ ಪಡಲಾರೆ. ಅವನನ್ನು ಸುಲಭವಾಗಿಯೇ ಹಿಡಿಯುವೆನು." ಎಂದು ಹೇಳಿದನು.

"ಹೇಗೆ ಹಿಡಿಯುವೆ ?"

"ಮುಂದೆ ಆತನು ಕಾಗದ ಬರೆದರೆ ರೂಪಾಯಿ ತಂದುಕೊಡಬೇಕೆಂದೇ ಕಾಗದ ಬರೆಯುವನು. ಅಲ್ಲವೇ ?"

"ಹೌದು."

"ಹಾಗೆ ಆತನು ಬರೆದ ದಿನ ತಾವಿಬ್ಬರೂ ವೇಷಾಂತರದಿಂದ ಹೊತ್ತಿಗೆ ಮುಂಚೆಯೇ ಆತ್ಮರಕ್ಷಣೆಯ ಆಯುಧಗಳೊಡನೆ ಕಾಳಿಕಾ ದೇವಾಲಯದ ಬಳಿಗೆ ಹೋಗಿ ಅಲ್ಲಿ ಅಡಗಿಕೊಂಡು ಕುಳಿತಿದ್ದರೆ ಸಾಕು ! ಆತನಾರೆಂಬುದನ್ನು ಸುಲಭವಾಗಿ ಹಿಡಿಯಬಹುದು."

"ಕಾಗದ ಬಂದಿದೆಯೆಂದು ನಮಗೆ ತಿಳಿಯುವುದೇಗೆ ?"

"ಈಗಿನಂತೆ ಬಾಲಕೃಷ್ಣನ ಬಂಗಲೆಯ ಬಳಿಯಲ್ಲಿ ಕಾಯ್ದುಕೊಂಡಿದ್ದು, ಆತನಿಗೆ ಕಾಗದ ಬರುತ್ತಲೇ ನಾವು ಆ ದಿನ ಅಲ್ಲಿಗೆ ಹೋದರೆ ಸಾಕು, ಆ

ವ್ಯಕ್ತಿಯು ಬಾಲಕೃಷ್ಣನು ಬರುವ ಮೊದಲೇ ಕಾಳಿಕಾ ದೇವಾಲಯದ ಬಳಿಗೆ ಬರುತ್ತಾನೆ. ನಾವು ಹೊತ್ತಿಗೆ ಮುಂಚೆಯೇ ಅಲ್ಲಿಗೆ ಹೋಗಿ ಕಾದಿದ್ದು ಆತ ನನ್ನು ಹಿಡಿದರಾಯಿತು. ಕಾಗದ ಏಕೆ ಬರೆಯುತ್ತಿದ್ದನು? ಆತನಾರು? ಬಾಲಕೃಷ್ಣನು ಮಾಡಿರುವ ತಪ್ಪೇನು? ಎಂಬುದೆಲ್ಲಾ ಬಯಲಾಗುತ್ತದೆ."

ಪುರುಷೋತ್ತಮನ ಸಲಹೆಗೆ ರಾಮನಾಥನು ವಿಸ್ಮಿತನಾಗಿ ಆ ರೀತಿ ಮಾಡಿ ದರೆ ತಮ್ಮ ಕಾರ್ಯವು ಸುಲಭವಾಗಿ ನೆರವೇರುವುದೆಂದುಕೊಂಡನು.

"ಮಿತ್ರಾ! ನಿನ್ನ ಸಲಹೆಯು ಸರಿಯಾಗಿಯೇ ಇದೆ. ನೀನು ಹೇಳಿದಂತೆ ನಡೆದುಕೊಂಡರೆ ರಕ್ತಪಾತವಿಲ್ಲದೆಯೇ ನಮ್ಮ ಕಾರ್ಯವು ಮುಗಿದುಹೋಗುತ್ತದ ಲ್ಲವೇ?"

"ಹೌದು! ಅದರ ಮೇಲೆ ಆ ವ್ಯಕ್ತಿಯಾರೆಂಬುದನ್ನೂ ತಿಳಿಯಬಹುದಲ್ಲದೆ, ಬಾಲಕೃಷ್ಣನು ಹಿಂದೆ ಮಾಡಿರುವ ತಪ್ಪೂ ಬಯಲಾಗುತ್ತದೆ."

"ಹಾಗಿದ್ದ ಮೇಲೆ ನಾನು ಜಗನ್ನಾಥನ ಚಲನವಲನಗಳನ್ನು ಏಕೆ ಅರಿಯ ಬೇಕು?"

"ಅದರಿಂದ ಪ್ರಯೋಜನವಿದೆ."

"ಆತನೇ ಇರಬಹುದೆಂದು ನಿನ್ನ ಅಭಿಮತವೇ?"

"ಆ ವಿಷಯವನ್ನು ಈಗಲೇ ಹೇಗೆ ಹೇಳಲು ಸಾಧ್ಯ? ಕೊಂಚವಾದರೂ ಅನುಮಾನದ ಎಳೆಯು ಸಿಗಬೇಕು. ಆಗ ಹೇಳಬಹುದು."

"ಸಿಕ್ಕಿದೆಯಲ್ಲ?"

"ಅದು ಸಾಲದು. ನಾನು ನಿನಗೆ ಹೇಳಿದಂತೆ ಮಾಡು. ಆಗ ಏನು ವಿಷಯ? ಹೇಗೆ ನಡೆಯುತ್ತದೆಂದು ತಿಳಿಯುತ್ತದೆ."

"ಆಗಲಿ! ಪ್ರಯತ್ನ ಪಡುವೆನು."

ಪುರುಷೋತ್ತಮನು ಮಾತನಾಡಲಿಲ್ಲ.

ಊಟದ ವೇಳೆಯು ಕಳೆದು ಹೋಗಿದ್ದುದರಿಂದ ಪುರುಷೋತ್ತಮನೂ ಸಹ ಊಟ ಮಾಡದೆ ಫಲಾಹಾರವನ್ನಾದರೂ ತೆಗೆದುಕೊಳ್ಳಬೇಕೆಂದು ಬಯಸಿ ರಾಮನಾಥನನ್ನು ಕರೆದುಕೊಂಡು ನಗರ ಪ್ರಸಿದ್ಧ ಭವನವೆನಿಸಿಕೊಂಡಿದ್ದ ಮಹೇಶ್ವರಿ ಭವನಕ್ಕೆ ಹೊರಟನು.

# ೨೧

ಪತ್ತೇದಾರರು ಎಂದಿನಂತೆಯೇ ತಮ್ಮ, ತಮ್ಮ ಕಾರ್ಯಗಳಲ್ಲಿ ನಿರತರಾಗಿದ್ದರು.

ನಾಲ್ಕು ದಿನಗಳು ಕಳೆಯಿತು.

ಜಗನ್ನಾಥನ ಹಸ್ತ ಬರವಣಿಗೆಯನ್ನು ಹೊಂದಲು ರಾಮನಾಥನು ನಾಲ್ಕಾರು ಸಾರಿ ಪ್ರಯತ್ನ ಪಟ್ಟರೂ ಸಾಧ್ಯವಾಗಲಿಲ್ಲ. ಆದರೂ ರಾಮನಾಥನು ನಿರಾಶನಾಗಲಿಲ್ಲ.

ಐದನೆಯ ದಿನ ಜಗನ್ನಾಥನು ಕಾಗದವನ್ನು ಬರೆದು ಪೋಸ್ಟ್ ಬಾಕ್ಸಿಗೆ ಹಾಕಿದುದನ್ನು ನೋಡಿದನು.

ಜಗನ್ನಾಥನ ಮೇಲೆ ಆತನಿಗೆ ಸಂಪೂರ್ಣ ಸಂಹೇಹವುಂಟಾಯಿತು. ಈತನೇ ಬಾಲಕೃಷ್ಣನಿಗೆ ಕಾಗದ ಬರೆಯುವನೆಂಬುದರಲ್ಲಿ ಸಂದೇಹವಿಲ್ಲವೆಂದು ಕೊಂಡನು.

ಆ ದಿನ ರಾತ್ರಿಯಾಗುವವರೆವಿಗೂ ಆತನ ಹಿಂದೆಯೇ ಇದ್ದು ಬಳಿಕ ಪುರುಷೋತ್ತಮನಲ್ಲಿಗೆ ಬಂದು ಕಾಗದದ ವಿಷಯವನ್ನು ಹೇಳಿದನು.

ಪುರುಷೋತ್ತಮನು ಸಹಜವಾಗಿಯೇ—

"ನಾಳೆಯ ದಿನ ಬಾಲಕೃಷ್ಣನಿಗೆ ಕಾಗದ ಬಂದರೆ ಆಗ ತಿಳಿಯುತ್ತದೆ." ಎಂದು ಹೇಳಿದನು.

"ತಿಳಿಯುವುದೇನು ? ಆತನೇ ಕಳ್ಳನು. ಸಂದೇಹಪಡಬೇಕಾದ ಆವಶ್ಯಕತೆಯೇ ಇಲ್ಲ."

"ನೀನು ಆ ಕವರಿನ ಮೇಲೆ ಏನಾದರೂ ಗುರುತು ಮಾಡಿರುವೆಯಾ ?"

"ಪ್ರಯತ್ನ ಪಟ್ಟೆನು. ಸಾಧ್ಯವಾಗಲಿಲ್ಲ."

"ಆದರೂ ಚಿಂತೆಯಿಲ್ಲ. ಆತನೇ ಆಗಿರಲಿ, ಅಥವಾ ಬೇರೆಯವರೇ ಆಗಿರಲಿ, ಆ ವ್ಯಕ್ತಿಯಾರೆಂಬುದನ್ನು ಪತ್ತೇಮಾಡಿ ಹಿಡಿಯುವ ಭಾರವು ನಮಗೆ ಸೇರಿದೆ. ಅವನನ್ನು ಹಿಡಿದನಂತರ ಮುಂದಿನ ವಿಷಯ."

ರಾಮನಾಥನು ಮುಂದೆ ಮಾತನಾಡದೆ, ತನ್ನ ಮನೆಗೆ ಹಿಂದಿರುಗಿದನು.

'ನಾಳೆಯ ದಿನ ಬಾಲಕೃಷ್ಣನಿಗೆ ಕಾಗದವು ಬರುತ್ತದೆ. ನಾವು ಕಾಳಿಕಾ ದೇವಾಲಯದ ಬಳಿಗೆ ಹೋಗಲೇಬೇಕು. ಆ ವ್ಯಕ್ತಿಯು ಅಲ್ಲಿಗೆ ಬಾರದಿರುವುದಿಲ್ಲ. ಆಗ ಅವನನ್ನು ಬಹು ಸುಲಭವಾಗಿ ಹಿಡಿಯಬಹುದು.' ಎಂದು ರಾಮನಾಥನು ಯೋಚಿಸಿಕೊಂಡನು.

ಪುರುಷೋತ್ತಮನು ಯೋಚನೆಯಲ್ಲಿಯೇ ಆ ರಾತ್ರಿಯನ್ನು ಕಳೆದನು.

ಮಾರನೆಯ ದಿನ ಎಂದಿನಂತೆಯೇ ವೇಷಾಂತರದಿಂದ ಬಾಲಕೃಷ್ಣನ ಬಂಗಲೆಯ ಬಳಿಯಲ್ಲಿ ಕಾಯುತ್ತಿರಲು ಟಪಾಲಿನವನು ತನ್ನ ನಿಯಮಿತ ವೇಳೆಗೆ ಬಂದು ಬಾಲಕೃಷ್ಣನ ಹೆಸರಿಗೆ ಬಂದಿದ್ದ ಕಾಗದವನ್ನು ಆತನಿಗಿತ್ತು ಹೊರಟು ಹೋದನು.

ಪುರುಷೋತ್ತಮನು ಆಶ್ಚರ್ಯಚಕಿತನಾದನು. ರಾಮನಾಥನು ಹೇಳಿದ್ದ ವಿಷಯವೆಲ್ಲವೂ ನೆನಪಿಗೆ ಬಂದಿತು.

'ಹಣವನ್ನು ತಂದುಕೊಡಬೇಕೆಂದೇ ಕಾಗದ ಬಂದಿರುವುದು, ಬಾಲಕೃಷ್ಣನು ಹಣವನ್ನು ತೆಗೆದುಕೊಂಡು ಹೋಗದಿರುವುದಿಲ್ಲ. ಆ ವಿಷಯವಾಗಿ ಮೊದಲೇ ಮುನ್ಸೂಚನೆ ಕೊಟ್ಟಿರುವೆನು. ಈಗ ಈತನನ್ನು ಕಾಣುವುದು ಉಚಿತವಲ್ಲ. ಕಾಗದ ಬರೆದವನು ಇಲ್ಲಿಯೇ ಇರಬಹುದು. ಇಂತಹ ವೇಳೆಯಲ್ಲಿ ಡಾಕ್ಟರನ್ನು ನಾನು ಸಂಧಿಸಿದರೆ ಮುಂದಿನ ಕಾರ್ಯಕಲಾಪಗಳೆಲ್ಲವೂ ಕೆಟ್ಟು ಹೋಗುತ್ತದೆ.'

ಎಂದು ಯೋಚಿಸಿ ಸುತ್ತ ಮುತ್ತಲೂ ನೋಡಲು ಆತನ ಸಂದೇಹಕ್ಕೆ ಆಸ್ಪದನಾದ ಯಾವ ವ್ಯಕ್ತಿಯೂ ಗೋಚರಕ್ಕೆ ಕಂಡು ಬರಲಿಲ್ಲ.

ಆದರೂ ಈ ವೇಳೆಯಲ್ಲಿ ಬಾಲಕೃಷ್ಣನನ್ನು ನೋಡುವುದು ಸರಿಯಲ್ಲವೆಂದು ಕೊಂಡು ತನ್ನ ಮನೆಗೆ ಹಿಂದಿರುಗಿದನು.

ಟಪಾಲಿನವನು ತಂದುಕೊಟ್ಟ ಕಾಗದವನ್ನು ನೋಡುತ್ತಲೇ ಬಾಲಕೃಷ್ಣನು ಬೆದರಿಬೆಂಡಿನಂತಾದನು. ಸಿಂಹವನ್ನು ಕಂಡ ಹರಿಣಿಯಂತಾದನು. ಆನೆಯನ್ನು ಕಂಡ ಆಡಿನಂತಾದನು.

ಹದಿನೈದು ಸಾವಿರ ರೂಪಾಯಿಗಳಿಗೇ ಕಾಗದ ಬರೆದಿರುವನೆಂದುಕೊಂಡನು.

ಕವರನ್ನು ಅಲ್ಲಿ ಹರಿಯದೆ ತನ್ನ ರೂಮಿಗೆ ತೆಗೆದುಕೊಂಡು ಹೋದನು.

ರೂಮಿನಲ್ಲಿದ್ದ ಕುರ್ಚಿಯಲ್ಲಿ ಕುಳಿತು ನಡುಗುವ ಕೈಗಳಿಂದ ಕವರನ್ನು ಹರಿದು ನೋಡಿದನು. ಆತನೇ ಬರೆದ ಕಾಗದ.

ಏನು ಬರೆದಿರುವನೆಂದು ನೋಡಲು ಅದರಲ್ಲಿ ಈ ರೀತಿ ಬರೆದಿತ್ತು.

'ಬಾಲಕೃಷ್ಣ! ಹಿಂದಿನ ಕಾಗದದಲ್ಲಿ ಹದಿನೈದುಸಾವಿರ ರೂಪಾಯಿಗಳು ಬೇಕೆಂದು ತಿಳುಹಿಸಿದ್ದೆನು. ಅದರಂತೆ ಈಗ ಬೇಕಾಗಿದೆ. ಈ ದಿನ ರಾತ್ರಿಯೇ ನನಗೆ ತಂದುಕೊಡಬೇಕು.'

'ಆದರೆ! ಒಂದು ವಿಷಯ, ಈ ದಿನ ರಾತ್ರಿ ಜೋಗಿ ಕಣಿವೆಯ ಹತ್ತಿರ ತೆಗೆದುಕೊಂಡು ಬರಬೇಕಾದುದೇನೂ ಬೇಡ. ಈ ನಗರದಿಂದ ಸಂಪಂಗೀ ಪುರಕ್ಕೆ ಹೋಗುವ ರೋಡಿನಲ್ಲಿ ಈ ನಗರದಿಂದ ನಾಲ್ಕು ಮೈಲಿಗಳ ದೂರ ದಲ್ಲಿ ದೊಡ್ಡ ಕೆರೆಯಿರುವುದು ನಿನಗೆ ತಿಳಿದೇಇದೆ. ಆ ಕೆರೆಯ ಪಕ್ಕದಲ್ಲಿ ಚೌಡೇಶ್ವರಿ ದೇವಾಲಯವಿದೆ. ಆದೇವಸ್ಥಾನಕ್ಕೆ ಹಿಂಭಾಗದಲ್ಲಿ ಅಂದರೆ ಸುಮಾರು ಅರ್ಧ ಫರ್ಲಾಂಗ್ ದೂರದಲ್ಲಿ ಭೂತಪ್ಪನ ಗುಡಿಯಿದೆ. ನೀನು ಕಾರನ್ನು ದೇವಾಲಯದ ಬಳಿಯಲ್ಲಿ ನಿಲ್ಲಿಸಿ ಭೂತಪ್ಪನ ಗುಡಿಯ ಕಡೆ ಬರಬೇಕು.'

'ನಿಯಮ, ಕಾನೂನು, ಕಟ್ಟಳೆಗಳು ಎಂದಿನಂತೆಯೆ. ತಿಳಿದಿರು. ವ್ಯತಿರಿಕ್ತ ವಾಗಿ ನಡೆದರೆ ಮುಂದೆ ಏನಾಗುವುದೆಂದು ಅನುಭವಿಸಿ ತಿಳಿಯುವೆ.'

'ಇನ್ನೊಂದು ಮುಖ್ಯ ವಿಷಯವೇನೆಂದರೆ:–ಈ ಕಾಗದವನ್ನು ಓದಿದನಂತರ ನೀನು ನಿನ್ನ ಬಂಗಲೆಯಿಂದ ಹೊರಗೆ ಬರಕೂಡದು. ಯಾರಾದರೂ ನಿನ್ನನ್ನು ನೋಡುವುದಕ್ಕೆ ಬಂದರೆ, ಅವರು ಯಾರಾಗಿದ್ದರೂ ಸರಿ, ಅವರನ್ನು ಹೊರಗಿನಿಂದ ಹಾಗೇ ಹಿಂದಕ್ಕೆ ಕಳುಹಿಸಬೇಕು. ಈ ದಿನ ಮಾತ್ರ. ನನಗೆ ಹಣ ತಂದು ಕೊಡುವವರೆವಿಗೂ ಯಾರೊಡನೆಯೂ ಬೆರೆಯಕೂಡದು. ನಾಳೆಯದಿನ ಯಾರೊಡನೆ ಏನು ಬೇಕಾದರೂ ಹೇಳಿಕೊ, ಚಿಂತೆಯಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ ನಡೆದೆಯಾದರೆ, ಶೇಷಪ್ಪನನ್ನು ಕೊಂದದ್ದೂ, ಲೋಕನಾಥನನ್ನು ಕೊಲ್ಲಿಸಿದ್ದೂ, ಈ ಎರಡು ವಿಷಯವೂ ಪತ್ರಿಕೆಗಳಲ್ಲಿ ಪ್ರಕಟವಾಗುವುದೆಂದು ಭಾವಿಸು.'

'ಹದಿನೈದುಸಾವಿರ ರೂಪಾಯಿಗಳಿಗೆ ಕಡಿಮೆ ತಂದರೆ ನಾಳೆಯ ದಿನವೇ ನಿನ್ನ ಅವಸ್ಥೆಯೇನಾಗುವುದೆಂದು ಈಗ ಹೇಳಿ ಫಲವಿಲ್ಲ.'

'ಮರೆಯಬೇಡ. ಎಚ್ಚರಿಕೆ.'

ಇತಿ ನಿನ್ನ
**'ಚಿರಪರಿಚಿತ.'**

ಕಾಗದವನ್ನು ಓದಿ ಬಾಲಕೃಷ್ಣನು ದಿಗ್ಭ್ರಾಂತನಂತಾದನು. ಅವನಿಗರಿವಿಲ್ಲದೆಯೇ ಅವನ ಕೈಯ್ಯಿಂದ ಕಾಗದವು ಜಾರಿ ಕೆಳಗೆ ಬಿದ್ದಿತು.

ತಾನಿನ್ನು ಈ ಜಗತ್ತಿನಲ್ಲಿ ಬದುಕುವ ಹಾಗೆಯೇ ಇಲ್ಲವೆಂದುಕೊಂಡನು.

'ಪುರುಷೋತ್ತಮನಿಂದಲೂ ಈ ವ್ಯಕ್ತಿ ಯಾರೆಂಬುದನ್ನು ಪತ್ತೇಮಾಡಿ ಹಿಡಿಯಲು ಸಾಧ್ಯವಾಗಲಾರದು. ಅನ್ಯಾಯವಾಗಿ ಆತನ ಬಳಿಗೆ ಹೋಗಿ ಕೆಟ್ಟೆನು. ಮುಂದೆ ಕಾಗದ ಬಂದರೆ ತನಗೆ ತಿಳಿಸಬಾರದೆಂದು ಹೇಳಿರುವನು. ಈಗ ಆತನಲ್ಲಿಗೆ ಹೋಗುವ ಹಾಗೆಯೇ ಇಲ್ಲ. ಆತನು ಕಳ್ಳನನ್ನು ಯಾವರೀತಿ ಹಿಡಿಯುವನೋ ತಿಳಿಯದಾಗಿದೆ. ಹದಿನೈದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಹೋಗಿ ಕೊಡದೆ ಇದ್ದರೆ ನಾಳೆಯಿಂದ ಈ ಜಗತ್ತಿನಲ್ಲಿ ಬಾಳುವ ಹಾಗೆಯೇ ಇಲ್ಲ. ಈ ನನ್ನ ಅವಸ್ಥೆಗೆ ಸರಸ್ವತಿಯೇ ಕಾರಣಳು. ಆದುದಾಗಲಿ, ಈ ದಿನ ರಾತ್ರಿ ಐದುಸಾವಿರ ರೂಪಾಯಿಗಳನ್ನು ಮಾತ್ರ ತೆಗೆದುಕೊಂಡು ಹೋಗು

ವೆನು. ಮುಂದೆ ನನ್ನಿಂದ ಹಣ ಕೊಡಲು ಸಾಧ್ಯವಿಲ್ಲ.' ಎಂಬುದಾಗಿ ಕಾಗದ ವನ್ನು ಬರೆದು ನೋಟುಗಳ ಮಧ್ಯೆ ಆ ಕಾಗದವನ್ನು ಇಡುವೆನು. ಮುಂದೆ ದೇವರಿದ್ದಾನೆ.'

ಎಂಬುದಾಗಿ ತೀರ್ಮಾನ ಮಾಡಿಕೊಂಡು ಐದುಸಾವಿರ ರೂಪಾಯಿಗಳನ್ನು ತೆಗೆದುಕೊಂಡು, ಚೀಲದಲ್ಲಿರಿಸಿ ತಾನು ನಿರ್ಧರಿಸಿಕೊಂಡಂತೆ ಕಾಗದವನ್ನು ಬರೆದು ಆ ನೋಟುಗಳ ಮಧ್ಯದಲ್ಲಿಟ್ಟನು.

ನಾಳೆಯ ದಿನ ಪುರುಷೋತ್ತಮನೊಡನೆ ವಿಷಯವನ್ನು ಹೇಳಿದಾಗ ಕಾಗದ ತೋರಿಸಬೇಕಾಗುತ್ತದೆ. ಇದರಲ್ಲಿ ಶೇಷಪ್ಪ, ಲೋಕನಾಥರ ವಿಷಯವನ್ನು ಸೇರಿಸಿರುವುದರಿಂದ ತನ್ನ ಗುಟ್ಟು ರಟ್ಟಾಗುವುದೆಂದು ಭಾವಿಸಿ ಅವರಿಬ್ಬರ ವಿಷಯ ವನ್ನು ಬಿಟ್ಟು ಉಳಿದ ವಿಷಯವನ್ನು ಯಥಾಸ್ಥಿತಿಯಲ್ಲಿ ಆ ಅಕ್ಷರಗಳನ್ನು ಹೋಲು ವಂತೆಯೇ ಬರೆದಿಟ್ಟುಕೊಂಡು, ತನಗೆ ಬಂದ ಕಾಗದವನ್ನು ಪೆಟ್ಟಿಗೆಯಲ್ಲಿ ಭದ್ರ ಪಡಿಸಿಟ್ಟನು.

ಆತನ ಮನಸ್ಸಿಗೆ ಕೊಂಚವಮಾತ್ರವೂ ಶಾಂತಿಯಿಲ್ಲ. ಬಂಗಲೆಯಿಂದ ಹೊರಗೆ ಹೋಗುವುದಕ್ಕೆ ಭಯ. ಹಿಂದೆ ತನಗೆ ಬಂದಿದ್ದ ಕಾಗದದ ವಿಷಯವನ್ನು ಪುರುಷೋತ್ತಮನೊಡನೆ ಹೇಳದೆ ಇದ್ದರೂ ಆತನು ಹೇಗೋ ಪತ್ತೇಮಾಡಿ ತಿಳಿದುಕೊಂಡನು. ಬಹುಶಃ ಟಪಾಲಿನವನ ಸಹಾಯದಿಂದ ತಿಳಿದುಕೊಂಡಿರ ಬಹುದೋ ಏನೋ. ಈಗಲೂ ಸಹ ಅದೇ ರೀತಿ ತಿಳಿದಿರಬಹುದು. ಆಗಲಿ, ಆತನ ಸಾಮಾರ್ಥ್ಯವೇನೆಂಬುದು ಈಗ ತಿಳಿಯುತ್ತದೆ. ಎಂದು ಬಾಲಕೃಷ್ಣನು ಆಲೋಚಿಸಿಕೊಂಡನು.

ಆದರೂ ಆತನ ಮನಸ್ಸಿಗೆ ಕೊಂಚ ಮಾತ್ರವೂ ನೆಮ್ಮದಿಯಿಲ್ಲವಾಯಿತು.

ಬಾಲಕೃಷ್ಣನ ಬಂಗಲೆಯಿಂದ ಹಿಂದಿರುಗಿದ ಪುರುಷೋತ್ತಮನು ರಾಮ ನಾಥನು ಬರುವವರೆವಿಗೂ ಕಾಯುತ್ತಿದ್ದು ಆತನು ಬಂದನಂತರ ವಿಷಯವನ್ನು ಹೇಳಿ, ತಮಗೆ ಬೇಕಾದ ಅನುಕೂಲತೆಗಳನ್ನು ಮಾಡಿಕೊಂಡು ಸಾಯಂಕಾಲ ವಾಗುವುದನ್ನೇ ನಿರೀಕ್ಷಿಸುತ್ತಿದ್ದರು.

ಭಾಸ್ಕರದೇವನು ಮೇರು ಪರ್ವತದ ಮರೆಯಲ್ಲಿ ಅಡಗುತ್ತಲೇ ಪತ್ತೇದಾರ ರಿಬ್ಬರೂ ಜೋಗೀ ಕಣಿವೆಯ ಬಳಿಗೆ ನಡೆದುಕೊಂಡೇ ಹೋಗಿ, ಕಾಳಿಕಾ ದೇವಾ

ಲಯವನ್ನು ಸೇರಿ ಅಲ್ಲಿ ತಮಗೆ ಅನುಕೂಲವಾದ ಸ್ಥಳದಲ್ಲಿ ಅಡಗಿಕೊಂಡು ಕುಳಿತರು.

ಈ ರಾತ್ರಿ ಬಾಲಕೃಷ್ಣನ ಚಿರಪರಿಚಿತ ವ್ಯಕ್ತಿಯು ತಮ್ಮ ಕೈಗೆ ಸಿಕ್ಕಿ ಬೀಳುವನೆಂದು ಅವರಿಬ್ಬರೂ ನಿರ್ಧರಮಾಡಿಕೊಂಡಿದ್ದರು.

## ೨೨

ರಾತ್ರಿ ಹನ್ನೊಂದು ಘಂಟೆಯವರೆವಿಗೂ ನಿದ್ದೆಯಿಲ್ಲದೆ ಬಾಲಕೃಷ್ಣನು ತನ್ನ ರೂಮಿನಲ್ಲಿ ಏಕಾಂಗಿಯೇ ಕುಳಿತುಕೊಂಡಿದ್ದು ಬಳಿಕ ಹಣವನ್ನು ತೆಗೆದುಕೊಂಡು ಹೊರಗೆ ಬಂದನು. ನಗರದಲ್ಲಿ ನಿಶ್ಯಬ್ದತೆಯು ಮೂಡಿದ್ದಿತು.

ಬಾಲಕೃಷ್ಣನು ಎಂದಿನಂತೆ ಕಾರಿನಲ್ಲಿ ಕುಳಿತು ತಾನೇ ಡ್ರೈವ್‌ಮಾಡಿ ಕೊಂಡು ಸಂಪಂಗೀಪುರದ ಮಾರ್ಗವಾಗಿ ಹೊರಟನು.

ಕಾಲು ಘಂಟೆಯೊಳಗಾಗಿ ಕಾರು ಚೌಡೇಶ್ವರಿ ದೇವಾಲಯದ ಬಳಿಗೆ ಬಂದಿತು.

ಆ ದೇವಾಲಯದ ಸಮೀಪದಲ್ಲಿ ಕಾರನ್ನು ನಿಲ್ಲಿಸಿ ಹಿಂದಿನ ನಿಯಮದಂತೆ ಕೈಗಳನ್ನು ಮೇಲಕ್ಕೆ ಎತ್ತಿಕೊಂಡು ಭೂತಪ್ಪನ ಗುಡಿಯ ಕಡೆ ಹೊರಟನು.

ಅರ್ಧ ದೂರ ದಾರಿಯನ್ನು ನಡೆಯುತ್ತಲೇ ಭೂತಪ್ಪನ ಗುಡಿಯ ಸಮೀಪ ದಿಂದ ಕೆಂಪು ಲೈಟು ಗೋಚರಿಸಿತು.

ಬಾಲಕೃಷ್ಣನು ಅಲ್ಲಿಯೇ ನಿಂತನು.

ಕಾರ್ಗತ್ತಲೂ ಎಲ್ಲಾ ಕಡೆಗಳಲ್ಲಿಯೂ ಕವಿದಿದ್ದುದರಿಂದ ಯಾವ ವಸ್ತುವೂ ಸರಿಯಾಗಿ ಕಾಣುತ್ತಿರಲಿಲ್ಲ.

ಆತನು ಅಲ್ಲಿ ನಿಂತು ಮೂರು ನಿಮಿಷದೊಳಗಾಗಿ ಕೆಂಪು ಲೈಟು ಆರಿತು.

ಆತನ ಜೇಬಿನಲ್ಲಿದ್ದ ಹಣವನ್ನು ಆ ಮುಸುಕಿನ ವ್ಯಕ್ತಿಯು ತೆಗೆದುಕೊಳ್ಳು ವವರೆಗೆ ಕಾರ್ಯಕಲಾಪವೆಲ್ಲಾ ಹಿಂದಿನಂತೆಯೇ ನಡೆಯಿತು. ಬಾಲಕೃಷ್ಣನಿಗೆ ಆ ವ್ಯಕ್ತಿಯ ಮುಖವನ್ನು ನೋಡಲಾಗಲಿಲ್ಲ.

ಹಣ ತೆಗೆದುಕೊಂಡು ಹೋದ ಹತ್ತು ನಿಮಿಷಗಳನಂತರ ಕೆಂಪು ಲೈಟು ಕಾಣಿಸಿದ ಜಾಗದಿಂದ ಹಸುರು ಲೈಟು ಗೋಚರಿಸಿತು.

ಬಾಲಕೃಷ್ಣನು ಹಾಗೇ ಕೈಗಳನ್ನು ಎತ್ತಿಕೊಂಡು ಕಾರಿನ ಬಳಿಗೆ ಬಂದನು.

ಅಲ್ಲಿಗೆ ಬಂದನಂತರ ಪುರುಷೋತ್ತಮನ ಜ್ಞಾಪಕವುಂಟಾಯಿತು. 'ಆ ಪತ್ತೇದಾರನನ್ನು ನಂಬಿಕೊಂಡರೆ ಯಾವ ಕಾರ್ಯವೂ ನಡೆಯುವುದಿಲ್ಲ. ನನಗೆ ತಿಳಿಸದೆ ಹಣ ತೆಗೆದುಕೊಂಡು ಹೋಗಿ ಕೊಡಬೇಕೆಂದು ಹೇಳಿದ್ದನು. ಈಗ ಕೊಟ್ಟಿದ್ದಾಯಿತು. ಆತನು ಸಾಧಿಸಿದುದಾದರೂ ಏನು? ಈ ಕಳ್ಳನ ಮುಂದೆ ಆತನ ಚಮತ್ಕಾರವೇನೂ ನಡೆಯದು. ಒಟ್ಟಿನಲ್ಲಿ ನನ್ನ ಗ್ರಹಚಾರವು ಸದ್ಯಕ್ಕೆ ಪರಿಹಾರವಾಗುವ ಹಾಗೆ ತೋರುತ್ತಿಲ್ಲ ಈಗ ನೇರವಾಗಿ ಪುರುಷೋತ್ತಮನಲ್ಲಿಗೆ ಹೋಗಿ ನಡೆದ ವಿಷಯುವನ್ನು ಹೇಳುವೆನು. ಹಣವನ್ನು ಕೊಟ್ಟುದಾಯಿತು. ಈಗ ಯಾರನ್ನು ಬೇಕಾದರೂ ಸಂಧಿಸಬಹುದು.' ಎಂಬುದಾಗಿ ಯೋಚಿಸಿಕೊಂಡು ಸ್ಟೇರಿಂಗ್ ಮುಂದೆ ಕುಳಿತು ಕಾರನ್ನು ಸ್ಟಾರ್ಟ್‌ಮಾಡಿ ಸೆಕೆಂಡ್ ಗೇರಿಗೆ ಹಾಕಿ 'ಮೂ' ಮಾಡಿದನು.

ಕಾಲು ಘಂಟೆಯೊಳಗಾಗಿ ಕಾರನ್ನು ಪುರುಷೋತ್ತಮನ ಮನೆಯ ಮುಂದೆ ತಂದು ನಿಲ್ಲಿಸಿ, ಹಾರ್ನ್ ಶಬ್ದ ಮಾಡಿದನು.

ಮನೆಯೊಳಗೆ ಮಲಗಿದ್ದ ವಿಜಯಕೇಸರಿಯು ಬಾಗಿಲು ತೆಗೆದುಕೊಂಡು ಹೊರಗೆ ಬಂದು ಬಂದವರಾರೆಂದು ಕೇಳಿದನು.

ಬಾಲಕೃಷ್ಣನು ಕಾರಿನಿಂದ ಕೆಳಗಿಳಿಯದೆ—

"ನಾನು! ಡಾಕ್ಟರ್ ಬಾಲಕೃಷ್ಣ." ಎಂದು ಹೇಳಿದನು.

"ಈ ವೇಳೆಯಲ್ಲಿ ಏಕೆ ಬಂದಿರುವಿರಿ?"

"ನಿಮ್ಮ ತಂದೆಯವರನ್ನು ನೋಡಬೇಕಿತ್ತು. ಇರುವರೇ?"

"ಇಲ್ಲ."

"ಎಲ್ಲಿಗೆ ಹೋಗಿರುವರು?"

"ನನಗೆ ತಿಳಿಯದು."

"ಯಾವಾಗ ಹೋದರು?"

"ಸುಮಾರು ಆರು ಘಂಟೆಯ ವೇಳೆಯಿರಬಹುದು."

"ಅವರೊಬ್ಬರೇ ಹೋದರೇ ?"

"ಇಲ್ಲಾ ! ಅವರ ಮಿತ್ರರೊಡಗೂಡಿ ಹೋದರು."

"ಎಂದು ಬರುವರು ?"

"ತಿಳಿಯದು. ಅವರನ್ನು ಈಗಲೇ ನೋಡಬೇಕಿತ್ತೇ ?"

"ನೋಡಬೇಕಿತ್ತು. ಆದರೇ! ಅವರಿಲ್ಲವೆಂದಮೇಲೆ ನಾನು ಮಾಡುವುದೇನಿದೆ? ಚಿಂತೆಯಿಲ್ಲ. ಬೆಳಿಗ್ಗೆ ಬಂದು ಅವರನ್ನು ನೋಡುವೆನು. ಅವರು ಬಂದನಂತರ ನಾನು ಬಂದಿದ್ದೆನೆಂದು ಹೇಳಿ."

"ಹೇಳುವೆನು."

ಬಾಲಕೃಷ್ಣನು ಕಾರನ್ನು ಸ್ಟಾರ್ಟ್‌ಮಾಡಿ ತನ್ನ ಬಂಗಲೆಯ ಕಡೆ ಓಡಿಸಿದನು.

ಗೇಟಿನ ಮುಂದೆ ಕಾರನ್ನು ನಿಲ್ಲಿಸಿ, ಗೇಟನ್ನೂ, ಗ್ಯಾರೇಜಿನ ಬಾಗಿಲನ್ನೂ ತೆಗೆದು, ಬಳಿಕ ಕಾರನ್ನು ಗ್ಯಾರೇಜಿನಲ್ಲಿ ಬಿಟ್ಟು ಬಾಗಿಲುಗಳನ್ನು ಹಾಕಿ, ಬಂಗಲೆಯ ಬಾಗಿಲನ್ನು ತಟ್ಟಲು ರಂಗಮ್ಮನು ಬಾಗಿಲನ್ನು ತೆಗೆದಳು.

ಮನಶ್ಶಾಂತಿಯಿಲ್ಲದ ಬಾಲಕೃಷ್ಣನು ಮಹಡಿಯ ಮೇಲೆ ಹೋಗಿ ರೂಮಿನಲ್ಲಿ ಕುಳಿತನು.

ಹದಿನೈದು ಸಾವಿರ ರೂಪಾಯಿಗಳಿಗೆ ಐದು ಸಾವಿರ ರೂಪಾಯಿಗಳನ್ನು ಕೊಟ್ಟಿರುವುದರಿಂದ, ನಾಳೆಯ ದಿನ ತನ್ನ ಅವಸ್ಥೆಯೇನಾಗುವುದೋ, ಎಂಬ ಭೀತಿಯುಂಟಾಯಿತು.

ಪುರುಷೋತ್ತಮನು ಆತನ ಮನೆಯಲಿಲ್ಲದಿರುವುದು ಸೋಜಿಗವನ್ನುಂಟು ಮಾಡಿತ್ತು.

ಅವರಿಬ್ಬರೂ ಸಾಯಂಕಾಲ ಆರು ಘಂಟೆಯ ವೇಳೆಯಲ್ಲಿ ಎಲ್ಲಿಗೆ ಹೋಗಿರಬಹುದೆಂಬ ಬಗ್ಗೆ ಎಷ್ಟು ಹೊತ್ತು ಯೋಚಿಸಿದರೂ ಬಗೆ ಹರಿಯಲಿಲ್ಲ.

ನಾಳೆಯ ದಿನ ಏನು ವಿಷಯವಿದ್ದರೂ ತಿಳಿಯುವುದೆಂದು ಹಾಗೇ ಹಾಸಿಗೆಯ ಮೇಲೆ ಮಲಗಿಕೊಂಡನು.

ಯೋಚನೆಯೆಂಬ ಮಹಾಶರಧಿಯಲ್ಲಿ ಮುಳುಗಿದ್ದುದರಿಂದ ನಿದ್ರಾದೇವಿಯು ಕೂಡಲೇ ಅವನನ್ನು ಸಮೀಪಿಸಲಿಲ್ಲ.

ಜೋಗೀ ಕಣಿವೆಯ ಬಳಿಯಲ್ಲಿ, ಕಾಳಿಕಾದೇವಾಲಯದಲ್ಲಿ ಅಡಗಿ ಕುಳಿತಿದ್ದ ಪತ್ತೇದಾರರು ಕಾದು, ಕಾದು ಬೇಸತ್ತು ಹೋದರು.

ಈಗ ಬರಬಹುದು, ಆಗ ಬರಬಹುದು ಎಂದು ಬೆಳಗಿನ ಝಾವ ನಾಲ್ಕು ಘಂಟೆಯವರೆವಿಗೂ ಆ ನಿರ್ಜನವಾದ ಅರಣ್ಯದಲ್ಲಿ ಕಾದು ನೋಡಿದರು.

ಆ ನಂತರ ಪುರುಷೋತ್ತಮನಿಗೆ ಏನೋ ಒಂದು ವಿಧದಲ್ಲಿ ಸಂದೇಹವುಂಟಾಯಿತು. ಏನೋ ಪ್ರಮಾದವು ತಮಗರಿಯದಂತೆಯೇ ನಡೆದಿದೆಯೆಂದು ಭಾವಿಸಿಕೊಂಡನು.

'ಬೇರೆ ಯಾರೋ ನೆಂಟರಿಷ್ಟರಿಂದ ಬಾಲಕೃಷ್ಣನಿಗೆ ಕಾಗದ ಬಂದಿರಬಹುದು. ನಾವು ವಿನಾ ಕಾರಣ ತೊಂದರೆಪಟ್ಟೆವು' ಎಂದು ರಾಮನಾಥನು ಊಹಿಸಿಕೊಂಡನು.

ಇನ್ನು ಕಾಯುತ್ತಾ ಕುಳಿತುಕೊಳ್ಳುವುದು ನಿಷ್ಪ್ರಯೋಜನವೆಂದು ಭಾವಿಸಿ ಇಬ್ಬರೂ ಅಲ್ಲಿಂದ ಹಿಂದಿರುಗಿದರು.

ನಗರವನ್ನು ತಲುಪುವ ವೇಳೆಗೆ ಆರುಘಂಟೆಯ ವೇಳೆಯಾಗಿತ್ತು.

ಇಬ್ಬರೂ ಪುರುಷೋತ್ತಮನ ಮನೆಗೆ ಬಂದರು.

ಬಾಲಕೃಷ್ಣನನ್ನು ಕಂಡು ಮಾತನಾಡಬೇಕೆಂಬ ಅಭಿಲಾಷೆಯು ಪುರುಷೋತ್ತಮನ ಮನದಲ್ಲಿತ್ತು.

ಆ ವಿಷಯವಾಗಿಯೇ ಇಬ್ಬರೂ ಮಾತನಾಡುತ್ತಿರಲು ಬಾಲಕೃಷ್ಣನು ತನ್ನ ಕಾರಿನಲ್ಲಿ ಅಲ್ಲಿಗೆ ಬಂದನು.

ಆತನು ಕಾರನ್ನು ಹೊರಗೆ ನಿಲ್ಲಿಸಿ, ಮನೆಯೊಳಗೆ ಪ್ರವೇಶಿಸಿ, ಪತ್ತೇದಾರರ ಎದುರಿಗಿದ್ದ ಖುರ್ಚಿಯಲ್ಲಿ ಕುಳಿತನು. ಅವನ ಮುಖವನ್ನು ನೋಡಿ ಏನೋ ಪ್ರಮಾದವು ನಡೆದಿದೆಯೆಂದು ಪುರುಷೋತ್ತಮನು ಊಹಿಸಿಕೊಂಡನು.

ಬಾಲಕೃಷ್ಣನು ತನಗೆ ಕಾಗದ ಬಂದಲಾಗಾಯ್ತು ರಾತ್ರಿ ಹಣವನ್ನಿತ್ತು

ತನ್ನ ಬಂಗಲೆಗೆ ಹಿಂದಿರುಗುವವರೆವಿಗೆ ನಡೆದ ವಿಷಯವನ್ನೆಲ್ಲಾ ಹೇಳಲು ಪತ್ತೇದಾರರಿಬ್ಬರೂ ದಿಗ್ಭ್ರಮರಂತಾದರು.

"ಆ ಕಾಗದವು ನಿಮ್ಮ ಬಳಿಯಲ್ಲಿ ಇರುವುದೇ ?"

—ಎಂದು ಪುರುಷೋತ್ತಮನು ಕೇಳಲು ಡಾಕ್ಟರನು—

"ಇದೆ! ಹಿಂದೆ ಬರೆದಿದ್ದ ಕಾಗದವನ್ನೂ ತಂದಿರುವೆನು. ತೆಗೆದುಕೊಳ್ಳಿ." ಎಂದು ಹೇಳಿ ಮೊದಲು ಬಂದಿದ್ದ ಕಾಗದವನ್ನೂ, ತಾನು ರಚಿಸಿದ್ದ ಕೃತಕ ಪತ್ರವನ್ನೂ ಪುರುಷೋತ್ತಮನ ಕೈಗೆ ಕೊಟ್ಟನು.

ಪುರುಷೋತ್ತಮನು ಎರಡು ಕಾಗದಗಳ ಅಕ್ಷರಗಳನ್ನು ಹೋಲಿಸಿ ನೋಡಿದನು. ವ್ಯತ್ಯಾಸವಿತ್ತು. ಹಿಂದಿನದಿನ ಬಂದಿದ್ದ ಕಾಗದವನ್ನು ಮೊದಲು ಓದಿ ಬಳಿಕ ಅದಕ್ಕೆ ಹಿಂದೆ ಬಂದಿದ್ದ ಕಾಗದವನ್ನು ಓದಿದನು.

ಅದನ್ನು ಓದಿದನಂತರ ತನ್ನ ತಪ್ಪಿನ ಅರಿವು ತಿಳಿಯಿತು.

"ರಾಮನಾಥ! ನಾವೊಂದು ತಪ್ಪು ಕೆಲಸ ಮಾಡಿಕೊಂಡೆವು."

—ಎಂದು ಹೇಳಲು, ವಿಸ್ಮಿತನಾದ ರಾಮನಾಥನು—

"ಏನು ತಪ್ಪು ಕೆಲಸ ?" ಎಂದು ಕೇಳಿದನು.

"ಈ ಹಿಂದೆ ಬರೆದ ಕಾಗದದಲ್ಲಿ 'ಹದಿನೈದುಸಾವಿರ ರೂಪಾಯಿಗಳು ಯಾವಾಗ ಬೇಕೆಂಬುದನ್ನೂ ಮತ್ತು ಆಗ ನಡೆದುಕೊಳ್ಳಬೇಕಾದ ಕಾನೂನು, ಕರ್ತವ್ಯಗಳನ್ನೂ ಮುಂದಿನ ಕಾಗದದಲ್ಲಿ ತಿಳಿಸುವೆನು' ಎಂದು ಬರೆದಿದೆ. ಈ ಕಾಗದವು ಈ ಡಾಕ್ಟರಲ್ಲಿಯೇ ಉಳಿದುಕೊಂಡಿದ್ದುದರಿಂದ ನಾವು ಜೋಗೀ ಕಣಿವೆಯ ಬಳಿಗೆ ಹೋಗಿ ವಿನಾ ಕಾರಣ ಬೆಳಗಾಗುವವರೆವಿಗೂ ಕಾಯಬೇಕಾಯಿತು. ಈ ಕಾಗದವು ಮೊದಲೇ ನಮ್ಮ ಕೈಗೆ ಸಿಕ್ಕಿದ್ದಿದ್ದರೆ ಮುಂದಿನ ಕಾರ್ಯವೇ ಬೇರೆಯಾಗುತ್ತಿತ್ತು."

ಪುರುಷೋತ್ತಮನ ಮಾತಿಗೆ ವಿಸ್ಮಿತನಾದ ಬಾಲಕೃಷ್ಣನು—

"ಏನೂ! ನೀವು ಜೋಗಿಕಣಿವೆಯ ಬಳಿಗೆ ಹೋಗಿದ್ದಿರಾ?" ಎಂದು ಕೇಳಿದನು.

ಪುರುಷೋತ್ತಮನು ತಾವು ಹೋಗಿ ಕಾಯ್ದು ಹಿಂತಿರುಗಿದುದನ್ನು ಹೇಳಲು ಬಾಲಕೃಷ್ಣನು ಚಿತ್ರ ಪ್ರತಿಮೆಯಂತಾನು.

"ಪತ್ತೇದಾರರೇ! ನೆನ್ನೆಯದಿನವೇ ನೀವು ಅಲ್ಲಿಗೆ ಹೋಗಿ ಕಾಯುವ ಉದ್ದೇಶವೇನು?"

ಪುರುಷೋತ್ತಮನು ಸಹಜವಾಗಿಯೇ—

"ನಮ್ಮ ಉದ್ದೇಶವು ಏನಾದರೂ ಆಗಿರಲಿ, ನಡೆಯುವವನು ಎಡವುವುದು ಸಹಜವೆ. ನೀವು ಹಣ ಕಳೆದುಕೊಂಡಿದುದಕ್ಕಾಗಿ ಖಿನ್ನರಾಗಬೇಡಿ. ಈ ವ್ಯವಹಾರವು ಇಲ್ಲಿಗೇ ಮುಕ್ತಾಯವಾಗುವುದಿಲ್ಲ. ಮುಂದೆ ನಿಮಗೆ ಕಾಗದವು ಬಂದೇ ಬರುತ್ತದೆ. ನಾವು ಯಾವ ಬಗೆಯಲ್ಲಾದರೂ ಆ ವ್ಯಕ್ತಿಯನ್ನು ಹಿಡಿಯುವೆವು." ಎಂದು ಹೇಳಿದನು.

"ಕಾಗದ ಬರುವುದೆಂದು ಹೇಗೆ ಹೇಳುವಿರಿ?"

"ಆ ವ್ಯಕ್ತಿಯು ಕೇಳಿದುದು ಹದಿನೈದುಸಾವಿರ, ನೀವು ತೆಗೆದುಕೊಂಡು ಹೋಗಿ ಕೊಟ್ಟಿರುವುದು ಐದುಸಾವಿರ ರೂಪಾಯಿಗಳು. ಆ ಪ್ರಯುಕ್ತ ಮುಂದೆ ಕಾಗದ ಬಂದೇ ಬರುತ್ತದೆ. ನೀವು ನೆನ್ನೆಯಂತೆಯೇ ನಮ್ಮಲ್ಲಿಗೆ ಬರದೆ ಹಣವನ್ನು ತೆಗೆದುಕೊಂಡು ಹೋಗಿ ಕೊಟ್ಟು ಬನ್ನಿ. ಕಿಂಚಿತ್ತೂ ಯೋಚಿಸಬೇಡಿ. ನಿಮ್ಮ ಪ್ರಾಣಕ್ಕೆ ಧಕ್ಕೆಯೇನೂ ಸಂಭವಿಸುವುದಿಲ್ಲ. ಆ ವ್ಯಕ್ತಿಯನ್ನು ಹಿಡಿದ ನಂತರ ನಿಮ್ಮ ಹಣವು ನಿಮ್ಮ ವಶವಾಗುವುದೆಂದು ಸಂದೇಹವಿಲ್ಲದೆ ಹೇಳುವೆನು."

ಬಾಲಕೃಷ್ಣನು ಒಪ್ಪಿ ತಲೆಯಾಡಿಸಿದನು.

ಪುರುಷೋತ್ತಮನು ಪುನಃ—

"ಈ ವಿಷಯವನ್ನು ಯಾರಲ್ಲಿಯೂ ತಿಳಿಸಬೇಡಿ. ನಿಮ್ಮಲ್ಲಿಯೇ ಇರಲಿ." ಎಂದು ಹೇಳಿದನು.

ಬಾಲಕೃಷ್ಣನು ಆಗಲೂ ಸಹ ಹಿಂದಿನಂತೆಯೇ ಒಪ್ಪಿ ತಲೆಯಾಡಿಸಿದನು.

ಹಿಂದಿನ ದಿನ ರಾತ್ರಿಯೆಲ್ಲಾ ನಿದ್ದೆಯಿಲ್ಲದೆ, ಘೋರಾರಣ್ಯದಲ್ಲಿ ರಾತ್ರಿಯನ್ನು ಕಳೆದ ಪ್ರಯುಕ್ತ ಪತ್ತೇದಾರರಿಬ್ಬರಿಗೂ ವಿಶ್ರಾಂತಿಯು ಬೇಕಿತ್ತು.

ಬಾಲಕೃಷ್ಣನಿಗೆ ಇನ್ನೊಂದು ಸಾರಿ ಎಚ್ಚರಿಕೆಯಿಾಯಲು, ಆತನು ಆಗ ಲೆಂಬಂತೆ ತಲೆಯಾಡಿಸಿ ಅವರಿಂದ ಬೀಳ್ಕೊಂಡನು.

ಪುರುಷೋತ್ತಮನು ಯೋಚನೆಯೆಂಬ ಮಹಾಶರಧಿಯಲ್ಲಿ ಮುಳುಗಿ, ಆ ವ್ಯಕ್ತಿಯನ್ನು ಯಾವ ಬಗೆಯಲ್ಲಿ ಹಿಡಿಯಬೇಕೆಂಬುದರ ಬಗ್ಗೆ ಆಲೋಚಿಸಿ ಕೊಂಡನು.

ವಿಶ್ರಾಂತಿಯು ಅತ್ಯಾವಶ್ಯಕವಾಗಿ ಬೇಕಾಗಿದ್ದುದರಿಂದ ಆ ದಿನ ಯಾವ ಕಾರ್ಯಕಲಾಪಕ್ಕೂ ಹೋಗದೆ ಮಂಚಗಳ ಮೇಲೆ ಮಲಗಿಕೊಳ್ಳುತ್ತಲೇ ನಿದ್ರಾ ದೇವಿಯು ಅವರಿಬ್ಬರ ಮೇಲೂ ತನ್ನ ಸೆರಗನ್ನು ಹಾಸಿದಳು.

ಪತ್ತೇದಾರರಿಂದ ಬೀಳ್ಕೊಂಡ ಬಾಲಕೃಷ್ಣನು 'ಪುರುಷೋತ್ತಮನು ಮುಸು ಕಿನ ವ್ಯಕ್ತಿಯನ್ನು ಹಿಡಿಯುವನೇ ? ಇಲ್ಲವೇ ?' ಎಂಬ ಸಂಶಯಕ್ಕೊಳಗಾದನು.

ಆತನ ಆತ್ಮಕ್ಕೆ ಸ್ವಲ್ಪ ಮಾತ್ರವೂ ಶಾಂತಿಯಿಲ್ಲವಾಯಿತು.



ನಿರೀಕ್ಷಿಸಿ ! ನಿರೀಕ್ಷಿಸಿ !!!

## ಓದಲು ಮರೆಯದಿರಿ !!

## ಮೋಹನ್ ಪಬ್ಲಿಕೇಷನ್ಸ್ ರವರ

ಪ್ರಪ್ರಥಮ ಅಮೋಘ ಕಾಣಿಕೆ.

ಮಹಾಸಾಧ್ವಿ ಸುಗುಣಮ್ಮ, ನಪುಂಸಕ ವಾಸುದೇವ, ಮಾಯಾವಿ ಪದ್ಮಿನಿ, ದಳ್ಳಾಳಿ ವೀರಪ್ಪ, ಛಲಗಾರ್ತಿ ಕಾಳಮ್ಮ, ಏಜೆಂಟ್ ಗುಂಡೂರಾಯ, ಕಂಪೋಜಿಟರ್ ನಂಜುಂಡಯ್ಯ, ದ್ರೋಹಿ ರಂಗಾಚಾರಿ, ಉದಾರ ಬುದ್ಧಿಯ ಮಲ್ಲಯ್ಯ, ವಾಗ್ವೈಖರಿಯ ಶಾಸ್ತ್ರಿ, ಮುಗ್ಧ ಶೇಷಗಿರಿ, ಕಳ್ಳಪೂಜಾರಿ, ಚೋರಗ್ರಹಣ ತಂತ್ರ ನಿಪುಣ ಪುರುಷೋತ್ತಮ, ಇವರೆಲ್ಲ ಕಾರ್ಯ ಕೌಶಲ್ಯಗಳಿಂದ ಕೂಡಿದ ಪ್ರಣಯ ರಸಭರಿತ ಮನೋಹರವಾದ ಪತ್ತೇದಾರಿ ಕಾದಂಬರಿಯೇ

**ಎನ್. ನರಸಿಂಹಯ್ಯನವರಿಂದ**

ವಿರಚಿತವಾದ

# "ಪಂಚರಂಗಿ ಪದ್ಮಿನಿ"

ಪುರುಷೋತ್ತಮನ ಐವತ್ತನೆಯ ಸಾಹಸದ

ಸ್ವರ್ಣಮಹೋತ್ಸವ ಕಾಣಿಕೆ.

**ಪಂಚವರ್ಣ ರಕ್ಷಾಕವಚ**

ಸುಮಾರು ೩೦೦ ಪುಟಗಳು ಬೆಲೆ ೨-೦-೦

**ಟಪಾಲು ಹಾಸಲು ಪ್ರತ್ಯೇಕ**

ಅಧಿಕೃತ ಮಾರಾಟಗಾರರು

**'ಕಥಾವಳಿ' ಪಬ್ಲಿಕೇಷನ್ಸ್,**

F. 28, ಓ. ಟಿ. ಸಿ. ರೋಡ್. ಬೆಂಗಳೂರು ೨.